ಸಂಪುಟ: 05 ಸಂಚಿಕೆ: 113 ಪುಟಗಳು: 08 ಭಾನುವಾರ 06 ಜುಲೈ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5
ಉದಯ ವಾಹಿನಿ
UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ನನ್ನನ್ನು ಸಂಕೋಲೆಯಲ್ಲಿ ಬಂಧಿಸಿಡಬಹುದು, ಹಿಂಸಿಸಬಹುದು, ಅಷ್ಟೆ ಯಾಕೆ ನನ್ನ ಈ ದೇಹವನ್ನು ನಾಶಪಡಿಸಬಹುದು. ಆದರೆ, ಯಾವತ್ತಿಗೂ ನನ್ನ ಆತ್ಮಬಲವನ್ನು ಬಂಧಿಸಿಡಲಾಗದು.

# ರಾಜ್ಯ ಕಾಗ್ರೇಸ್‌ನಲ್ಲಿ ನಾಯಕತ್ವ ಬದಲಾವಣೆ ಜಟಾಪಟಿ

## ■ ಡಿಕೆಶಿ ಪರವಾಗಿ ಬಂಡೆಯಂತೆ ಬೆಂಬಲಕ್ಕೆ ನಿಂತಿರುವ ಶಾಸಕರ ಸಂಖ್ಯೆ ಎಷ್ಟು? ■ ಡಿಕೆಶಿ ಪರವಾಗಿ ಯಾರು?

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಚರ್ಚೆ ಮುನ್ನಲೆಗೆ ಬಂದ ಸಂದರ್ಭದಲ್ಲೇ ಯಾವ ನಾಯಕರಿಗೆ ಎಷ್ಟು ಶಾಸಕರ, ಸಚಿವರ ಬೆಂಬಲ ಇದೆ ಎಂಬ ಚರ್ಚೆಯೂ ಮುನ್ನಲೆಗೆ ಬರುತ್ತಿದೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಪರವಾಗಿ ಕೆಲವು ಶಾಸಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಿದ ಸೈಲೆಂಟಾಗಿದ್ದಾರೆ. ಆದರೆ, ಆಂತರಿಕ ವಲಯದಲ್ಲಿ ಬಲಾ ಬಲದ ಚರ್ಚೆಗೆ ನಡೆಯುತ್ತಿದೆ.

**ಕೆಲವರು ಪ್ರತ್ಯಕ್ಷ ಕೆಲವರು ಪರೋಕ್ಷ**

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಯಾರು ಸಿಎಂ ಆಗಬೇಕು ಎಂಬ ಬಗ್ಗೆ ಸಾಕಷ್ಟು ಗೊಂದಲ ಇತ್ತು. ಆದರೆ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಸಿದ್ದರಾಮಯ್ಯ ಅವರ ಪರವಾಗಿಯೇ ಒಲವು ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಯಿತು. ಆದರೆ ಬರಬರುತ್ತಾ ಪರಿಸ್ಥಿತಿ ಬದಲಾವಣೆ ಆಗತೊಡಗಿದೆ. ಇದೀಗ ಡಿಕೆ ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡಬೇಕು ಎಂಬ ಚರ್ಚೆಗಳನ್ನು ಅವರ ಆಪ್ತರು ಶುರುಮಾಡಿಕೊಂಡಿದ್ದಾರೆ. ಡಿಕೆ ಶಿವಕುಮಾರ್ ಪರವಾಗಿ ಬಹಿರಂಗವಾಗಿಯೇ ಇಕ್ಬಾಲ್ ಹುಸೇನ್ ಬ್ಯಾಟಿಂಗ್ ಮಾಡಿದ್ದರು. ಅದಕ್ಕಾಗಿ ಅವರಿಗೆ ನೋಟಿಸ್ ನೀಡಲಾಗಿತ್ತು.



ಈ ಬಳಿಕ ಇದೀಗ ಬಹಿರಂಗ ಚರ್ಚೆ ನಡೆಯುತ್ತಿಲ್ಲವಾದರೂ ಆಂತರಿಕವಾಗಿ ಚರ್ಚೆಗಳು ಶುರುವಾಗಿದೆ. ಯಾರ ನಾಯಕರ ಪರವಾಗಿ ಬಲ ಎಷ್ಟಿದೆ? ಎಂಬ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಹಾಗಾದ್ರೆ, ಡಿಕೆಶಿ ಪರವಾಗಿ ಶಾಸಕರ ಬೆಂಬಲ ಎಷ್ಟಿದೆ? ಯಾರು ಪ್ರತ್ಯಕ್ಷವಾಗಿ ಬೆಂಬಲ ಕೊಡುತ್ತಿದ್ದಾರೆ? ಯಾರು ಪರೋಕ್ಷವಾಗಿ ಬೆಂಬಲ ಕೊಡುತ್ತಿದ್ದಾರೆ ಎಂಬ ಪಟ್ಟಿ ಇಲ್ಲಿದೆ.

### ಡಿಕೆಶಿ ಪರವಾಗಿ ನಿಂತ ಶಾಸಕರು

● ಇಕ್ಬಾಲ್ ಹುಸೇನ್ ● ರವಿ ಗಣಿಗ ● ಬಸವರಾಜ ಶಿವಗಂಗಾ ● ಕುಣಿಗಲ್ ರಂಗನಾಥ್ ● ಮಾಗಡಿ ಬಾಲಕೃಷ್ಣ ● ಕದಲೂರು ● ಉದಯ ಗೌಡ ● ಅಶೋಕ್ ರೈ

### ಪರೋಕ್ಷ ಬೆಂಬಲ

● ಎನ್ ಎ ಹ್ಯಾರಿಸ್ ● ಸಿಪಿ ಯೋಗೇಶ್ವರ್ ● ಮಾಲೂರು ನಂಜೇಗೌಡ ● ಮಂಥರ್ ಗೌಡ ● ರಾಜೇಗೌಡ ● ನಯನ ಮೋಟಮ್ಮ ● ಎಚ್ ಡಿ ತಮ್ಮಯ್ಯ

### ಪರೋಕ್ಷ ಬೆಂಬಲಕ್ಕಿರುವ ಸಚಿವರು

● ಲಕ್ಷ್ಮೀ ಹೆಬ್ಬಾಳ್ಕರ್ ● ಚಲುವರಾಯಸ್ವಾಮಿ ● ಎಂಸಿ ಸುಧಾಕರ್ ● ಡಿ ಸುಧಾಕರ್ ● ಮಂಕಾಳ್ ವೈದ್ಯ ● ಮಧು ಬಂಗಾರಪ್ಪ ● ಶಿವಾನಂದ ಪಾಟೀಲ್

### ಗೊಂದಲದಲ್ಲಿ ಇರುವವರು

● ತನ್ವೀರ್ ಸೇಠ್ ● ದರ್ಶನ್ ಧ್ರುವನಾರಾಯಣ

## ಕಾಂಗ್ರೇಸ್‌ನಲ್ಲಿ ಮುಗಿಯದ ಗೊಂದಲ ಸುರ್ಜೇವಾಲ ಸಭೆ ಬಗ್ಗೆ ಅಪಸ್ವರ!

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೇಸ್‌ನಲ್ಲಿ ಆಂತರಿಕ ಕಚ್ಚಾಟ ಮುಗಿಯುವ ಹಂತಕ್ಕೆ ತಲುಪಿಲ್ಲ. ಪಕ್ಷದಲ್ಲಿ ಕಾಣಿಸಿಕೊಂಡ ಗೊಂದಲ ಬಗೆಹರಿಸುವ ಹೈಕಮಾಂಡ್ ಸೂಚನೆಯಂತೆ ಕಾಂಗ್ರೇಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಆಗಮಿಸಿದ್ದರು. 40 ಶಾಸಕರ ಜೊತೆಗೆ ಒನ್ ಟು ಒನ್ ಸಭೆಯನ್ನು ನಡೆಸಿದ್ದರು. ಆದರೆ ಸುರ್ಜೇವಾಲ ಒನ್ ಟು ಒನ್ ಸಭೆಯ ಬಗ್ಗೆಯೇ ಅಪಸ್ವರ ಕೇಳಿ ಬರುತ್ತಿದೆ. ಉಸ್ತುವಾರಿ ಸುರ್ಜೇವಾಲಾ ನಡೆಗೆ ರಾಜ್ಯ ಕಾಂಗ್ರೇಸ್‌ನ ಹಲ ಶಾಸಕರು, ಸಚಿವರ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂಬ ಮಾಹಿತಿ ಇದೆ. ಯಾವುದೇ ಮಾಹಿತಿ ನೀಡದೆ ಏಕಾಏಕಿ ಶಾಸಕರ ಸಭೆ ನಡೆಸಿದಕ್ಕೆ ಕೆಲವರಿಂದ ಆಕ್ಷೇಪಗಳು ವ್ಯಕ್ತವಾಗುತ್ತಿದೆ. ಸಹಜವಾಗಿ ಶಾಸಕರ ಅಸಮಾಧಾನವನ್ನು ಆಲಿಸುವುದು ಹೈಕಮಾಂಡ್‌ಗಿಂತಲೂ ಮುಖ್ಯಮಂತ್ರಿಗಳು. ಮುಖ್ಯಮಂತ್ರಿಗಳು ಶಾಸಕಾಂಗ ಪಕ್ಷದ ನಾಯಕರು. ಹೀಗಿರುವಾಗ ಮುಖ್ಯಮಂತ್ರಿಗಳನ್ನು ಬಿಟ್ಟು ರಾಜ್ಯ ಕಾಂಗ್ರೇಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಪ್ರತ್ಯೇಕ ಸಭೆಯನ್ನು ನಡೆಸಿರುವುದು ಸರಿಯೇ ಎಂಬ ಪ್ರಶ್ನೆಯನ್ನು ಕೆಲವರು ಕೇಳುತ್ತಿದ್ದಾರೆ.

## ರಾಜ್ಯದಲ್ಲಿ ಅವಕಾಶ ಕಳೆದುಕೊಳ್ಳುತ್ತಿದ್ಯಾ ಬಿಜೆಪಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕಾರಣದಲ್ಲಿ ಸದ್ಯ ವಿಭಿನ್ನ ವಾತಾವರಣ ಇದೆ. ಆಡಳಿತ ಪಕ್ಷ ಮಾತ್ರವಲ್ಲ, ವಿಪಕ್ಷದಲ್ಲೂ ಸಾಕಷ್ಟು ಗೊಂದಲಗಳು ತೀವ್ರಗೊಳ್ಳುತ್ತಿವೆ. ಆಡಳಿತ ಪಕ್ಷದಲ್ಲಿ ನಾಯಕತ್ವ ಬದಲಾವಣೆ ಕುರಿತಾಗಿ ಶಾಸಕರು, ಸಚಿವರ ಹೇಳಿಕೆಗಳು ಸಾಕಷ್ಟು ಗೊಂದಲ ಮೂಡಿಸುತ್ತಿವೆ. ಪಕ್ಷದ ಕಾರ್ಯಕರ್ತರಲ್ಲೂ ಇದರಿಂದ ಗೊಂದಲ ಸೃಷ್ಟಿಯಾಗಿದೆ. ಅಷ್ಟೇ ಅಲ್ಲ, ಆಡಳಿತದ ಮೇಲೂ ಅದು ಪರಿಣಾಮ ಬೀರಿದೆ.

ಹೀಗಿದ್ದರೂ ವಿಪಕ್ಷ ಬಿಜೆಪಿ ಏನು ಮಾಡುತ್ತಿದೆ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತಿದೆ. ರಾಜ್ಯದಲ್ಲಿ ಆಡಳಿತ ಪಕ್ಷದ ಪರಿಸ್ಥಿತಿ ಬಿಜೆಪಿಗೆ ಪೂರಕವಾಗಿದೆ. ಕಾಂಗ್ರೇಸ್‌ನಲ್ಲಿ ನಾಯಕತ್ವ ಬದಲಾವಣೆ ಕುರಿತಾಗಿ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ನಡುವೆ ಜಟಾಪಟಿ ನಡೆಯುತ್ತಿದೆ. ನಾಯಕತ್ವ ಬದಲಾವಣೆಯ ಬಗ್ಗೆ ಡಿಕೆಶಿ ಆಪ್ತ ಶಾಸಕ ಇಕ್ಬಾಲ್ ಹುಸೇನ್ ನೇರವಾಗಿ ಹೇಳಿಕೆ ಕೊಟ್ಟಿದ್ದಾರೆ. ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ.

## ಮೇಕೆದಾಟು ಯೋಜನೆಗೆ ರಾಜಕೀಯ ಬೇಡ: ಎಂಬಿಪಿ

• ಉದಯವಾಹಿನಿ, ಬೆಂಗಳೂರು

ಮೇಕೆದಾಟು ಅಣೆಕಟ್ಟು ಯೋಜನೆ ಜಾರಿಗೆ ಬಂದರೆ ಸಂಕಷ್ಟದ ಸಮಯದಲ್ಲಿ ಕರ್ನಾಟಕ ಮತ್ತು ತಮಿಳುನಾಡು ಹೀಗೆ ಎರಡು ರಾಜ್ಯಗಳಿಗೂ ಅನುಕೂಲವಾಗಲಿದೆ. ಈ ಸತ್ಯ ಎಲ್ಲರಿಗೂ ಗೊತ್ತಿದೆ. ಇದರಲ್ಲಿ ಕಾಂಗ್ರೇಸ್, ಬಿಜೆಪಿ, ಜೆಡಿಎಸ್ ಅಂತ ರಾಜಕೀಯ ಮಾಡಿಕೊಂಡು ಕೂರಬಾರದು. ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಕೂಡ ಇದನ್ನು ಮನಗಂಡು, ರಚನಾತ್ಮಕವಾಗಿ ಕೆಲಸ ಮಾಡಲಿ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಶನಿವಾರ ಹೇಳಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಕುಮಾರಸ್ವಾಮಿಯವರು ಮೇಕೆದಾಟು ಯೋಜನೆ ತಮ್ಮ ಕುಟುಂಬದಿಂದ ಮಾತ್ರ ಸಾಧ್ಯ ಎಂದಿದ್ದಾರೆ. ಇದು ಸರಿಯಲ್ಲ. ಈ ಯೋಜನೆ ಜಾರಿಯಿಂದ ಸಂಕಷ್ಟದ ಸಮಯದಲ್ಲಿ ನೀರು ಸಿಗುತ್ತದೆ ಎನ್ನುವುದು ತಮಿಳುನಾಡಿನ ರಾಜಕೀಯ ಪಕ್ಷಗಳಿಗೂ ಗೊತ್ತು. ಆದರೆ ಅವರು ಸಹ ರಾಜಕೀಯಕ್ಕೋಸ್ಕರ ಮೇಕೆದಾಟು ಯೋಜನೆಯನ್ನು ವೃಥಾ ವಿರೋಧಿಸುತಿದ್ದಾರೆ.


1 ಹೊಸ ರೂಲ್ಸ್..! ಅವ್ಯವಹಾರಕ್ಕೆ ಬ್ರೇಕ್..?
2 ಪ್ರತಿಯೊಂದು ಆಸ್ತಿಯ ಲೆಕ್ಕವೂ ಆನ್‌ಲೈನ್‌ನಲ್ಲಿ ಲಭ್ಯ
3 ಡೆಡ್‌ಲೈನ್ ವಿಸ್ತರಣೆಗೆ ನ್ಯಾಯಮಂಡಳಿಗೆ ಮೊರೆ

ಒಂದು ವರ್ಷದೊಳಗೆ **ತನಿಖೆ** ಪೂರ್ಣಗೊಳಿಸಿ ವರದಿ ಸಲ್ಲಿಸಿ

# ಮೋದಿ ಸರ್ಕಾರ ಡಿಜಿಟಲ್‌ಗೆ ಮೂಗುದಾರ!

**ಕೇಂದ್ರ ಡಿಜಿಟಲ್ ಅಸ್ತ್ರ..!**





**ಭಾರತದಲ್ಲಿ 9 ಲಕ್ಷಕ್ಕೂ ಹೆಚ್ಚು ವಕ್ಫ್ ಆಸ್ತಿಗಳಿವೆ.**

• ಉದಯವಾಹಿನಿ, ದೆಹಲಿ

ಕೆಲ ತಿಂಗಳುಗಳ ಹಿಂದಷ್ಟೇ ವಿವಾದಿತ ವಕ್ಫ್ ಕಾಯಿದೆಗೆ ತಿದ್ದುಪಡಿ ತಂದಿದ್ದ ಮೋದಿ ಸರ್ಕಾರ ಈಗ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ. ಸುಪ್ರೀಂ ಕೋರ್ಟ್‌ನಲ್ಲಿ ವಕ್ಫ್ ತಿದ್ದುಪಡಿ ಕಾಯಿದೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಯುತ್ತಿರುವಾಗಲೇ ಹೊಸ ನಿಯಮಗಳನ್ನು ಜಾರಿಗೆ ತಂದಿದೆ. ದೇಶಾದ್ಯಂತ ಇರುವ ಲಕ್ಷಾಂತರ ವಕ್ಫ್ ಆಸ್ತಿಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ದಕ್ಷತೆ ತರಲು ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಕಳೆದ ತಿಂಗಳು ಚಾಲನೆ ನೀಡಲಾಗಿದ್ದ 'ಕೇಂದ್ರೀಯ ವಕ್ಫ್ ಪೋರ್ಟಲ್'ನಲ್ಲಿ ವಕ್ಫ್ ಆಸ್ತಿಗಳ ವಿವರಗಳನ್ನು ಅಪ್‌ಲೋಡ್ ಮಾಡುವ ಕುರಿತು ಕೇಂದ್ರ ಸರ್ಕಾರ ವಿವರವಾದ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಈ ಮೂಲಕ ವಕ್ಫ್ ಆಸ್ತಿಗಳಿಗೆ ಮೂಗುದಾರ ಹಾಕಲು ಮುಂದಾಗಿದೆ. ವಕ್ಫ್ ಆಸ್ತಿಗಳ ಅವ್ಯವಹಾರಗಳಿಗೆ ಬ್ರೇಕ್ ಹಾಕಲು ಕೇಂದ್ರ ಸರ್ಕಾರ 'ಡಿಜಿಟಲ್ ಅಸ್ತ್ರವನ್ನು ಪ್ರಯೋಗಿಸಿದೆ. ಇನ್ನು ಮುಂದೆ ಪ್ರತಿಯೊಂದು ಆಸ್ತಿಯ ಲೆಕ್ಕವೂ ಆನ್‌ಲೈನ್‌ನಲ್ಲಿ ಲಭ್ಯವಾಗಲಿದೆ.

ಹೌದು, ಕೇಂದ್ರ ಸರ್ಕಾರ ವಕ್ಫ್ ಬೋರ್ಡ್ ವಿಚಾರದಲ್ಲಿ ಗಮನಾರ್ಹ ಬದಲಾವಣೆ ತರುತ್ತಿದ್ದು, ಏಕೀಕೃತ ವಕ್ಫ್ ನಿರ್ವಹಣಾ ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ ನಿಯಮಗಳು 2025ಅನ್ನು ಅಧಿಸೂಚನೆ ಮೂಲಕ ಜಾರಿಗೊಳಿಸಲಾಗಿದೆ. ಈ ಹೊಸ ನಿಯಮಗಳು ವಕ್ಫ್ ಆಸ್ತಿಗಳ ನೋಂದಣಿ, ಲೆಕ್ಕ ಪರಿಶೋಧನೆ ಅಂದ್ರೇ ಆಡಿಟ್ ಮತ್ತು ಖಾತೆಗಳ ನಿರ್ವಹಣೆಯನ್ನು ಸಂಪೂರ್ಣವಾಗಿ ಡಿಜಿಟಲ್ ಮಾಡುವ ಗುರಿಯನ್ನು ಹೊಂದಿದೆ.

ಈ ಪೋರ್ಟಾಲ್ ಅನ್ನು ಕೇಂದ್ರದ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ ನಿರ್ವಹಿಸಲಿದೆ. ವಕ್ಫ್ ಆಸ್ತಿಗಳ ರಿಯಲ್ ಟೈಮ್ ಮಾನಿಟರಿಂಗ್, ಕೋರ್ಟ್ ಕೇಸ್‌ಗಳು, ವಿವಾದಗಳ ಇತ್ಯರ್ಥ, ಸಾಂಸ್ಥಿಕ ಆಡಳಿತ, ಹಣಕಾಸು ವಿಚಾರಗಳ ಮೇಲೆ ನೇರ ನಿಗಾವನ್ನು ಕೇಂದ್ರದ ವಕ್ಫ್ ವಿಭಾಗ ಇಡಲಿದೆ. ಇದು ವಕ್ಫ್ ಬೋರ್ಡ್‌ನಲ್ಲಿ, ವಕ್ಫ್ ಆಸ್ತಿಗಳಲ್ಲಿ ಹೆಚ್ಚಿನ ಪಾರದರ್ಶಕತೆ ತರಲಿದ್ದು, ಅವ್ಯವಹಾರಗಳಿಗೆ ಬ್ರೇಕ್ ಹಾಕಲಿದೆ.

ಹೊಸ ನಿಯಮಗಳ ಪ್ರಕಾರ, 2025ರ ಏಪ್ರಿಲ್ 8ಕ್ಕೂ ಮೊದಲು ಅಸ್ತಿತ್ವದಲ್ಲಿದ್ದ ಎಲ್ಲಾ ವಕ್ಫ್ ಆಸ್ತಿಗಳ ಉಸ್ತುವಾರಿ ಹೊತ್ತಿರುವ 'ಮುತವಲ್ಲಿ'ಗಳು ಅಂದ್ರೇ ಆ ಆಸ್ತಿಗಳನ್ನು ನೋಡಿಕೊಳ್ಳುವವರು ಕಡ್ಡಾಯವಾಗಿ ಒಂದಿಷ್ಟು ವಿವರಗಳನ್ನು ವಕ್ಫ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕಿದೆ. ಪ್ರಮುಖವಾಗಿ ಆಸ್ತಿಯ ವಿವರ ಅಂದ್ರೇ ವಕ್ಫ್ ಆಸ್ತಿಯ ಗಡಿಗಳು, ಅದನ್ನು ಯಾವ ರೀತಿ ಸದ್ಯ ಬಳಸಲಾಗುತ್ತಿದೆ. ಅಂದ್ರೇ ಕೃಷಿಗೋ, ವಾಣಿಜ್ಯಕ್ಕೋ, ವಸತಿಗೋ ಎಂಬುದನ್ನು ಅಪ್‌ಡೇಟ್ ಮಾಡಬೇಕಿದೆ. ಅದರ ಜೊತೆ ಅದನ್ನು ಯಾರು ಬಳಸುತ್ತಿದ್ದಾರೆ ಅಥವಾ ಅಲ್ಲಿ ಯಾರು ವಾಸವಾಗಿದ್ದಾರೆ ಎಂಬ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕಿದೆ. ವಕ್ಫ್ ಅನ್ನು ಯಾರು, ಯಾವಾಗ ಮತ್ತು ಹೇಗೆ ದಾನ ಮಾಡಿದರು. ಅವರ ಹೆಸರು ಮತ್ತು ವಿಳಾಸವನ್ನು ನಮೂದಿಸಬೇಕು, ಲಭ್ಯವಿದ್ದಲ್ಲಿ ವಕ್ಫ್ ಪತ್ರದ ಪ್ರತಿಯನ್ನು ಸಹ ಅಪ್‌ಲೋಡ್ ಮಾಡಬೇಕು. ಅದರ ಜೊತೆ ಈ ವಕ್ಫ್ ಆಸ್ತಿಯಿಂದ ಯಾರಿಗೆಲ್ಲಾ ಲಾಭವಾಗುತ್ತಿದೆ ಎಂಬ ಫಲಾನುಭವಿಗಳ ವಿವರವನ್ನು ಕೂಡ ಪೋರ್ಟಾಲ್‌ಗೆ ಅಪ್‌ಡೇಟ್ ಮಾಡಬೇಕಿದೆ. ಆಸ್ತಿಯಿಂದ ಬರುವ ವಾರ್ಷಿಕ ಆದಾಯ, ಅದಕ್ಕೆ ಪಾವತಿಸಬೇಕಾದ ಭೂಕಂದಾಯ, ಸೆಸ್ ಮತ್ತು ಇತರ ತೆರಿಗೆಗಳ ಮಾಹಿತಿ ನೀಡಬೇಕಿದೆ. ಜೊತೆಗೆ ಯಾವ ಉದ್ದೇಶಕ್ಕಾಗಿ ಈ ವಕ್ಫ್ ಅನ್ನು ಸ್ಥಾಪಿಸಲಾಗಿತ್ತು ಎಂಬ ಸ್ಪಷ್ಟ ವಿವರಣೆಯನ್ನು ಪೋರ್ಟಾಲ್‌ನಲ್ಲಿ ಬರೆಯಬೇಕಿದೆ.

ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಪ್ರಕಾರ, ಭಾರತದಲ್ಲಿ 9 ಲಕ್ಷಕ್ಕೂ ಹೆಚ್ಚು ವಕ್ಫ್ ಆಸ್ತಿಗಳಿವೆ. ತಿದ್ದುಪಡಿ ಮಾಡಿದ ಕಾನೂನಿನ ಪ್ರಕಾರ, ಅಸ್ತಿತ್ವದಲ್ಲಿರುವ ಎಲ್ಲಾ ಆಸ್ತಿಗಳ ವಿವರಗಳನ್ನು ಆರು ತಿಂಗಳ ನಿಗದಿತ ಸಮಯದೊಳಗೆ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲೇಬೇಕು. ಈ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದ್ದು, ಒಂದು ವೇಳೆ ಮುತವಲ್ಲಿಯು ಡೆಡ್‌ಲೈನ್ ಒಳಗಡೆ ಪೋರ್ಟಾಲ್‌ಗೆ ಮಾಹಿತಿ ನೀಡಲು ವಿಫಲವಾದರೆ, ಡೆಡ್‌ಲೈನ್ ವಿಸ್ತರಣೆಗೆ ನೇರವಾಗಿ ನ್ಯಾಯಮಂಡಳಿಗೆ ಮೊರೆ ಹೋಗಬೇಕಾಗುತ್ತದೆ. ಇನ್ನು ಸಮೀಕ್ಷೆ ಪೂರ್ಣವಾದ ಬಳಿಕ ರಾಜ್ಯ ಸರ್ಕಾರಗಳು 90 ದಿನಗಳೊಳಗೆ ವಕ್ಫ್ ಆಸ್ತಿಗಳ ವಿವರಗಳನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಬೇಕು ಮತ್ತು ಕೇಂದ್ರ ಸರ್ಕಾರದ ವಕ್ಫ್ ಪೋರ್ಟಾಲ್‌ನಲ್ಲಿ ಅಪ್‌ಲೋಡ ಮಾಡಬೇಕು ಎಂದು ಕೇಂದ್ರ ಸರ್ಕಾರ ತನ್ನ ಅಧಿಸೂಚನೆಯಲ್ಲಿ ಸಸ್ಪಷ್ಟವಾಗಿ ಹೇಳಿದೆ.

**ಹೊಸ ನಿಯಮ ಪ್ರಕಟ, ಆಸ್ತಿ ವಿವರ ಅಪ್‌ಲೋಡ್ ಕಡ್ಡಾಯ..!**

### ಅಪ್‌ಲೋಡ್ ಮಾಡುವುದು ಕಡ್ಡಾಯ

**ವಕ್ಫ್ ಮುತವಲ್ಲಿಗಳು ಆಸ್ತಿಗಳ ವಿವರಗಳನ್ನು ಅಪ್‌ಲೋಡ್ ಮಾಡಿದ ನಂತರ, ವಕ್ಫ್ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಅವರಿಂದ ಅಧಿಕಾರ ಪಡೆದ ಯಾವುದೇ ಅಧಿಕಾರಿ ಆ ಮಾಹಿತಿಯನ್ನು ಪರಿಶೀಲಿಸಿ, ಪ್ರಮಾಣೀಕರಿಸಬೇಕು. ಇದಕ್ಕೆ ಡೆಡ್‌ಲೈನ್ ಅನ್ನು ಕೂಡ ಕೇಂದ್ರ ಸರ್ಕಾರ ರೂಪಿಸಿದೆ. ಏಪ್ರಿಲ್ 8, 2025ರ ನಂತರ ಸೃಷ್ಟಿಯಾಗುವ ಹೊಸ ವಕ್ಫ್ ಆಸ್ತಿಗಳನ್ನು, ಅವು ಸೃಷ್ಟಿಯಾದ ಮೂರು ತಿಂಗಳೊಳಗೆ ನೋಂದಣಿಗಾಗಿ ಮುತವಲ್ಲಿಗಳು ಮಂಡಳಿಗೆ ಅರ್ಜಿ ಸಲ್ಲಿಸಬೇಕು. ಅರ್ಜಿಯ ಜೊತೆ ವಕ್ಫ್ ಪತ್ರದ ಪ್ರತಿಯನ್ನು ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ. ಯಾವುದಾದರೂ ಆಸ್ತಿಯನ್ನು ತಪ್ಪಾಗಿ ವಕ್ಫ್ ಎಂದು ಘೋಷಿಸಲಾಗಿದೆ ಎಂಬ ದೂರು ಬಂದರೆ, ಜಿಲ್ಲಾಧಿಕಾರಿಯು ನೇಮಿಸಿದ ಅಧಿಕಾರಿಯು ಒಂದು ವರ್ಷದೊಳಗೆ ತನಿಖೆ ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸಬೇಕಿದೆ.**

### ಪಾರದರ್ಶಕತೆ ಪ್ರಕ್ರಿಯೆ ಸರ್ಕಾರ ತರಲು ಮುಂದು

ರಾಜ್ಯ ಸರ್ಕಾರವು ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಜೊತೆಗೆ, ವಕ್ಫ್ ಆಸ್ತಿಗಳ ವಿವರಗಳನ್ನು ಅಪ್‌ಲೋಡ್ ಮಾಡಲು, ನೋಂದಣಿ, ಲೆಕ್ಕಪತ್ರ ನಿರ್ವಹಣೆ ಮತ್ತು ಲೆಕ್ಕಪರಿಶೋಧನೆಯಂತಹ ಚಟುವಟಿಕೆಗಳಿಗೆ ಸಹಾಯ ಮಾಡಲು ಕೇಂದ್ರೀಕೃತ ಬೆಂಬಲ ಘಟಕವನ್ನು ಸ್ಥಾಪಿಸಬೇಕು ಎಂದು ಕೇಂದ್ರ ಸೂಚನೆ ನೀಡಿದೆ. ರಾಜ್ಯ ಸರ್ಕಾರಗಳು ಸಮೀಕ್ಷೆ ಪೂರ್ಣಗೊಳಿಸಿದ ನಂತರ, ವಕ್ಫ್ ಆಸ್ತಿಗಳ ಅಂದ್ರೇ ಔಕಾಫ್ ಪಟ್ಟಿಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಬೇಕು. ಪ್ರಕಟಿಸಿದ 90 ದಿನಗಳೊಳಗೆ ಆ ಪಟ್ಟಿಯನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕಿದೆ.ಈ ಪೋರ್ಟಲ್‌ನ ಕಾರ್ಯನಿರ್ವಹಣೆಯನ್ನು ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ ಕೇಂದ್ರ ಸರ್ಕಾರ ನೇಮಿಸುವ ಒಂದು ಸ್ವತಂತ್ರ ಸಂಸ್ಥೆಯು ಪರಿಶೀಲಿಸಲಿದೆ. ಆ ಸಂಸ್ಥೆಯ ವರದಿ ಮತ್ತು ಅದರ ಶಿಫಾರಸುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳ ವರದಿಯನ್ನು, ವರದಿ ಸಲ್ಲಿಕೆಯಾದ 3 ತಿಂಗಳೊಳಗೆ ಪೋರ್ಟಲ್‌ನಲ್ಲಿ ಸಾರ್ವಜನಿಕವಾಗಿ ಪ್ರಕಟಿಸಲಿದೆ. ಈ ಮೂಲಕ ಸಂಪೂರ್ಣ ಪಾರದರ್ಶಕತೆ ಈ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರ ತರಲು ಮುಂದಾಗಿದೆ.

# ದ್ವಿಚಕ್ರ ವಾಹನ ಚಾಲಕರಿಗೆ ಮಹತ್ವದ ಅಪ್ಡೇಟ್ಸ್ ಕೊಟ್ಟ ಕೇಂದ್ರ ಸರ್ಕಾರ

## ■ ವಾಹನ ಸವಾರರಿಗೆ ಬಿಐಎಸ್ ಪ್ರಮಾಣೀಕರಿಸಿದ ಐಎಸ್‌ಐ ಗುರುತುಳ್ಳ ಹೆಲ್ಮೆಟ್ ಕಡ್ಡಾಯ:ಜೋಷಿ ಸೂಚನೆ

• ಉದಯವಾಹಿನಿ, ಹೊಸದಿಲ್ಲಿ

ದೇಶದಲ್ಲಿ ದ್ವಿಚಕ್ರ ವಾಹನ ಸವಾರರ ಸುರಕ್ಷತೆಗೆ ಮುಂದಾಗಿರುವ ಕೇಂದ್ರ ಸರ್ಕಾರ ಕಳಪೆ ಗುಣಮಟ್ಟದ ಹೆಲ್ಮೆಟ್ ಮಾರಾಟ ಮತ್ತು ಬಳಕೆಗೆ ತಡೆಯೊಡ್ಡಿದೆ. ಕಳಪೆ ಗುಣಮಟ್ಟದ ಹೆಲ್ಮೆಟ್ ತಯಾರಕರು ಮತ್ತು ಮಾರಾಟಗಾರರ ವಿರುದ್ಧ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾದ ಕೇಂದ್ರ ಸರ್ಕಾರ, ರಸ್ತೆ ಬದಿಗಳಲ್ಲಿ ಮಾರಾಟ ಆಗುತ್ತಿರುವ ಕಳಪೆ ಹೆಲ್ಮೆಟ್‌ಗಳಿಗೆ ಬ್ರೇಕ್ ಹಾಕುವ ಜತೆಗೆ ವಾಹನ ಸವಾರರಿಗೆ ಬಿಐಎಸ್ ಪ್ರಮಾಣೀಕರಿಸಿದ ಐಎಸ್‌ಐ ಗುರುತುಳ್ಳ ಹೆಲ್ಮೆಟ್ ಬಳಕೆಯನ್ನೇ ಕಡ್ಡಾಯಗೊಳಿಸಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ನೇತೃತ್ವದಲ್ಲಿ ಭಾರತೀಯ ಮಾನದಂಡಗಳ ಬ್ಯೂರೋ (ಬಿಐಎಸ್) ಕಳಪೆ ಹೆಲ್ಮೆಟ್ ತಯಾರಕರು ಮತ್ತು ಮಾರಾಟಗಾರರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದು, ದೆಹಲಿಯಲ್ಲಿ ಈಗಾಗಲೇ 2,500ಕ್ಕೂ ಹೆಚ್ಚು ಕಳಪೆ ಹೆಲ್ಮೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

2024-25ನೇ ಆರ್ಥಿಕ ವರ್ಷದಲ್ಲಿ ಬಿಐಎಸ್ ದೆಹಲಿಯಲ್ಲಿ 30ಕ್ಕೂ ಹೆಚ್ಚು ಹೆಲ್ಮೆಟ್ ತಯಾರಕ ಘಟಕಗಳ ಮೇಲೆ ದಾಳಿ ನಡೆಸಿದ್ದು, ಈ ವೇಳೆ ಪರವಾನಗಿ ರದ್ದಾದ ಹಾಗೂ ಅವಧಿ ಮುಗಿದ 9 ತಯಾರಕರು ಕಂಡುಬಂದಿದ್ದು, ಇವರಿಂದ 2,500ಕ್ಕೂ ಹೆಚ್ಚು ಹೆಲ್ಮೆಟ್‌ಗಳನ್ನು ವಶಪಡಿಸಿಕೊಂಡಿದೆ.



ದೆಹಲಿಯ 17 ಅಂಗಡಿಗಳು ಮತ್ತು ರಸ್ತೆ ಬದಿ ವ್ಯಾಪಾರಸ್ಥರಲ್ಲೂ ಶೋಧ ನಡೆಸಿ, 500ಕ್ಕೂ ಹೆಚ್ಚು ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳನ್ನು ವಶಪಡಿಸಿಕೊಂಡ ಬಿಐಎಸ್ ಅಧಿಕಾರಿಗಳ ತಂಡ, ವರ್ತಕರು, ತಯಾರಕರ ವಿರುದ್ಧ ಕಾನೂನು ಕ್ರಮ ಜರುಗಿಸಿದೆ.

**176 ತಯಾರಕರಿಗೆ ಬಿಐಎಸ್ ಮಾನ್ಯತೆ:** 2025ರ ಜೂನ್ ವೇಳೆಗೆ ದೇಶಾದ್ಯಂತ 176 ಹೆಲ್ಮೆಟ್ ತಯಾರಕರು ಮಾತ್ರ ರಕ್ಷಣಾತ್ಮಕ ಹೆಲ್ಮೆಟ್ ಉತ್ಪಾದನೆಗೆ ಮಾನ್ಯವಾದ ಬಿಐಎಸ್ ಪರವಾನಗಿ ಹೊಂದಿದ್ದಾರೆ. ರಸ್ತೆ ಬದಿಗಳಲ್ಲಿ ಮಾರಾಟವಾಗುತ್ತಿರುವ ಅನೇಕ ಹೆಲ್ಮೆಟ್‌ಗಳು ಬಿಐಎಸ್ ಪ್ರಮಾಣೀಕರಣ ಹೊಂದಿರುವುದಿಲ್ಲ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಮಾಹಿತಿ ನೀಡಿದೆ.

ದೇಶದಲ್ಲಿ 21 ಕೋಟಿಗೂ ಹೆಚ್ಚು ದ್ವಿಚಕ್ರ ವಾಹನಗಳಿದ್ದು, ಸವಾರರ ಸುರಕ್ಷತೆ ಸರ್ಕಾರದ ಮುಖ್ಯ ಧ್ಯೇಯವಾಗಿದೆ. ಮೋಟಾರು ವಾಹನ ಕಾಯ್ದೆ, 1988ರಡಿ ಹೆಲ್ಮೆಟ್ ಕಡ್ಡಾಯವಾಗಿದ್ದು, ಅದರ ಗುಣಮಟ್ಟಕ್ಕೂ ಆದ್ಯತೆ ಕೊಡಬೇಕಿದೆ. ಹಾಗಾಗಿ 2021ರಿಂದ ಗುಣಮಟ್ಟ ನಿಯಂತ್ರಣ ಆದೇಶ ಜಾರಿಯಲ್ಲಿದೆ.

ಕಳಪೆ ಗುಣಮಟ್ಟದ ಹೆಲ್ಮೆಟ್‌ಗೆ ಅವಕಾಶವಿಲ್ಲ. ಎಲ್ಲಾ ದ್ವಿಚಕ್ರ ವಾಹನ ಸವಾರರಿಗೆ ಬಿಐಎಸ್ ಮಾನದಂಡದಂತೆ ಪ್ರಮಾಣೀಕರಿಸಿದ ಐಎಸ್‌ಐ ಗುರುತುಳ್ಳ ಹೆಲ್ಮೆಟ್‌ಗಳನ್ನು ಗ್ರಾಹಕ ವ್ಯವಹಾರಗಳ ಇಲಾಖೆ ಕಡ್ಡಾಯಗೊಳಿಸುತ್ತದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ರಸ್ತೆ ಅಪಘಾತಗಳಲ್ಲಿ ಹೆಲ್ಮೆಟ್ ಇಲ್ಲದೆ ಮತ್ತು ಹೆಲ್ಮೆಟ್ ಧರಿಸಿದ್ದರೂ ಕಳಪೆ ಗುಣಮಟ್ಟದ್ದಾಗಿದ್ದರಿಂದ ತಲೆಗೆ ತೀವ್ರ ಪೆಟ್ಟು ಬಿದ್ದು ಸಾವನ್ನಪ್ಪುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಮತ್ತು ಬಿಐಎಸ್ ಅನೇಕ ಪ್ರಕರಣಗಳಲ್ಲಿ ಇದನ್ನು ಗಮನಿಸಿದ್ದು, ಬೈಕ್ ಸವಾರರ ಸುರಕ್ಷತೆ ದೃಷ್ಟಿಯಿಂದ ಕಳಪೆ ಗುಣಮಟ್ಟದ ಹೆಲ್ಮೆಟ್ ತಯಾರಕರು ಮತ್ತು ಮಾರಾಟದ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಂದಾಗಿದೆ. ಬಿಐಎಸ್ ನಿಯಮಿತ ಕಾರ್ಖಾನೆ ಮತ್ತು ಮಾರುಕಟ್ಟೆ ಮೇಲೆ ಕಣ್ಗಾವಲಿರಿಸಿದ್ದು, 500ಕ್ಕೂ ಹೆಚ್ಚು ಹೆಲ್ಮೆಟ್ ಮಾದರಿಗಳನ್ನು ಪರೀಕ್ಷಿಸಿದೆ. 30ಕ್ಕೂ ಹೆಚ್ಚು ಶೋಧ ಕಾರ್ಯಾಚರಣೆ ನಡೆಸಿ ಗುಣಮಟ್ಟದ ಮಾನದಂಡಗಳನ್ನು ಜಾರಿಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಗ್ರಾಹಕ ವ್ಯವಹಾರಗಳ ಇಲಾಖೆ ಸಹ ಗ್ರಾಹಕರ ರಕ್ಷಣೆ ಮತ್ತು ಸುರಕ್ಷಿತ ವಾಹನ ಸಂಚಾರಕ್ಕಾಗಿ ಕಳಪೆ-ಗುಣಮಟ್ಟದ ಹೆಲ್ಮೆಟ್ ಮಾರಾಟದ ವಿರುದ್ಧ ಸಮರ ಸಾರಿದೆ. ರಸ್ತೆ ಅಪಘಾತಗಳಲ್ಲಿ ಹೆಚ್ಚಿನ ಸಾವು-ನೋವು ತಡೆಯುವ ಉದ್ದೇಶದಿಂದ ಉತ್ತಮ ಗುಣಮಟ್ಟದ ಹೆಲ್ಮೆಟ್ ಮಾರಾಟ-ಖರೀದಿಗೆ ಆದ್ಯತೆ ನೀಡುತ್ತಿದೆ.

**ರಾಷ್ಟ್ರವ್ಯಾಪಿ ಜಾಗೃತಿ ಅಭಿಯಾನ:** ವಾಹನ ಸವಾರರ ಸುರಕ್ಷತೆ ಹಾಗೂ ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳಿಂದ ಗ್ರಾಹಕರನ್ನು ರಕ್ಷಿಸುವ ಪ್ರಯತ್ನವಾಗಿ ಗ್ರಾಹಕ ವ್ಯವಹಾರಗಳ ಇಲಾಖೆ ರಾಷ್ಟ್ರವ್ಯಾಪಿ ಜಾಗೃತಿ ಅಭಿಯಾನ ನಡೆಸುತ್ತಿದೆ. ಎಲ್ಲಾ ಜಿಲ್ಲಾ ಅಧಿಕಾರಿಗಳು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳಿಗೆ ಪತ್ರ ಬರೆದು ಮಾರುಕಟ್ಟೆಯಲ್ಲಿ ಹೆಲ್ಮೆಟ್‌ಗಳ ಗುಣಮಟ್ಟ ಪರಿಶೀಲನೆಗೆ ಸೂಚನೆ ನೀಡಿದೆ. ದೆಹಲಿಯಲ್ಲಿ ಈ ಅಭಿಯಾನಕ್ಕೆ ಬೆಂಬಲ ವ್ಯಕ್ತವಾಗುತ್ತಿದ್ದು, ದೇಶದ ಇತರೆಡೆಯೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಅಭಿಯಾನ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

### ಬಿಐಎಸ್ ಕೇರ್ ಅಪ್ಲಿಕೇಶನ್

**ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಬಿಎಸ್‌ಐ ಪ್ರಾಮಾಣಿತ ಹೆಲ್ಮೆಟ್‌ಗಳನ್ನೇ ಧರಿಸಬೇಕು ಹಾಗೂ ಪ್ರಮಾಣೀಕರಣವಿಲ್ಲದ ಹೆಲ್ಮೆಟ್‌ಗಳ ತಯಾರಿಕೆ ಅಥವಾ ಮಾರಾಟ ಕಂಡುಬಂದರೆ ಗ್ರಾಹಕ ವ್ಯವಹಾರಗಳ ಇಲಾಖೆ ಅಥವಾ ಐಎಸ್‌ಐ ಗಮನಕ್ಕೆ ತರಬೇಕು. ಇದಕ್ಕಾಗಿ ಬಿಐಎಸ್ ಕೇರ್ ಅಪ್ಲಿಕೇಶನ್ ಮತ್ತು ಬಿಐಎಸ್ ಪೋರ್ಟಲ್‌ನಲ್ಲಿ ದೂರು ದಾಖಲಿಸಲು ಅವಕಾಶ ಕಲ್ಪಿಸಿದೆ. ರಾಷ್ಟ್ರವ್ಯಾಪಿ ಗ್ರಾಹಕರ ಜಾಗೃತಿಗಾಗಿ ಬಿಐಎಸ್ ಕ್ವಾಲಿಟಿ ಕನೆಕ್ಟ್ ಅಭಿಯಾನ ಸಹ ಆಯೋಜಿಸುತ್ತಿದೆ. 'ಮನಕ್ ಮಿತ್ರ' ಸ್ವಯಂ ಸೇವಕರು ಹೆಲ್ಮೆಟ್ ಮತ್ತಿತರ ಉತ್ಪನ್ನಗಳ ಕಡ್ಡಾಯ ಪ್ರಮಾಣೀಕರಣ ಬಗ್ಗೆ ಗ್ರಾಹಕರಿಗೆ ಅಗತ್ಯ ಮಾಹಿತಿ ಒದಗಿಸುತ್ತಾರೆ ಎಂದಿದೆ ಬಿಎಸ್‌ಐ.**

## ಬೆಂಗಳೂರಿನ ಹೆಲ್ಮೆಟ್ ಅಂಗಡಿಗಳ ಮೇಲೆ ಆರ್‌ಟಿಒ ಅಧಿಕಾರಿಗಳ ದಾಳಿ: ಭಾರಿ ದಂಡ!

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಲ್ಲಿ ಆರ್‌ಟಿಒ ಅಧಿಕಾರಿಗಳ ಕಾರ್ಯಾಚರಣೆ ಮುಂದುವರೆದಿದ್ದು, ಆಟೋಗಳ ಮೇಲೆ ಮುಗಿಬಿದ್ದಿದ್ದ ಅಧಿಕಾರಿಗಳು ಇದೀಗ ಹೆಲ್ಮೆಟ್ ಅಂಗಡಿಗಳ ಮೇಲೆ ದಾಳಿ ಮಾಡಿದ್ದಾರೆ. ಬೆಂಗಳೂರು ನಗರ ಸಂಚಾರಿ ಪೊಲೀಸರು ಆರ್‌ಟಿಒ ಮತ್ತು ಕಾನೂನು ಮಾಪನ ಇಲಾಖೆ ಅಧಿಕಾರಿಗಳು ನಗರದಲ್ಲಿನ ಹೆಲ್ಮೆಟ್ ಅಂಗಡಿ ಮತ್ತು ಮಳಿಗೆಗಳ ಮೇಲೆ ದಾಳಿ ಮಾಡಿದರು. ನಿಷೇಧ ಇದ್ದರೂ ಕಳಪೆ ಗುಣಮಟ್ಟದ ಹಾಗೂ ಅರ್ಧ ಹೆಲ್ಮೆಟ್ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಆಧಾರದ ಮೇಲೆ ಅಧಿಕಾರಿಗಳು ಈ ದಾಳಿ ನಡೆಸಿದ್ದಾರೆ. ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ ಅಧಿಕಾರಿಗಳು ಹೆಲ್ಮೆಟ್ ಅಂಗಡಿಗಳ ಮೇಲೆ ದಾಳಿ ಮಾಡಿ ಕಳಪೆ ಗುಣಮಟ್ಟದ ಹೆಲ್ಮೆಟ್‌ಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿ ಮಾಲೀಕರ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದಾರೆ. ಮೂಲಗಳ ಪ್ರಕಾರ ನಗರದ 19 ಸ್ಥಳಗಳಲ್ಲಿ ನಡೆದ ದಾಳಿಯಲ್ಲಿ ಆರು ಅಂಗಡಿಗಳಿಗೆ 50,000 ರೂ. ದಂಡ ವಿಧಿಸಲಾಗಿದೆ ಮತ್ತು ನೋಟೀಸ್ ಜಾರಿ ಮಾಡಲಾಗಿದೆ. ಕಳಪೆ ಹೆಲ್ಮೆಟ್ ಧರಿಸಿದ 38 ಬೈಕ್ ಸವಾರರಿಗೂ ದಂಡ ವಿಧಿಸಲಾಗಿದೆ. ಐಎಸ್‌ಐ ಮಾರ್ಕ್ ಇಲ್ಲದ ಅಥವಾ ಅರ್ಧ ಹೆಲ್ಮೆಟ್ ಧರಿಸುವುದು ಅಪಾಯಕಾರಿ ಮತ್ತು ಕಾನೂನುಬಾಹಿರ ಎಂದು ಎಚ್ಚರಿಸಲಾಗಿದೆ.

## ನಟಿ ರನ್ಯಾ ರಾವ್‌ಗೆ ಸೇರಿದ 34 ಕೋಟಿ ರೂ ಮೌಲ್ಯದ ಆಸ್ತಿ ಇಡಿ ಜಪ್ತಿ!

• **ಉದಯವಾಹಿನಿ, ಬೆಂಗಳೂರು**

ಚಿನ್ನ ಕಳ್ಳಸಾಗಣೆ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟಿ ರನ್ಯಾ ರಾವ್ ಅವರಿಗೆ ಸೇರಿದ ರೂ. 34.12 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇಡಿ) ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ. 2002ರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಕೇಸ್ ಮಾಡಿ ತನಿಖೆ ನಡೆಸಿದ್ದ ಇಡಿ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿರುವ ಆಸ್ತಿಗಳನ್ನು ಜಪ್ತಿ ಮಾಡಿದೆ. ಡಿಆರ್ ಐ ದೂರಿನ ಆಧಾರದ ಮೇಲೆ ಕೇಂದ್ರೀಯ ತನಿಖಾ ದಳ (ಸಿಬಿಐ) ಎಫ್‌ಐಆರ್ ದಾಖಲಿಸಿದ ನಂತರ ಇಡಿ ತನಿಖೆ ಪ್ರಾರಂಭಿಸಿತು. ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 18.92 ಕೋಟಿ ಮೌಲ್ಯದ 21.28 ಕೆಜಿ ಚಿನ್ನ ಕಳ್ಳಸಾಗಣೆಯೊಂದಿಗೆ ಇಬ್ಬರು ವಿದೇಶಿ ಪ್ರಜೆಗಳನ್ನು ಡಿಆರ್‌ಐ ತಡೆದ ನಂತರ ಪ್ರಕರಣ ಬೆಳಕಿಗೆ ಬಂದಿತು. ರನ್ಯಾ ರಾವ್ ಅವರನ್ನು ಮಾರ್ಚ್ 3ರಂದು ದುಬೈನಿಂದ ಬೆಂಗಳೂರಿಗೆ ಹಿಂದಿರುಗುವ ಸಂದರ್ಭ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿತ್ತು. ಡಿಆರ್‌ಐ ಅಧಿಕಾರಿಗಳು ರನ್ಯಾರಿಂದ 14.2 ಕೆ.ಜಿ ಚಿನ್ನವನ್ನು ವಶಪಡಿಸಿಕೊಂಡಿದ್ದರು. ತದನಂತರ ಆಕೆಯ ನಿವಾಸದಲ್ಲಿ ಶೋಧ ನಡೆಸಿದಾಗ ಲೆಕ್ಕಕ್ಕೆ ಸಿಗದ 2.67 ಕೋಟಿ ರೂಪಾಯಿ ನಗದು ಮತ್ತು 2.06 ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿತ್ತು.

## ಅರ್ಹತೆಯಿಲ್ಲದ ಸಿಬ್ಬಂದಿಯಿಂದ ಕ್ಯಾನ್ಸರ್ ಔಷಧಿಗಳ ಮಿಶ್ರಣ

• **ಉದಯವಾಹಿನಿ, ಬೆಂಗಳೂರು**

ನಗರದ ಎಚ್‌ಸಿಜಿ ಆಸ್ಪತ್ರೆಯಲ್ಲಿ ಕ್ಲಿನಿಕಲ್ ಸಂಶೋಧನೆಯ ಗುಣಮಟ್ಟವನ್ನು ನಿರ್ಣಯಿಸಲು ನಿಯೋಜಿಸಲಾದ ಆಂತರಿಕ ಲೆಕ್ಕಪರಿಶೋಧನಾ ಸಮಿತಿಯು ರೋಗಿಯ ದೇಹದಿಂದ ರಕ್ತ ತೆಗೆಯಲು ಮಾತ್ರ ತರಬೇತಿ ಪಡೆದ ಫ್ಲೆಬೋಟಮಿಸ್ಟ್‌ಗೆ ಕ್ಲಿನಿಕಲ್ ಪ್ರಯೋಗದಲ್ಲಿ ತನಿಖಾ ಕ್ಯಾನ್ಸರ್ ಔಷಧಿಗಳನ್ನು ನಿರ್ವಹಿಸುವ ಮಿಶ್ರಣ ಮಾಡುವ ಅನ್‌ಬ್ಲೈಂಡ್ಡ್ ಸಿಬ್ಬಂದಿ ಸದಸ್ಯ ಕೆಲಸವನ್ನು ಮಾಡುತ್ತಿರವುದು ಪತ್ತೆಯಾಗಿದೆ. ಯಾವುದೇ ಔಷಧ ತಯಾರಿಕೆಗೆ ಅರ್ಹ ಔಷಧಿಕಾರರ ಅಗತ್ಯವಿರುವ ಶಿಷ್ಟಾಚಾರದ ಈ ಗಂಭೀರ ಉಲ್ಲಂಘನೆಯು ಲೆಕ್ಕಪರಿಶೋಧನೆಯಲ್ಲಿ ಗುರುತಿಸಲಾದ ಹಲವಾರು ಆತಂಕಕಾರಿ ಲೋಪಗಳಲ್ಲಿ ಒಂದಾಗಿದೆ. ಎಚ್‌ಸಿಜಿಯಲ್ಲಿ ಕ್ಲಿನಿಕಲ್ ಟ್ರಯಲ್ಸ್ ನಿರ್ದೇಶಕ ಡಾ. ಸತೀಶ್ ಸಿಟಿ ಅವರ ಸೂಚನೆಯ ಮೇರೆಗೆ, ಸೈಟ್ ಸಿಬ್ಬಂದಿ ಆಡಿಟರ್‌ಗಳನ್ನು ಮಧ್ಯದಲ್ಲಿ ನಿಲ್ಲಿಸಲು ಕೇಳಿದ ಮೇಲೆ ಪರಿಶೀಲನೆ ಹಠಾತ್ತನೆ ಸ್ಥಗಿತಗೊಂಡಿತು ಎಂದು ಮೂಲಗಳು ಟಿಎನ್‌ಐಇಗೆ ತಿಳಿಸಿವೆ. ಎಚ್‌ಸಿಜಿಯ ಸಾಂಸ್ಥಿಕ ನೀತಿ ಸಮಿತಿಯ ಕಾರ್ಯನಿರ್ವಹಣೆಯನ್ನು ಪರಿಶೀಲಿಸುವ ಮತ್ತು ಪ್ರಯೋಗ-ನಿರ್ದಿಷ್ಟ ಪ್ರಕ್ರಿಯೆಗಳನ್ನು ಪರಿಶೀಲಿಸುವ ಉದ್ದೇಶದಿಂದ ಕ್ವಿನರಿ ಕ್ಲಿನಿಕಲ್ ರಿಸರ್ಚ್ ಫೆಬ್ರವರಿ 12, 22, 2023 ರ ನಡುವೆ ಲೆಕ್ಕಪರಿಶೋಧನೆ ನಡೆಸಿತು, ಅದರ ಸಂಶೋಧನೆಗಳು ಇಲ್ಲಿಯವರೆಗೆ ಸಾರ್ವಜನಿಕವಾಗಿ ಬೆಳಕಿಗೆ ಬಂದಿಲ್ಲ, ಈ ವರ್ಷ ಎಚ್‌ಸಿಜಿಯ ನವೀಕೃತ ಪರಿಶೀಲನೆಯ ನಡುವೆ ಇದು ಬೆಳಕಿಗೆ ಬಂದಿದೆ. ಅತ್ಯಂತ ಕಳವಳಕಾರಿ ವಿಷಯವೆಂದರೆ, ಸ್ಥಳದಲ್ಲಿ ಬಳಸಲಾದ ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್‌ಗಳು ಕ್ಲಿನಿಕಲ್ ಸಂಶೋಧನಾ ಅರ್ಹತೆಗಳಿಲ್ಲದ ವ್ಯಕ್ತಿಗಳಿಂದ ರಚಿಸಲ್ಪಟ್ಟಿವೆ. ಮಾರ್ಗಸೂಚಿಗಳು 2019 ರಲ್ಲಿ ಅಧಿಕೃತವಾಗಿ ಬದಲಾಯಿಸಲಾದ ಹಳೆಯ ನಿಯಮ ಪುಸ್ತಕವನ್ನು ಉಲ್ಲೇಖಿಸುತ್ತವೆ. ನಿಯಂತ್ರಕ ಮಾನದಂಡಗಳ ಅಡಿಯಲ್ಲಿ ಇವು ಕಡ್ಡಾಯವಾಗಿದ್ದರೂ ಸಹ, ಯಾವುದೇ ಪರಿಣಾಮದ ಮೌಲ್ಯಮಾಪನಗಳು, ವೈದ್ಯಕೀಯ ನಿರ್ವಹಣೆಯ ಬಗ್ಗೆ ಯಾವುದೇ ಸ್ಪಷ್ಟತೆ ಮತ್ತು ಹಣಕಾಸಿನ ಪರಿಹಾರದ ಯಾವುದೇ ದಾಖಲಾತಿಗಳು ಇರಲಿಲ್ಲ. ಐಇಸಿ ಸಭೆಗಳಲ್ಲಿ ಎಸ್ ಎಇಗಳನ್ನು ಚರ್ಚಿಸಿದಾಗಲೂ, ಕಾರಣ ಅಥವಾ ಅನುಸರಣಾ ಕ್ರಮಗಳ ಬಗ್ಗೆ ಕಡಿಮೆ ವಿವರಣೆ ಇತ್ತು ಎಂದು ವರದಿ ಹೇಳಿದೆ.

## ಬೆಂಗಳೂರು ನಗರ ವಿಶ್ವವಿದ್ಯಾಲಯ: ಮರುನಾಮಕರಣಕ್ಕೆ ವಿರೋಧ



• **ಉದಯವಾಹಿನಿ, ಬೆಂಗಳೂರು**

ವಿಶ್ವವಿದ್ಯಾಲಯಕ್ಕೆ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯವೆಂದು ಮರುನಾಮಕರಣ ಮಾಡುತ್ತಿರುವ ಸರ್ಕಾರದ ಕ್ರಮವನ್ನು ಕರ್ನಾಟಕ ವಿಕಾಸ ರಂಗ ಖಂಡಿಸಿದೆ. 1858ರಲ್ಲಿ ಬ್ರಿಟಿಷರು ಬೆಂಗಳೂರು ಹೈಸ್ಕೂಲ್ ಹೆಸರಿನಿಂದ ಪ್ರಾರಂಭಿಸಿದ ಶಾಲೆ, 1964ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವಾಯಿತು. ಬೆಂಗಳೂರಿಗೆ ತನ್ನದೆಯಾದ ಇತಿಹಾಸ, ಪರಂಪರೆಯಿದೆ. ಜಾಗತಿಕ ಮಟ್ಟದಲ್ಲಿ ತನ್ನ ಹೆಸರಿನಿಂದಲೇ ಮನ್ನಣೆ ಮತ್ತು ಖ್ಯಾತಿ ಪಡೆದಿದೆ. ಹಿಗಾಗಿ, ಈ ನಾಮಕರಣ ಪ್ರಕ್ರಿಯೆಯನ್ನು ಸರ್ಕಾರ ಕೂಡಲೇ ಕೈಬಿಡಬೇಕು' ಎಂದು ಕರ್ನಾಟಕ ವಿಕಾಸ ರಂಗದ ರಾಜ್ಯಾಧ್ಯಕ್ಷ ವ.ಚ. ಚನ್ನೆಗೌಡ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

## ವಕೀಲರ ಪಾಲಿಗೆ ಕರಿ ಕೋಟು ವಜ್ರ ಇದ್ದಂತೆ: ಮುಖ್ಯ ನ್ಯಾ.ಸೋಮಶೇಖರ್

• **ಉದಯವಾಹಿನಿ, ಬೆಂಗಳೂರು**

ವಕೀಲರ ಪಾಲಿಗೆ ಕರಿ ಕೋಟು ವಜ್ರ ಇದ್ದಂತೆ ಕೋರ್ಟ್‌ಗಳು ನ್ಯಾಯ ದೇಗುಲಗಳಿದ್ದಂತೆ. ಪ್ರತಿಯೊಬ್ಬ ವಕೀಲರೂ ವೃತ್ತಿಯನ್ನು ಹೃದಯ, ಆತ್ಮದ ಬೆಸುಗೆಯಾಗಿಸಿ ಸತತ ಪರಿಶ್ರಮದ ಮೂಲಕ ಯಶಸ್ಸು ಸಾಧಿಸಲು ಸಾಧ್ಯ ಎಂದು ಮಣಿಪುರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಕೆ.ಸೋಮಶೇಖರ್ ಹೇಳಿದರು. ಹೈಕೋರ್ಟ್‌ನ ವಕೀಲರ ಸಭಾಂಗಣದಲ್ಲಿ ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಕರ್ನಾಟಕ ಹೈಕೋರ್ಟ್, ರಾಷ್ಟ್ರದಲ್ಲೇ ಪ್ರತಿಷ್ಠಿತ ಹೈಕೋರ್ಟ್ ಎಂಬ ಹೆಗ್ಗಳಿಕೆ ಹೊಂದಿದೆ. ಇಲ್ಲಿನ ವಕೀಲರ ಬದ್ಧತೆಗೆ ಇತಿಹಾಸವೇ ಇದೆ. ಇಲ್ಲಿ ಸಾಕಷ್ಟು ತತ್ವಬದ್ಧ ವಕೀಲರಿದ್ದಾರೆ. ವಕೀಲ ವೃಂದ ಈ ನೆಲದ ಕಾನೂನು ಎತ್ತಿ ಹಿಡಿಯಲು ಸದಾ ಶ್ರಮಿಸಬೇಕು ಎಂದರು. ನೀವೆಲ್ಲಾ ನನ್ನನ್ನು ಸಪ್ತ ಮಾತೃಕೆಯ ದೇವತೆಗಳ ನಾಡಿನಿಂದ ಸಪ್ತ ಸಹೋದರಿಯರ ರಾಜ್ಯಕ್ಕೆ ಕಳುಹಿಸಿದ್ದೀರಿ. ಮಣಿಪುರ ಮಹಿಳಾ ಪ್ರಧಾನ ರಾಜ್ಯ. ಇದು ಮಹಾಭಾರತ ಆರಂಭವಾದ ನೆಲೆ. ಬಬ್ರುವಾಹನನ ಸ್ಥಳ. ಚಾಮರಾಜನಗರದ ಯಳಂದೂರಿನ ಗ್ರಾಮದಿಂದ ದೂರದ ರಾಜ್ಯವೊಂದರಲ್ಲಿ ನಾನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿರುವ ಪಯಣದ ಹಿಂದೆ ನಿಮ್ಮ ಪ್ರೀತಿಯೂ ಕಾರಣವಾಗಿದೆ' ಎಂದು ಬಣ್ಣಿಸಿದರು.

# BMRCL ವಿರುದ್ಧ ತೇಜಸ್ವಿ ಸೂರ್ಯ ಸಾಲು ಸಾಲು ಪ್ರಶ್ನೆ

### ಹಲವು ಬಾರೀ ಡೆಡ್ ಲೈನ್ ಕೊಟ್ಟರೂ ಕೆಲಸ ಆಗಿಲ್ಲ, ಯಾವಾಗ ಓಪನ್ ಆಗುತ್ತೆ ಅಂತಾ ಯಾರಿಗೂಗೊತ್ತಿಲ್ಲ

• **ಉದಯವಾಹಿನಿ, ಬೆಂಗಳೂರು**

ಯೆಲ್ಲೋ ಮಾರ್ಗದ ಮೆಟ್ರೋ ಮಾರ್ಗ ವಾಣಿಜ್ಯ ಸಂಚಾರಕ್ಕೆ ಮುಕ್ತಗೊಳಿಸುವ ದಿನಾಂಕ ಮುಂದೂಡಲಾಗುತ್ತಿದೆ. ಹೀಗಾಗಿ ಮತ್ತೆ ವಿಳಂಬದ ಬಗ್ಗೆ ತೇಜಸ್ವಿ ಸೂರ್ಯ ದನಿ ಎತ್ತಿದ್ದಾರೆ. ಜುಲೈ 5 ರಂದು ಲಾಲ್ ಬಾಗ್ ಬಳಿ ಪ್ರತಿಭಟನೆ ನಡೆಯಿತು. ಶೀಘ್ರದಲ್ಲೇ ಮೆಟ್ರೋ ಆರಂಭಿಸುವಂತೆ ಒತ್ತಾಯಿಸಲಾಯಿತು.

ಬೆಂಗಳೂರಿನಲ್ಲಿ ಹಳದಿ ಮೆಟ್ರೋ ಲೈನ್ ವಿಳಂಬವನ್ನು ಖಂಡಿಸಿ ಬಿಜೆಪಿ ಪ್ರತಿಭಟನೆ ನಡೆಸಿತು. ಬಿಜೆಪಿ ಶಾಸಕರು ಮತ್ತು ಸಂಸದರು ಲಾಲ್ ಬಾಗ್ ಪೂರ್ವ ದ್ವಾರದ ಬಳಿ ಜಮಾಯಿಸಿದರು. ಅಲ್ಲಿಂದ ಶಾಂತಿನಗರದ ಬಿಎಂಆರ್‌ಸಿಎಲ್ ಎಂಡಿ ಕಚೇರಿಗೆ ಮೆರವಣಿಗೆ ಹೊರಟರು. ಜಯನಗರ ಶಾಸಕ ಸಿ.ಕೆ.ರಾಮಮೂರ್ತಿ ಸೇರಿದಂತೆ ನೂರಾರು ಬೆಂಬಲಿಗರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**ಆಗಸ್ಟ್ 15 ರೊಳಗೆ ಯಲ್ಲೋ ಲೈನ್ ಓಪನ್ ಆಗುವ ವಿಶ್ವಾಸ:** ಹಳದಿ ಲೈನ್ ಮೆಟ್ರೋ ವಿಳಂಬದ ವಿರುದ್ಧ ಈ ಪ್ರತಿಭಟನೆ ನಡೆಯಿತು. ಜನಪ್ರತಿನಿಧಿಗಳು ಮತ್ತು ಬಿಜೆಪಿ ಮುಖಂಡರು ಬೆಂಬಲ ನೀಡಿದರು. ಸಂಸದ ತೇಜಸ್ವಿ ಸೂರ್ಯ ಸಹ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಆಗಸ್ಟ್ 15 ರೊಳಗೆ ಯಲ್ಲೋ ಲೈನ್ ಓಪನ್ ಆಗುವ ವಿಶ್ವಾಸವಿದೆ ಎಂದು BMRCL ಎಂಡಿ ಮಹೇಶ್ವರ ರಾವ್ ತಿಳಿಸಿದ್ದಾರೆ.

**ಹಳದಿ ಲೈನ್ ಮೆಟ್ರೋ ವಿಳಂಬದ ವಿರುದ್ಧ ಪ್ರತಿಭಟನೆ**



ಉದಯವಾಹಿನಿ ಚಿತ್ರ

ಶಾಸಕರು ಮತ್ತು ಸಂಸದರ ಮೆರವಣಿಗೆ ಹಿನ್ನೆಲೆಯಲ್ಲಿ ಪೊಲೀಸರು ಭದ್ರತೆ ಕೈಗೊಂಡಿದ್ದಾರೆ. ಲಾಲ್ ಬಾಗ್ ಗೇಟ್ ಮುಂದೆ ಕೆಎಸ್‌ಆರ್‌ಪಿ ವಾಹನಗಳು ಮತ್ತು ಪೊಲೀಸರ ಬಂದೋಬಸ್ತ್ ಏರ್ಪಡಿಸಲಾಗಿದೆ. ಸಂಸದ ತೇಜಸ್ವಿ ಸೂರ್ಯ ಮತ್ತು ಸಂಸದ ಪಿಸಿ ಮೋಹನ್ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಹಳದಿ ಲೈನ್ ಮೆಟ್ರೋ ವಿಳಂಬವನ್ನು ಖಂಡಿಸಿ ನಾವು ಪ್ರತಿಭಟನೆ ಮಾಡುತ್ತಿದ್ದೇವೆ ಎಂದು ಸಂಸದ ಸೂರ್ಯ ಹೇಳಿದರು. ತೇಜಸ್ವಿ ಸೂರ್ಯ ಮಾತನಾಡಿ, ಯೆಲ್ಲೋ ಲೈನ್ ಮಾರ್ಗದಲ್ಲಿ ಮೆಟ್ರೋ ಸಂಚಾರ ಶುರುವಾದರೆ ಟ್ರಾಫಿಕ್ ಸಮಸ್ಯೆ ಕಡಿಮೆಯಾಗುತ್ತದೆ ಆದರೆ, ಅದು ಯಾವಾಗ ಶುರುವಾಗುತ್ತದೆ ಎಂದು ಯಾರಿಗೂ ಗೊತ್ತಿಲ್ಲ ಜನರಿಗೆ ನಂಬಿಕೆ ಬರುವ ಹಾಗೆ ಕೆಲಸ ಮಾಡಬೇಕು ಎಂದು ತೇಜಸ್ವಿ ಸೂರ್ಯ ಕಿಡಿಕಾರಿದರು. ಮೆಟ್ರೋ ದರ ಏರಿಕೆ ಬಗ್ಗೆಯೂ ಅವರು ಮಾತನಾಡಿದ್ದಾರೆ. ಎರಡು ತಿಂಗಳ ಹಿಂದೆ ದರ ಏರಿಕೆ ಮಾಡಿದ್ದು, ಅದನ್ನು ವಿರೋಧಿಸಿ ಪಾರ್ಲಿಮೆಂಟ್‌ನಲ್ಲಿ ಧ್ವನಿ ಎತ್ತಿದ್ದೇವೆ. BMRCL ಸಮಿತಿ ಬೇರೆ ಕಡೆ ಅಧ್ಯಯನ ಮಾಡಿ ದರ ಏರಿಕೆ ಮಾಡಿದೆ. ಆದರೆ, ಯಾವ ಆಧಾರದಲ್ಲಿ ಏರಿಕೆ ಮಾಡಿದೆ ಎಂದು ಹೇಳಿಲ್ಲ. ದರ ಹೆಚ್ಚಾದ ಮೇಲೆ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿದರು.

**ನಾಲ್ಕು ವರ್ಷವಾದರೂ ಇನ್ನೂ ಕ್ಲಾರಿಟಿ ಇಲ್ಲ**

**ಮೆಟ್ರೋ ಮತ್ತು ಬಸ್ಸುಗಳು ಮುಖ್ಯ ಸಾರಿಗೆ ವ್ಯವಸ್ಥೆಗಳು. ಆದರೆ, ಒಂದು ಮುಖ್ಯವಾದ ಮೆಟ್ರೋ ಮಾರ್ಗ ಇನ್ನೂ ಶುರುವಾಗಿಲ್ಲ. ದಕ್ಷಿಣ ಬೆಂಗಳೂರಿನಿಂದ ಎಲೆಕ್ಟ್ರಾನಿಕ್ ಸಿಟಿಗೆ ಹೋಗುವ ಹಳದಿ ಮಾರ್ಗನಾಲ್ಕು ವರ್ಷದಿಂದ ಓಪನ್ ಆಗಿಲ್ಲ. ಈ ಮಾರ್ಗ 2021ರಲ್ಲಿ ಶುರುವಾಗಬೇಕಿತ್ತು. ಆದರೆ, ಇನ್ನೂ ಯಾವುದೇ ಮಾಹಿತಿ ಇಲ್ಲ. ನಾಲ್ಕು ವರ್ಷವಾದರೂ ಇನ್ನೂ ಕ್ಲಾರಿಟಿ ಇಲ್ಲ ಎಂದು ಜನರು ಹೇಳುತ್ತಿದ್ದಾರೆ. ಇತ್ತೀಚೆಗೆ ಮೆಟ್ರೋ ಟಿಕೆಟ್ ದರವನ್ನು ಜಾಸ್ತಿ ಮಾಡಿದ್ದಾರೆ. ದರಗಳು ಶೇ 100 ರಷ್ಟು ಹೆಚ್ಚಾಗಿದೆ. ಮೆಟ್ರೋ ದರವನ್ನು ಯಾಕೆ ಹೆಚ್ಚಿಸಿದ್ದಾರೆ ಎಂಬ ವರದಿಯನ್ನು ಸಾರ್ವಜನಿಕರಿಗೆ ತೋರಿಸಬೇಕು ಎಂದು ಜನರು ಒತ್ತಾಯಿಸುತ್ತಿದ್ದಾರೆ. ಮೆಟ್ರೋ ದರ ನಿಗದಿ ಸಮಿತಿ ಶುಲ್ಕ ವರದಿಯನ್ನು ಸಾರ್ವಜನಿಕಗೊಳಿಸಬೇಕು ಎಂದು ತೇಜಸ್ವಿ ಸೂರ್ಯ ಒತ್ತಾಯಿಸಿದರು.**

## ರಾಮಯ್ಯ ಮೆಮೋರಿಯಲ್ ಆಸ್ಪತ್ರೆಗೆ ಜೆಸಿಐ ಮಾನ್ಯತೆ

• **ಉದಯವಾಹಿನಿ, ಬೆಂಗಳೂರು**

ರೋಗಿಗಳ ಆರೈಕೆ, ಸುರಕ್ಷತೆ, ಪರಿಣಾಮಕಾರಿ ಚಿಕಿತ್ಸೆ ಸೇರಿ ವಿವಿಧ ಮಾನದಂಡಗಳನ್ನು ಆಧರಿಸಿ ನೀಡಲಾಗುವ ಜಾಗತಿಕ ಮಟ್ಟದ ಜಾಯಿಂಟ್ ಕಮಿಷನ್ ಇಂಟರ್‌ನ್ಯಾಷನಲ್ (ಜೆಸಿಐ) ಮಾನ್ಯತೆ ರಾಮಯ್ಯ ಮೆಮೋರಿಯಲ್ ಆಸ್ಪತ್ರೆಗೆ ದೊರೆತಿದೆ. ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗೋಕುಲ ಎಜುಕೇಷನ್ ಫೌಂಡೇಷನ್ (ವೈದ್ಯಕೀಯ) ಅಧ್ಯಕ್ಷ ಎಂ.ಆರ್.ಜಯರಾಮ್, ಆಸ್ಪತ್ರೆಯು ಒಂದೇ ಪ್ರಯತ್ನದಲ್ಲಿ ಜೆಸಿಐ ಮಾನ್ಯತೆಯನ್ನು ಪಡೆದುಕೊಂಡಿದೆ. ಇದು ಆಸ್ಪತ್ರೆ ಹೊಂದಿರುವ ಬದ್ಧತೆ ಹಾಗೂ ಗುಣಮಟ್ಟದ ಪ್ರತೀಕ. ಹೈಕೋರ್ಟ್ ನ್ಯಾಯಮೂರ್ತಿಗಳ ನಿಗಾದಲ್ಲಿ ಆಸ್ಪತ್ರೆಯ ನೈತಿಕ ಸಮಿತಿ ಮೇಲ್ವಿಚಾರಣೆಯಲ್ಲಿದೆ. ಚಿಕಿತ್ಸಾ ವಿಧಾನದ ಕುರಿತು ಸಾಕಷ್ಟು ಜಾಗೃತಿ ವಹಿಸಿದ್ದೇವೆ. ಯಾವುದೇ ಅನೈತಿಕ ಪ್ರಯೋಗಗಳು ನಡೆಯದಂತೆ ಕಟ್ಟುನಿಟ್ಟಾಗಿ ನಿಯಮಾವಳಿ ಪಾಲಿಸಲಾಗುತ್ತಿದೆ' ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಫೌಂಡೇಷನ್‌ನ ಆರೋಗ್ಯ ಸೇವೆಗಳ ಮುಖ್ಯ ಕಾರ್ಯನಿರ್ವಾಹಕ ಡಾ. ನಾಗೇಂದ್ರ ಸ್ವಾಮಿ ಎಸ್.ಸಿ., 237 ಮಾನದಂಡಗಳ ಆಧಾರದಲ್ಲಿ ರಾಮಯ್ಯ ಆಸ್ಪತ್ರೆಯನ್ನು ಜೆಐಸಿ ಸಮೀಕ್ಷೆಗೆ ಒಳಪಡಿಸಿತ್ತು. ಎಲ್ಲಾ ಮಾನದಂಡಗಳನ್ನು ಆಸ್ಪತ್ರೆ ಹೊಂದಿದ್ದರಿಂದ ಮಾನ್ಯತೆ ದೊರೆತಿದೆ' ಎಂದರು. ಈ ಮಾನ್ಯತೆ ಪ್ರಯುಕ್ತ ಬಳಿಕ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕೇಂದ್ರ ಸಚಿವ ಪ್ರಲಾದ ಜೋಶಿ, ಬೆಂಗಳೂರು ನಗರ ವೈದ್ಯಕೀಯ ಹಬ್ ಆಗಿ ಮಾರ್ಪಟಿದೆ. ಚಿಕಿತ್ಸೆಗೆಂದು ದೇಶ-ವಿದೇಶದಿಂದ ಸಾವಿರಾರು ಜನರು ನಗರಕ್ಕೆ ಬರುತ್ತಾರೆ. ಅವರು ನಗರದಲ್ಲಿ ಉತ್ತಮ ಆಸ್ಪತ್ರೆ ಯಾವುದೆಂದು ಹುಡುಕುವಾಗ, ಜೆಸಿಐ ಮಾನ್ಯತೆ ಹೆಚ್ಚು ಅನುಕೂಲವಾಗುತ್ತದೆ' ಎಂದು ಹೇಳಿದರು. ಸಂಸ್ಥೆಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಶ್ಲಾಘಿಸಿದರು. ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್.ಸೀತಾರಾಮ್ ಉಪಸ್ಥಿತರಿದ್ದರು.

**ಆಸ್ಪತ್ರೆಯು ನಾಲ್ಕು ಬಾರಿ ರಾಷ್ಟ್ರೀಯ ಮಟ್ಟದ ಎನ್‌ಎಬಿಎಚ್ ಆಸ್ಪತ್ರೆಗಳು ಆರೋಗ್ಯ ಪೂರೈಕೆದಾರರ ರಾಷ್ಟ್ರೀಯ ಮಾನ್ಯತೆ ಮಂಡಳಿ ಪ್ರಮಾಣಪತ್ರ ಪಡೆದಿದೆ. ಪಾರ್ಶ್ವವಾಯು ಎದೆನೋವು ಕೇಂದ್ರದ ಚಿಕಿತ್ಸೆಗಾಗಿ ಅಮೆರಿಕನ್ ಸ್ಟ್ರೋಕ್ ಅಸೋಸಿಯೇಷನ್ (ಎಎಸ್‌ಎ) ಹಾಗೂ ಅಮೆರಿಕನ್ ಹಾರ್ಟ್ ಅಸೋಸಿಯೇಷನ್ (ಎಎಚ್‌ಎ) ಪ್ರಮಾಣಪತ್ರ ದೊರೆತಿದೆ' ಎಂದು ತಿಳಿಸಿದರು.**

## ಅಧಿಕಾರಿಗಳಿಗೆ ಲೋಕಾಯುಕ್ತರ ಎಚ್ಚರಿಕೆ

• **ಉದಯವಾಹಿನಿ, ಬೆಂಗಳೂರು**

ನಗರದ ಸೋಂಪುರ ಕೆರೆಗೆ ಕಲುಷಿತ ನೀರು ಹರಿಯುವುದನ್ನು ತಡೆಗಟ್ಟಲು ಶೀಘ್ರ ಕ್ರಮ ತೆಗೆದುಕೊಳ್ಳದೇ ಇದ್ದರೆ ಕಠಿಣ ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಬಿಬಿಎಂಪಿ, ಬಿಡಿಎ, ಜಲಮಂಡಳಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಲೋಕಾಯುಕ್ತ ಕಚೇರಿಯಲ್ಲಿ ಶುಕ್ರವಾರ ನಡೆದ ವಿಚಾರಣೆಯಲ್ಲಿ ಬಿಬಿಎಂಪಿ, ಬಿಡಿಎ ಮತ್ತು ಜಲಮಂಡಳಿ ಅಧಿಕಾರಿಗಳು ಭಾಗಿಯಾಗಿದ್ದರು. ಇದೇ ಮೇ 13ರಂದು ನಡೆದಿದ್ದ ವಿಚಾರಣೆ ವೇಳೆ ಲೋಕಾಯುಕ್ತರು, 'ಕೆರೆಗೆ ಕಲುಷಿತ ನೀರು ಹರಿಯುವುದನ್ನು ತಡೆಗಟ್ಟಲು ಇಂಟರ್ ಮೀಡಿಯೇಟ್ ಪಂಪಿಂಗ್ ಸ್ಟೇಷನ್ ನಿರ್ಮಿಸಲು ಸ್ಥಳ ಗುರುತಿಸಿ' ಎಂದು ಸೂಚಿಸಿದ್ದರು.

'ಈವರೆಗೂ ಸ್ಥಳ ಗುರುತಿಸಲು ಸಾಧ್ಯವಾಗಿಲ್ಲ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಇದರಿಂದ ತೀವ್ರ ಅಸಮಾಧಾನಗೊಂಡ ಲೋಕಾಯುಕ್ತರು, 2018ರಿಂದ ಈ ಪ್ರಕರಣದ ವಿಚಾರಣೆ ನಡೆಯುತ್ತಿದೆ.



ಉದಯವಾಹಿನಿ ಚಿತ್ರ

**ಕೆರೆ ಸಂರಕ್ಷಿಸದಿದ್ದರೆ ಕಠಿಣ ಕ್ರಮ**

ಹೀಗಿದ್ದರೂ ಸಮಸ್ಯೆ ಪೂರ್ಣ ಪ್ರಮಾಣದಲ್ಲಿ ಬಗೆಹರಿದಿಲ್ಲ ಎಂದು ಆಕ್ಷೇಪಿಸಿದರು.

ಪಂಪಿಂಗ್ ಸ್ಟೇಷನ್ ನಿರ್ಮಿಸಲು ತಕ್ಷಣವೇ ಸ್ಥಳಪರಿಶೀಲನೆ ನಡೆಸಿ, ಅಂತಿಮಗೊಳಿಸಿ. ಮುಂದಿನ ವಿಚಾರಣೆ ವೇಳೆಗೆ ಈ ಕೆಲಸ ಆಗದೇ ಇದ್ದರೆ, ಸಂಬಂಧಿತ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಆದೇಶಿಸಿದರು. ಆಗಸ್ಟ್ 22ಕ್ಕೆ ಮುಂದಿನ ವಿಚಾರಣೆ ನಿಗದಿ ಮಾಡಲಾಗಿದೆ.

## ಮಾಧ್ಯಮ ಸತ್ಯವನ್ನು ಎತ್ತಿ ಹಿಡಿಯಬೇಕು: ನ್ಯಾಯಮೂರ್ತಿ ಅರವಿಂದ ಕುಮಾರ್

• **ಉದಯವಾಹಿನಿ, ಬೆಂಗಳೂರು**

ಮಾಧ್ಯಮ ಸತ್ಯವನ್ನು ಎತ್ತಿ ಹಿಡಿಯಬೇಕು. ಮಾಧ್ಯಮದ ನಾಲಿಗೆಗೆ ಸ್ವಾತಂತ್ರ್ಯವಿರಬಹುದು. ಆದರೆ ವಿವೇಚನೆ ಹೊಂದಿರಬೇಕು.

ಸಂಪಾದಕರು, ನಿರೂಪಕರು, ಡಿಜಿಟಲ್ ಪ್ರಭಾವಿಗಳು ಮಾಧ್ಯಮವನ್ನು ಪ್ರಚೋದನೆಗಾಗಿ ಬಳಸಿಕೊಳ್ಳಬಾರದು ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಅಭಿಪ್ರಾಯಪಟ್ಟರು. ನಗರದಲ್ಲಿ ವಕೀಲರ ವಾಹಿನಿ ಜಸ್ಟೀಸ್ ಕೆ.ಆರ್. ಗೋಪಿವಲ್ಲಭ ಅಯ್ಯಂಗಾರ್ ಸ್ಮಾರಕ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಮಾಧ್ಯಮಗಳ ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ನಡುವಿನ ಸಮತೋಲನ' ಕುರಿತು ಅವರು ಉಪನ್ಯಾಸ ನೀಡಿದರು. ಮಾಧ್ಯಮ ಸಂವಿಧಾನದ ನಾಲ್ಕನೇ ಅಂಗವಾಗಿದ್ದು, ಇದು ಅಧಿಕಾರವನ್ನು ರಕ್ಷಿಸುವುದಲ್ಲ, ಬದಲಿಗೆ ಆಲೋಚನೆಗಳನ್ನು ಪ್ರಚೋದಿಸಬೇಕು. ಆದರೆ ಪ್ರಚೋದನಕಾರಿ ಯಾಗಬಾರದು.



ಉದಯವಾಹಿನಿ ಚಿತ್ರ

ಸ್ವಾತಂತ್ರ್ಯವನ್ನು ಉತ್ತೇಜಿಸುವ ಜೊತೆಗೆ ನಿಷ್ಠುರವಾಗಿರಬೇಕು ಮತ್ತು ಸಮತೋಲನ ಕಾಯ್ದುಕೊಳ್ಳಬೇಕು' ಎಂದರು

'ಮಾಧ್ಯಮಗಳು ತನಿಖಾ ಪತ್ರಿಕೋದ್ಯಮಕ್ಕೆ ಉತ್ತೇಜನ ನೀಡಬೇಕು. ಹಾಗೆಂದು ತೀರ್ಪು ನೀಡಬಾರದು. ಪತ್ರಿಕೋದ್ಯಮ ಎಂದರೆ ಸತ್ಯ ಪರಿಶೋಧನೆಯಾಗಿದ್ದು, ಸಾರ್ವಜನಿಕ ಹಿತಾಸಕ್ತಿ ಜೊತೆಗೆ ಜವಾಬ್ದಾರಿತನದಿಂದ ಮುನ್ನಡೆಯಬೇಕು. ವ್ಯಕ್ತಿಗಳ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಬಾರದು ಎಂದು ವಿವರಿಸಿದರು.

ಮಾಧ್ಯಮ ಸ್ವಾತಂತ್ರ್ಯ ಎಂದರೆ ಅದು ಸಂವಿಧಾನದ ನೈತಿಕತೆಯಾಗಿದ್ದು, ಅದು ಕಾನೂನಿನ ಹಕ್ಕು ಅಲ್ಲ. ಅದು ನೈತಿಕತೆಯನ್ನು ಕಾಪಾಡಿಕೊಂಡು ಹೋಗುವಂತಿರಬೇಕು. ಸ್ವಯಂ ನಿಯಂತ್ರಣಕ್ಕೆ ಒಳಪಡಬೇಕು' ಎಂದು ವಿಶ್ಲೇಷಿಸಿದರು.

ಜಸ್ಟೀಸ್ ಕೆ.ಆರ್. ಗೋಪಿ ವಲ್ಲಭ ಅಯ್ಯಂಗಾರ್ ಅವರ ಮೊಮ್ಮಗಳು ಮತ್ತು ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾಮೂರ್ತಿ ಮಾತನಾಡಿ, ಗೋಪಿ ವಲ್ಲಭ ಅಯ್ಯಂಗಾರ್ ಅವರು ನ್ಯಾಯಾಂಗ ಕ್ಷೇತ್ರದಲ್ಲಿ ಭವ್ಯ ಪರಂಪರೆಯನ್ನು ಹಾಕಿಕೊಟ್ಟಿದ್ದಾರೆ.

ತಪ್ಪು ಮಾಡಿದ್ದರೆ ಅದನ್ನು ಅರ್ಥಮಾಡಿಕೊಂಡು ನಾವೇ ತಿದ್ದುಕೊಳ್ಳುವಂತೆ ಪ್ರೇರೇಪಿಸುತ್ತಿದ್ದರು ಎಂದರು. ಮಾಜಿ ಅಡ್ವಕೇಟ್ ಜನರಲ್, ಹಿರಿಯ ವಕೀಲ ಉದಯ್ ಹೊಳ್ಳ ಮಾತನಾಡಿದರು. ವಕೀಲರ ವಾಹಿನಿಯ ಡಿ.ಎಂ. ಹೆಗಡೆ, ಎಸ್.ಎನ್. ಪ್ರಶಾಂತ್ ಚಂದ್ರ, ಮತ್ತಿತರರು ಉಪಸ್ಥಿತರಿದ್ದರು.

## ಮದುವೆ ನೆಪ: ಸಾಫ್ಟ್‌ವೇರ್ ಎಂಜಿನಿಯರ್‌ಗೆ ರೂ.80 ಲಕ್ಷ ವಂಚನೆ

• **ಉದಯವಾಹಿನಿ, ಬೆಂಗಳೂರು**

ಮ್ಯಾಟ್ರಿಮೋನಿಯಲ್ ವೆಬ್‌ಸೈಟ್ ವೊಂದರಲ್ಲಿ ಸಂಪರ್ಕಕ್ಕೆ ಸಿಕ್ಕಿದ್ದ ಯುವತಿಯೊಬ್ಬಳು, ಸಾಫ್ಟ್‌ವೇರ್ ಇಂಜಿನಿಯರ್ ಅನ್ನು ಮದುವೆ ಆಗುವುದಾಗಿ ನಂಬಿಸಿ ರೂ.80 ಲಕ್ಷ ವಂಚಿಸಿದ್ದಾಳೆ. ರಾಮಮೂರ್ತಿ ನಗರದಲ್ಲಿ ನೆಲಸಿರುವ 32 ವರ್ಷದ ಸಾಫ್ಟ್‌ವೇರ್ ಎಂಜಿನಿಯರ್ ರಿಶಿ (ಹೆಸರು ಬದಲಾವಣೆ ಮಾಡಲಾಗಿದೆ) ಅವರು ನೀಡಿದ ದೂರು ಆಧರಿಸಿ ಪೂರ್ವ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿಯ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 318ರ (ವಂಚನೆ) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸೈಬರ್ ಪೊಲೀಸರು ಹೇಳಿದರು. ವಿಶಾಖಪಟ್ಟಣದ ರೋಹಿಣಿ ವರ್ಮಾ ಎಂಬುದಾಗಿ ಪರಿಚಯಿಸಿಕೊಂಡಿದ್ದ ಯುವತಿ, ಇಂಗ್ಲೆಂಡ್‌ನ ಟ್ರೇಡಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದಾಗಿ





ಸಾಫ್ಟ್‌ವೇರ್ ಎಂಜಿನಿಯರ್ ಬಳಿ ಹೇಳಿಕೊಂಡಿದ್ದಳು. 6 ತಿಂಗಳ ಒಳಗಾಗಿ ಭಾರತಕ್ಕೆ ಬರುತ್ತೇನೆ. ಆಗ ಮದುವೆಯ ಬಗ್ಗೆ ಚರ್ಚಿಸೋಣ ಎಂದು ನಂಬಿಸಿದ್ದಳು. ಅದಾದ ಮೇಲೆ ಇಬ್ಬರೂ ವಾಟ್ಸ್‌ಆಯಪ್‌ನಲ್ಲಿ ಚರ್ಚೆ ನಡೆಸುತ್ತಿದ್ದರು' ಎಂದು ಮೂಲಗಳು ಹೇಳಿವೆ. ಭಾರತ, ಇಂಗ್ಲೆಂಡ್‌ನ ಎರಡು ಪ್ರತ್ಯೇಕ ಸಂಖ್ಯೆಗಳಿಂದ ವಂಚಕಿ ಕರೆ ಮಾಡುತ್ತಿದ್ದಳು. ತಾನು ಕೆಲಸ ಮಾಡುತ್ತಿರುವ ಟ್ರೇಡಿಂಗ್ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಸಿಗಲಿದೆ ಎಂದು ಆಸೆ ತೋರಿಸಿ ನಂಬಿಕೆ ಬರುವಂತೆ ಮಾತುಕತೆ ಮಾಡುತ್ತಿದ್ದಳು. ಲಾಭದ ಹಣದಿಂದ ಮದುವೆಯಾದ ಮೇಲೆ ಇಬ್ಬರೂ ಉತ್ತಮ ಬದುಕು ಕಟ್ಟಿಕೊಳ್ಳೋಣ ಎಂದು ಹೇಳಿದ್ದಳು. ಆಕೆಯ ಮಾತು ನಂಬಿದ್ದ ಸಾಫ್ಟ್‌ವೇರ್ ಎಂಜಿನಿಯರ್, 2025ರ ಫೆಬ್ರುವರಿಯಿಂದ ಹಂತ ಹಂತವಾಗಿ ರೂ.80 ಲಕ್ಷ ಹೂಡಿಕೆ ಮಾಡಿದ್ದರು. ಯುವತಿ ನೀಡಿದ ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ರಿಶಿ ಹಣ ವರ್ಗಾವಣೆ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

**'ಈ ವೇಳೆ ಮತ್ತೊಬ್ಬ ವಂಚಕನ ಪರಿಚಯವಾಗಿ ಹೂಡಿಕೆ ಮಾಡಿದ್ದ ಹಣಕ್ಕೆ ಹೆಚ್ಚಿನ ಲಾಭ ಬಂದಂತೆ ವೆಬ್‌ಸೈಟ್‌ನಲ್ಲಿ ತೋರಿಸುತ್ತಿದ್ದ. ಕೆಲವು ದಿನಗಳ ಬಳಿಕ ರಿಶಿ ಅವರು ಲಾಭದ ಹಣವನ್ನು ತೆಗೆದುಕೊಳ್ಳಲು ಮುಂದಾಗಿದ್ದರು. ತೆರಿಗೆ ಹಾಗೂ ಶುಲ್ಕ ಹಣವನ್ನು ಪಾವತಿಸುವಂತೆ ಸೂಚಿಸಿದ್ದ. ಆಗ ವಂಚನೆಗೆ ಒಳಗಾಗಿರುವುದು ಗೊತ್ತಾಗಿತ್ತು' ಎಂದು ಸೈಬರ್ ಪೊಲೀಸರು ತಿಳಿಸಿದರು.**

## 8 ಬಾರಿ ನಿರಂತರವಾಗಿ ಶಿಕ್ಷಕರ ಮತಕ್ಷೇತ್ರದಿಂದ ಆಯ್ಕೆ: ದಾಖಲೆ ನಿರ್ಮಿಸಿದ ಹೊರಟ್ಟಿ

• **ಉದಯವಾಹಿನಿ, ಬೆಂಗಳೂರು**

ಎಂಟು ಬಾರಿ ನಿರಂತರವಾಗಿ ಶಿಕ್ಷಕರ ಮತಕ್ಷೇತ್ರದಿಂದ ಆಯ್ಕೆಯಾಗಿ 45 ವರ್ಷದ ದಾಖಲೆ ಪೂರೈಸಿರುವ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಶಿಕ್ಷಕರು, ಶಿಕ್ಷಕರ ಸಂಘದ ಪ್ರತಿನಿಧಿಗಳು ಗೌರವಿಸಿದರು. 1980 ಜೂನ್ 30ರಂದು ಬಸವರಾಜ ಹೊರಟ್ಟಿ ಅವರು ಪ್ರಥಮ ಬಾರಿಗೆ ವಿಧಾನ ಪರಿಷತ್ ಸದಸ್ಯರಾದರು. ಅಂದಿನಿಂದ ಸತತವಾಗಿ ಮೇಲ್ಮನೆ ಸದಸ್ಯರಾಗಿರುವ ಅವರು, ಶಿಕ್ಷಕರು ಹಾಗೂ ಸಾರ್ವಜನಿಕರ ಗಟ್ಟಿ ಧ್ವನಿಯಾಗಿ ಇತಿಹಾಸ ಸೃಷ್ಟಿಸಿದ್ದಾರೆ ಎಂದು ಶ್ಲಾಘಿಸಿದರು. ಬೆಳಗಾವಿ, ಬಾಗಲಕೋಟೆಯಿಂದ ಬಂದಿದ್ದ ರೈತರು, ರಾಜ್ಯದ ವಿವಿಧ ಜಿಲ್ಲೆಗಳ ಶಿಕ್ಷಕರು, ಶಿಕ್ಷಕರ ಸಂಘದ ಪ್ರತಿನಿಧಿಗಳು ಬಸವರಾಜ ಹೊರಟ್ಟಿ ಅವರನ್ನು ಅಭಿನಂದಿಸಿದರು.



ಉದಯವಾಹಿನಿ ಚಿತ್ರ


# ಸುರಂಗ ರಸ್ತೆಗಳ ಹಲವು ಆಯಾಮ: ಸಾಧಕ-ಬಾಧಕಗಳು ಇಂತಿವೆ

### ಕೇಂದ್ರ ಟೋಕಿಯೊದಿಂದ ದಕ್ಷಿಣ ಟೋಕಿಯೊಗೆ ನೇರ ಸಂಪರ್ಕ ಕಲ್ಪಿಸುವ ಈ ಸುರಂಗ ಮಾರ್ಗದ ನಿರ್ಮಾಣ ಕಾರ್ಯ

• **ಉದಯವಾಹಿನಿ, ಬೆಂಗಳೂರು**

ನಗರದೊಳಗಿನ ಸಂಚಾರ ದಟ್ಟಣೆಯನ್ನು ತಗ್ಗಿಸುವ ಉದ್ದೇಶದಿಂದ ಸುರಂಗ ರಸ್ತೆ ನಿರ್ಮಿಸುವ ಪರಿಪಾಟ ಜಗತ್ತಿನ ಹಲವೆಡೆ ನಾಲ್ಕಾರು ದಶಕಗಳಿಂದಲೇ ಇದೆ.

ಯೂರೋಪ್, ಉತ್ತರ ಅಮೆರಿಕ, ಆಗ್ನೇಯ ಏಷ್ಯಾದ ದೇಶಗಳು, ಆಸ್ಟ್ರೇಲಿಯಾದಲ್ಲಿ ಇಂತಹ ದೊಡ್ಡ ಜಾಲವೇ ಇದೆ. ಜಗತ್ತಿನ ಕೆಲ ಪ್ರಮುಖ ಸುರಂಗ ರಸ್ತೆ ಜಾಲ, ಅವುಗಳ ಸಾಧಕ-ಬಾಧಕಗಳ ವಿವರ ಈ ಮುಂದಿನಂತಿದೆ.ಯಾಮಾಟೆ ಸುರಂಗ ಜಪಾನ್‌ನ ರಾಜಧಾನಿ ಟೋಕಿಯೋದ ಮೇಲ್ಮನಿಂದ ಸುಮಾರು 50 ಮೀಟರ್ ಆಳದಲ್ಲಿ ನಿರ್ಮಿಸಲಾಗಿರುವ ಸುರಂಗ ಮಾರ್ಗವಿದು. ನಗರದ ವ್ಯಾಪ್ತಿಯಲ್ಲಿ ಇರುವ ಜಗತ್ತಿನ ಅತ್ಯಂತ ಉದ್ದದ ಸುರಂಗ ರಸ್ತೆ ಇದು ಎಂಬುದು ಯಾಮಾಟೆಯ ಹೆಗ್ಗಳಿಕೆ. ಕೇಂದ್ರ ಟೋಕಿಯೊದಿಂದ ದಕ್ಷಿಣ ಟೋಕಿಯೊಗೆ ನೇರ ಸಂಪರ್ಕ ಕಲ್ಪಿಸುವ ಈ ಸುರಂಗ ಮಾರ್ಗದ ನಿರ್ಮಾಣ ಕಾರ್ಯ ಆರಂಭವಾಗಿದ್ದು 1971ರಲ್ಲಿ. ಆದರೆ ಕಾಮಗಾರಿ ಪೂರ್ಣಗೊಂಡಿದ್ದು 2015ರಲ್ಲಿ. ಜನದಟ್ಟಣೆ ಮತ್ತು ವಸತಿ ಪ್ರದೇಶ ಅತೀವವಾಗಿರುವ ನಗರದಾಳದಲ್ಲಿ ನಿರ್ಮಿಸಬೇಕಿದ್ದ ಕಾರಣ, ಕಾಮಗಾರಿ ವಿಪರೀತ ವಿಳಂಬವಾಯಿತು. ಯೋಜನಾ ವೆಚ್ಚ ನೂರಕ್ಕಿಂತಲೂ ಅಧಿಕಪಟ್ಟು ಹೆಚ್ಚಾಯಿತು. ಆರಂಭದಲ್ಲಿ ಉಚಿತ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿತ್ತಾದರೂ, ಅತೀವ ಕಾಮಗಾರಿ ವೆಚ್ಚ ಮತ್ತು ನಿರ್ವಹಣಾ ವೆಚ್ಚ ಭರಿಸಲಾಗದೆ ಅಲ್ಲಿನ ಸ್ಥಳೀಯಾಡಳಿತವು 2018ರಲ್ಲಿ ಬಳಕೆದಾರರ ಶುಲ್ಕ ವಿಧಿಸಿತು. ಪರಿಣಾಮವಾಗಿ ಬಳಕೆದಾರರ ಸಂಖ್ಯೆ ಕಡಿಮೆಯಾಯಿತು. ಭೂಕಂಪದ ಸಾಧ್ಯತೆ ಅತ್ಯಧಿಕವಾಗಿರುವ ಟೋಕಿಯೊದಲ್ಲಿನ ಸುರಂಗದಲ್ಲಿ ಪ್ರಯಾಣಿಸುವುದು ಅಪಾಯ ಎಂಬ ಮಾತೂ ಇದೆ.



ಉದಯವಾಹಿನಿ ಚಿತ್ರ

**ಸುರಂಗ ರಸ್ತೆ ಮಾರ್ಗಕ್ಕೆ ಬಳಕೆದಾರರ ಶುಲ್ಕ**

**18.2 ಕಿ.ಮೀ.- ಸುರಂಗಮಾರ್ಗದ ಉದ್ದ ಎಂ-30 ಸುರಂಗ ಜಾಲ:** ಸ್ಪೇನ್‌ನ ಮ್ಯಾಡ್ರಿಡ್ ನಗರದಡಿ ಹಬ್ಬಿರುವ ಎಂ-5 ಸುರಂಗ ಮಾರ್ಗ ಜಾಲವು ಜಗತ್ತಿನಲ್ಲೇ ಅತ್ಯಂತ ದೊಡ್ಡದು. ಒಟ್ಟು 56 ಕಿ.ಮೀ.ನಷ್ಟು ಉದ್ದದ ಜಾಲವಿದ್ದರೂ, ಸುರಂಗ ಮಾರ್ಗವೊಂದರ ಗರಿಷ್ಠ ಉದ್ದ 3.6 ಕಿ.ಮೀ. ಮಾತ್ರ. ಇಂತಹ ಹತ್ತಾರು ಸುರಂಗ ಮಾರ್ಗಗಳು ಮ್ಯಾಡ್ರಿಡ್‌ನ ಅಡಿಯಲ್ಲಿವೆ.

ನಗರದ ಕೇಂದ್ರ ಭಾಗ ಮತ್ತು ದಕ್ಷಿಣ ಭಾಗದಲ್ಲಿ ಜನದಟ್ಟಣೆ, ಸಂಚಾರ ದಟ್ಟಣೆ ಹೆಚ್ಚು. ಅವುಗಳ ನಿಯಂತ್ರಣಕ್ಕೆ ಎಂದು ಸಣ್ಣ ಸಣ್ಣ ಸುರಂಗಗಳನ್ನು ನಿರ್ಮಿಸುವ ಯೋಜನೆಯನ್ನು ಸ್ಪೇನ್ 90ರ ದಶಕದಲ್ಲಿ ಆರಂಭಿಸಿತು. ಈ ಯೋಜನೆಗಳು ಅಲ್ಲಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿದರೂ, ಪ್ರವೇಶದ್ವಾರಗಳ ನಂತರದ ರಸ್ತೆಗಳಲ್ಲಿ ದಟ್ಟಣೆಯನ್ನು ಹೆಚ್ಚಿಸಿದವು.

ಈ ಸಮಸ್ಯೆಯನ್ನು ಬಗೆಹರಿಸಲು ಇನ್ನಷ್ಟು ಸುರಂಗ ಮಾರ್ಗಗಳನ್ನು ನಿರ್ಮಿಸಲಾಯಿತು. ಆದರೆ ವಾಹನಗಳ ಸಂಖ್ಯೆ ಹೆಚ್ಚುತ್ತಲೇ ಹೋದುದರಿಂದ ಮ್ಯಾಡ್ರಿಡ್ ಜಗತ್ತಿನಲ್ಲೇ ಅತ್ಯಂತ ಉದ್ದದ ಸುರಂಗ ರಸ್ತೆ ಮಾರ್ಗ ಜಾಲ ಹೊಂದುವಂತಾಗಿದೆ.

**56 ಕಿ.ಮೀ., ಮ್ಯಾಡ್ರಿಡ್‌ನ ಅಡಿಯಲ್ಲಿರುವ ಸುರಂಗ ರಸ್ತೆ ಜಾಲದ ಒಟ್ಟು ಉದ್ದ ಎಂ-30 ಸುರಂಗ ಜಾಲ:** ಸ್ಪೇನ್‌ನ ಮ್ಯಾಡ್ರಿಡ್ ನಗರದಡಿ ಹಬ್ಬಿರುವ ಎಂ-5 ಸುರಂಗ ಮಾರ್ಗ ಜಾಲವು ಜಗತ್ತಿನಲ್ಲೇ ಅತ್ಯಂತ ದೊಡ್ಡದು. ಒಟ್ಟು 56 ಕಿ.ಮೀ.ನಷ್ಟು ಉದ್ದದ ಜಾಲವಿದ್ದರೂ, ಸುರಂಗ ಮಾರ್ಗವೊಂದರ ಗರಿಷ್ಠ ಉದ್ದ 3.6 ಕಿ.ಮೀ. ಮಾತ್ರ. ಇಂತಹ ಹತ್ತಾರು ಸುರಂಗ ಮಾರ್ಗಗಳು ಮ್ಯಾಡ್ರಿಡ್‌ನ ಅಡಿಯಲ್ಲಿವೆ. ನಗರದ ಕೇಂದ್ರ ಭಾಗ ಮತ್ತು ದಕ್ಷಿಣ ಭಾಗದಲ್ಲಿ ಜನದಟ್ಟಣೆ, ಸಂಚಾರ ದಟ್ಟಣೆ ಹೆಚ್ಚು. ಅವುಗಳ ನಿಯಂತ್ರಣಕ್ಕೆ ಎಂದು ಸಣ್ಣ ಸಣ್ಣ ಸುರಂಗಗಳನ್ನು ನಿರ್ಮಿಸುವ ಯೋಜನೆಯನ್ನು ಸ್ಪೇನ್ 90ರ ದಶಕದಲ್ಲಿ ಆರಂಭಿಸಿತು.

ಈ ಯೋಜನೆಗಳು ಅಲ್ಲಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿದರೂ, ಪ್ರವೇಶದ್ವಾರಗಳ ನಂತರದ ರಸ್ತೆಗಳಲ್ಲಿ ದಟ್ಟಣೆಯನ್ನು ಹೆಚ್ಚಿಸಿದವು. ಈ ಸಮಸ್ಯೆಯನ್ನು ಬಗೆಹರಿಸಲು ಇನ್ನಷ್ಟು ಸುರಂಗ ಮಾರ್ಗಗಳನ್ನು ನಿರ್ಮಿಸಲಾಯಿತು. ಆದರೆ ವಾಹನಗಳ ಸಂಖ್ಯೆ ಹೆಚ್ಚುತ್ತಲೇ ಹೋದುದರಿಂದ ಮ್ಯಾಡ್ರಿಡ್ ಜಗತ್ತಿನಲ್ಲೇ ಅತ್ಯಂತ ಉದ್ದದ ಸುರಂಗ ರಸ್ತೆ ಮಾರ್ಗ ಜಾಲ ಹೊಂದುವಂತಾಗಿದೆ.

**ದೆಹಲಿ ಸುರಂಗ ಮಾರ್ಗಗಳು**

**ನಗರದ ವ್ಯಾಪ್ತಿಯಲ್ಲಿಯೇ ನೆಲದಾಳದ ಸುರಂಗ ರಸ್ತೆ ಮಾರ್ಗಗಳನ್ನು ಹೊಂದಿರುವ ದೇಶದ ಏಕೈಕ ನಗರ ದೆಹಲಿ (ಮುಂಬೈನಲ್ಲಿ ಸಾಗರದಾಳದಲ್ಲಿ, ಜೈಪುರದಲ್ಲಿ ಬೆಟ್ಟವನ್ನು ಕೊರೆದು ನಿರ್ಮಿಸಿದ ಸುರಂಗ ರಸ್ತೆಗಳಿವೆ) ದೆಹಲಿಯ ಪ್ರಗತಿ ಮೈದಾನ ಮತ್ತು ಇಂಡಿಯಾ ಗೇಟ್ ಮಧ್ಯೆ ನಿರ್ಮಿಸಲಾಗಿರುವ 1.3 ಕಿ.ಮೀ. ಉದ್ದದ ಸುರಂಗ ರಸ್ತೆ ಮಾರ್ಗಕ್ಕೆ ಬಳಕೆದಾರರ ಶುಲ್ಕ ಇಲ್ಲ. ಆದರೆ ವಿನ್ಯಾಸದ ಸಮಸ್ಯೆಯ ಕಾರಣಕ್ಕೆ ಭಾರಿ ಮಳೆ ಬಂದಾಗಲೆಲ್ಲಾ ಸುರಂಗದಲ್ಲಿ ನೀರು ತುಂಬಿಕೊಳ್ಳುತ್ತದೆ. ದ್ವಾರಕಾ ಎಕ್ಸ್‌ಪ್ರೆಸ್‌ವೇ ಮತ್ತು ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಡುವೆ ನಿರ್ಮಿಸಿರುವ ದ್ವಾರಕಾ ಸುರಂಗ ರಸ್ತೆ ಮಾರ್ಗವು 3.6 ಕಿ.ಮೀ.ನಷ್ಟಿದೆ. ಇದೇ ಜೂನ್ 5ರಂದು ಇದು ಬಳಕೆಗೆ ಮುಕ್ತವಾಗಿದ್ದು, ಯಾವುದೇ ಶುಲ್ಕ ವಿಧಿಸುತ್ತಿಲ್ಲ.**

ಅಂತರಾಳದಿಂದ..
EDITORIAL

# ದಲೈ ಲಾಮಾ ಉತ್ತರಾಧಿಕಾರಿ ಆಯ್ಕೆ: ಮತ್ತೆ ಬಯಲಾದ ಚೀನಾ ಹುನ್ನಾರ



ಟಿಬೆಟ್‌ನ ಬೌದ್ಧರ ಆಧ್ಯಾತ್ಮಿಕ ಗುರು ದಲೈ ಲಾಮಾ ಅವರ ಉತ್ತರಾಧಿಕಾರಿಯ ಆಯ್ಕೆಗೆ ತನ್ನ ಸಮ್ಮತಿ ಅಗತ್ಯ ಎಂದು ಪ್ರತಿಪಾದಿಸುವ ಮೂಲಕ ಚೀನಾ ಧಾರ್ಷ್ಟ್ಯ ಪ್ರದರ್ಶಿಸಿದೆ. ಉತ್ತರಾಧಿಕಾರಿ ಆಯ್ಕೆಯ ವಿಷಯದಲ್ಲಿ ಅನಗತ್ಯವಾಗಿ ಮೂಗು ತೂರಿಸುವ ಮೂಲಕ ಧರ್ಮದ ವ್ಯವಹಾರದಲ್ಲಿ ರಾಜಕೀಯ ಮಾಡುವ ಹುನ್ನಾರವನ್ನೂ ಅದು ನಡೆಸಿದೆ. 'ಟಿಬೆಟ್ ವಿಷಯದಲ್ಲಿ ಭಾರತವು ಎಚ್ಚರಿಕೆಯಿಂದ ವರ್ತಿಸಬೇಕು' ಎಂದು ಬೇರೆ ತನ್ನ ನೆರೆಯ ದೇಶಕ್ಕೆ ತಾಕೀತು ಮಾಡಿದೆ. ಟಿಬೆಟ್‌ನ ಬೌದ್ಧಮತದ ಮೇಲೆ ನಿಯಂತ್ರಣ ಸಾಧಿಸುವ ಆಕಾಂಕ್ಷೆಯಿಂದ, ಆ ಧರ್ಮದಲ್ಲಿ ಒಡಕು ಉಂಟುಮಾಡುವ ದುಸ್ಸಾಹಸಕ್ಕೂ ಚೀನಾ ಕೈಹಾಕಿದೆ. ದಲೈ ಲಾಮಾ ಅವರನ್ನು ಪ್ರತ್ಯೇಕತಾವಾದಿ ಎಂದು ಪರಿಗಣಿಸಿರುವ ಚೀನಾ, ಟಿಬೆಟ್‌ನ ಬೌದ್ಧಮತದ ಮೇಲೆ ಹಿಡಿತ ಸಾಧಿಸುವಲ್ಲಿ ಅವರೇ ದೊಡ್ಡ ಅಡೆತಡೆ ಎಂದು ಬಲವಾಗಿ ನಂಬಿದೆ.

**ತೊಂಬತ್ತು ವರ್ಷ ಪೂರೈಸಿರುವ ದಲೈ ಲಾಮಾ ಅವರು ನಿಧನ ಹೊಂದಿದ ಮೇಲೆ, ಆ ಅವಕಾಶವನ್ನು ಬಳಸಿಕೊಂಡು, ಧರ್ಮವನ್ನೇ ಇಬ್ಭಾಗ ಮಾಡಲು ಚೀನಾ ಹವಣಿಸುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ಇದನ್ನೆಲ್ಲ ಗಮನಿಸಿಯೇ ದಲೈ ಲಾಮಾ ಅವರು, ಇಬ್ಬಿಬ್ಬರು ಧರ್ಮಗುರುಗಳಾದರೆ ಯಾರೂ ಅವರಿಗೆ ಗೌರವ ನೀಡುವುದಿಲ್ಲ. ನನ್ನ ಉತ್ತರಾಧಿಕಾರಿ ಚೀನಾದ ಹೊರಗಿನವರಾಗಿರುತ್ತಾರೆ' ಎಂದು ಹೇಳಿದ್ದಾರೆ.ದಲೈ ಲಾಮಾ, ಪಂಚೆನ್ ಲಾಮಾ ಸೇರಿದಂತೆ ಎಲ್ಲಾ ಧರ್ಮಗುರುಗಳ ಆಯ್ಕೆಯು ಧಾರ್ಮಿಕ ಹಾಗೂ ಚಾರಿತ್ರಿಕ ರೀತಿ-ರಿವಾಜುಗಳಿಗೆ ಅನುಗುಣವಾಗಿ ನಡೆಯಲಿದೆ ಮತ್ತು ಸರ್ಕಾರದ ಒಪ್ಪಿಗೆಯನ್ನು ಅದು ಅವಲಂಬಿಸಿದೆ ಎಂದು ಚೀನಾ ಹೇಳಿದೆ.**

ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಜೂನ್ 30ರಂದು ನಡೆದ ತಮ್ಮ 90ನೇ ಹುಟ್ಟುಹಬ್ಬದ ಪೂರ್ವಭಾವಿ ಸಭೆಯಲ್ಲಿ ದಲೈ ಲಾಮಾ ಅವರು ಆಡಿದ ಮಾತು, ಚೀನಾದ ಷಿ ಜಿನ್‌ಪಿಂಗ್ ಆಡಳಿತಕ್ಕೆ ಕಸಿವಿಸಿ ಉಂಟುಮಾಡಿದೆ. ತಮ್ಮ ಉತ್ತರಾಧಿಕಾರಿಯ ಆಯ್ಕೆ ಪ್ರಕ್ರಿಯೆಯು 'ಗಾಡೆನ್ ಫೋಡ್ರಾಂಗ್ ಟ್ರಸ್ಟ್' (ದಲೈ ಲಾಮಾ ಅವರು ಭಾರತದಲ್ಲಿ ಸ್ಥಾಪಿಸಿರುವ ಸ್ವಯಂಸೇವಾ ಸಂಸ್ಥೆ) ಮೂಲಕ ನಡೆಯಲಿದ್ದು, ಟಿಬೆಟ್‌ನ ಬೌದ್ಧಧರ್ಮದ ಸಂಪ್ರದಾಯಕ್ಕೆ ಅನುಗುಣವಾಗಿ ಆ ಪ್ರಕ್ರಿಯೆ ಇರಲಿದೆ ಎಂದು ಅವರು ಪ್ರಕಟಿಸಿದ್ದಾರೆ. ಬೌದ್ಧರ ಈ ಆಧ್ಯಾತ್ಮಿಕ ಗುರು ತಮ್ಮ ಉತ್ತರಾಧಿಕಾರಿಯನ್ನು ತಾವೇ ಆಯ್ಕೆ ಮಾಡುವ ಅಧಿಕಾರ ಹೊಂದಿದ್ದಾರೆ ಎನ್ನುವುದು ಭಾರತ ಸರ್ಕಾರದ ನಿಲುವಾಗಿದೆ. ಹೀಗಾಗಿ, ಭಾರತ ಕೂಡ ಷಿ ಜಿನ್‌ಪಿಂಗ್ ಆಡಳಿತದ ಕೆಂಗಣ್ಣಿಗೆ ಗುರಿಯಾಗಿದೆ. ಟಿಬೆಟ್‌ನ ಸ್ವಾತಂತ್ರ್ಯಕ್ಕಾಗಿ ಚೀನಾದ ಕಮ್ಯುನಿಸ್ಟ್ ನಾಯಕ ಮಾವೋ ವಿರುದ್ಧ ವಿಫಲ ಹೋರಾಟ ನಡೆಸಿ, 1959ರಲ್ಲಿ ತಮ್ಮ ಅನುಯಾಯಿಗಳೊಂದಿಗೆ ಭಾರತಕ್ಕೆ ಪಲಾಯನ ಮಾಡಿದವರು ದಲೈ ಲಾಮಾ. ಟಿಬೆಟ್‌ನಿಂದ ಬಂದ ಅವರ ಲಕ್ಷಾಂತರ ಅನುಯಾಯಿಗಳಿಗೂ ಭಾರತವು ನೆಲೆ ಒದಗಿಸಿದೆ. ಟಿಬೆಟ್‌ನಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವ ಹೆಬ್ಬಯಕೆಯನ್ನು ದಲೈ ಲಾಮಾ ಹೊಂದಿದ್ದಾರೆ. ತನಗೆ ಹೀಗೆ ಸಡ್ಡು ಹೊಡೆದಿರುವುದಕ್ಕಾಗಿಯೇ ಚೀನಾ ಕೂಡ ಈ ಆಧ್ಯಾತ್ಮಿಕ ಗುರುವಿನ ವಿರುದ್ಧ ಗುಡುಗುತ್ತಲೇ ಇದೆ. ಟಿಬೆಟ್‌ನ ಬೌದ್ಧಮತದಲ್ಲಿ ಎರಡನೇ ಅತ್ಯುನ್ನತ ಸ್ಥಾನವಾದ ಪಂಚೆನ್ ಲಾಮಾ ಹುದ್ದೆಗೆ ದಲೈ ಲಾಮಾ ಅವರು 1995ರಲ್ಲಿ ನೇಮಿಸಿದ್ದ ಆರು ವರ್ಷದ ಬಾಲ ಭಿಕ್ಕು ಇದ್ದಕ್ಕಿದ್ದಂತೆ ಅದೃಶ್ಯನಾಗಿದ್ದ. ಮತ್ತೆ ಎಂದಿಗೂ ಆತ ಪತ್ತೆ ಆಗಲಿಲ್ಲ. ಬೇರೊಬ್ಬ ವ್ಯಕ್ತಿಯನ್ನು ಚೀನಾ ಸರ್ಕಾರವೇ ಪಂಚೆನ್ ಲಾಮಾ ಆಗಿ ನೇಮಕ ಮಾಡಿದೆ. ಆದರೆ, ಬೌದ್ಧಮತದ ಬಹುಪಾಲು ಮಂದಿ ಆ ವ್ಯಕ್ತಿಯನ್ನು ಪಂಚೆನ್ ಲಾಮಾ ಎಂದು ಸ್ವೀಕರಿಸಲು ಸಿದ್ಧರಿಲ್ಲ. ದಲೈ ಲಾಮಾ ಅವರ ಉತ್ತರಾಧಿಕಾರಿಯ ನೇಮಕದ ವಿಷಯದಲ್ಲಿ ಚೀನಾದ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷದ ನಿರ್ಧಾರಕ್ಕೆ ಬದ್ಧರಿರುವುದಾಗಿ ಪಂಚೆನ್ ಲಾಮಾ ಘೋಷಿಸಿದ್ದಾರೆ. ಆದರೆ, ದಲೈ ಲಾಮಾ ಅವರ ಉತ್ತರಾಧಿಕಾರಿ ಆಯ್ಕೆಯ ವಿಷಯದಲ್ಲಿ ಭಾರತದ ನಿಲುವು ತುಂಬಾ ಸ್ಪಷ್ಟವಾಗಿದೆ ಮತ್ತು ಸೂಕ್ತವಾಗಿದೆ. 'ದಲೈ ಲಾಮಾ ಅವರೇ ಈ ವಿಷಯದಲ್ಲಿ ನಿರ್ಧಾರ ಕೈಗೊಳ್ಳಬೇಕು. ಅದರಲ್ಲಿ ಯಾವುದೇ ಸರ್ಕಾರಕ್ಕೂ ಪಾತ್ರವಿಲ್ಲ' ಎಂದು ಸ್ಪಷ್ಟಪಡಿಸಿದೆ. ಚೀನಾ-ಭಾರತ ನಡುವೆ ಗಾಲ್ವನ್ ಕಣಿವೆಯಲ್ಲಿ ನಡೆದ ಸಂಘರ್ಷದ ಬಳಿಕ ಎರಡೂ ದೇಶಗಳ ಮಧ್ಯೆ ಸೌಹಾರ್ದದ ಮಾತುಕತೆಗಳು ನಡೆದ ಹೊತ್ತಿನಲ್ಲೇ ಈ ವಿಷಯ ಮುನ್ನೆಲೆಗೆ ಬಂದಿದೆ. 'ಸಂಬಂಧಗಳು ಸಹಜ ಸ್ಥಿತಿಗೆ ಮರಳುತ್ತಿರುವ ಹೊತ್ತಿನಲ್ಲಿ ಭಾರತ ತಳೆದಿರುವ ನಿಲುವು ಮಾತುಕತೆಯ ಹಳಿ ತಪ್ಪಿಸಲಿದೆ' ಎಂಬ ಚೀನಾದ ಎಚ್ಚರಿಕೆಯನ್ನು ಭಾರತ ಸದ್ಯ ಗಣನೆಗೆ ತೆಗೆದುಕೊಂಡಿಲ್ಲ. ಟಿಬೆಟ್ ಹೋರಾಟವನ್ನು ಬೆಂಬಲಿಸುತ್ತಲೇ ಬಂದಿದ್ದ ಅಮೆರಿಕ, ಚೀನಾ ಜೊತೆಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಯಾವ ನಿಲುವು ತಾಳಲಿದೆ ಎಂಬುದು ಕೂಡ ಕುತೂಹಲಕಾರಿ. ದಲೈ ಲಾಮಾ ಅವರ ಉತ್ತರಾಧಿಕಾರಿಯ ಆಯ್ಕೆ ಹೇಗೆ ನಡೆಯಲಿದೆ ಎಂಬ ಸಂಗತಿಯು ಭೌಗೋಳಿಕ ರಾಜಕೀಯ ಯಾವ ದಿಕ್ಕು ಪಡೆಯಲಿದೆ ಎಂಬುದರ ದ್ಯೋತಕವೂ ಆಗಿರಲಿದೆ.


# ಶ್ಯಾಮ್ ಪ್ರಸಾದ್ ಮುಖರ್ಜಿ ರವರ ೧೨೪ನೇ ವರ್ಷದ ಜನ್ಮಜಯಂತಿ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಶ್ಯಾಮ್ ಪ್ರಸಾದ್ ಮುಖರ್ಜಿರವರು 1901 ಜುಲೈ 06 ರಂದು ಕಲ್ಕತ್ತೆಯ ಭವಾನಿಪುರದಲ್ಲಿ ಹುಟ್ಟಿದರು. ಇವರ ತಂದೆ ಪ್ರಸಿದ್ಧ ವಿದ್ವಾಂಸರಾಗಿದ್ದ ಸರ್ ಅಶುತೋಷ್ ಮುಖರ್ಜಿ. ಶ್ಯಾಮ್ ಪ್ರಸಾದ್ ಮುಖರ್ಜಿರವರು ಪ್ರಾಥಮಿಕ, ಪ್ರೌಢಶಿಕ್ಷಣ ತಮ್ಮೂರಿನಲ್ಲಿ ಮುಗಿಸಿ,ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಎಂ.ಎ; ಹಾಗೂ ಎಲ್, ಎಲ್, ಬಿ; ಪದವಿಗಳನ್ನು ಪಡೆದು ಲಂಡನ್‌ಗೆ ತೆರಳಿದರು. ಅಲ್ಲಿ ಅವರು ಬಾರ್- ಅಟ್ ಲಾ ಪರೀಕ್ಷೆ ಮುಗಿಸಿದರಲ್ಲದೇ ಇವರಿಗೆ ಗೌರವ ಡಿ-ಲೀಟ್ ಪದವಿಯು ಸಹ ಲಭ್ಯವಾಯಿತು. ಭಾರತಕ್ಕೆ ಬಂದ ಮೇಲೆ ಕಲ್ಕತ್ತೆಯ ಉಚ್ಚನ್ಯಾಯಾಲಯದಲ್ಲಿ ವಕೀಲರಾಗಿ ಪ್ರಸಿದ್ಧಿ ಪಡೆದರು. ಜೊತೆಯಲ್ಲಿಯೇ ಸಾರ್ವಜನಿಕ ಕ್ಷೇತ್ರದಲ್ಲಿಯೂ ಪ್ರವೇಶಿಸಿದರು. 1929 ರಲ್ಲಿ ಕಾಂಗ್ರೇಸ್ ಅಭ್ಯರ್ಥಿಯಾಗಿ ಬಂಗಾಳ ಶಾಸನಸಭೆಗೆ ಚುನಾಯಿತರಾದರು. ಆದರೆ ತಮ್ಮದೇ ಆದ ಸಿದ್ಧಾಂತ ಆದರ್ಶಗಳಿಗೆ ಬದ್ಧರಾಗಿದ್ದ ಅವರು ಸರ್ಕಾರದೊಂದಿಗೆ ಹೊಂದಾಣಿಕೆಗೆ ಒಪ್ಪದೇ ಶಾಸನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

1931 ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದರು. ಶಾಸನಸಭೆಗಳಲ್ಲಿ ಪ್ರತಿಭಾನ್ವಿತ ವಾಗ್ಮಿ ಎಂದು ಖ್ಯಾತರಾದರು. ಶ್ಯಾಮ್ ಪ್ರಸಾದರು 1934 ರಿಂದ 1938 ರವರೆಗೆ ಕಲ್ಕತ್ತಾ ವಿಶ್ವ ವಿದ್ಯಾಲಯದ ಉಪಕುಲಪತಿಗಳಾಗಿದ್ದರು ಮಹಾಬೋಧಿ ಸೊಸೈಟಿ ಮತ್ತು ಶ್ರೀ ರಾಮಕೃಷ್ಣ ಮಿಷನ್ ಈ ಸಂಸ್ಥೆಗಳ ನೆರವಿನಿಂದ ನೆರೆ ಸಂತ್ರಸ್ತರಿಗೆ ಸಹಾಯ ನೀಡಿದರು.



ಹಿಂದೂ ಮಹಾಸಭೆಗೆ ಸೇರಿ ಅದರ ಪ್ರಮುಖ ನಾಯಕರಾದರು. 1944 ರಲ್ಲಿ ಹಿಂದೂ ಮಹಾಸಭಾ ಅಧ್ಯಕ್ಷರಾದರು. ಮುಂದೆ ರಾಯಲ್ ಏಷ್ಯಾಟಿಕ್ ಸೊಸೈಟಿಯ ಅಧ್ಯಕ್ಷರಾದರು. ಭಾರತ ಸ್ವಾತಂತ್ರ್ಯಗಳಿಸಿದಾಗ ಶಾಮಪ್ರಸಾದರು ಭಾರತದ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿದರು. 1947 ರಲ್ಲಿ ನೆಹರು ಮಂತ್ರಿಮಂಡಲದಲ್ಲಿ ಕೈಗಾರಿಕೆ ಮತ್ತು ನಾಗರೀಕ ಪೂರೈಕೆ ಸಚಿವರಾದರು. ತಮ್ಮ ಅಧಿಕಾರವಧಿಯಲ್ಲಿ ದೇಶದ ಕೈಗಾರಿಕಾಭಿವೃದ್ಧಿಗೆ ಶ್ರಮಿಸಿದರು. ಇವರ ಕಾಲದಲ್ಲಿಯೇ ಬೆಂಗಳೂರಿನಲ್ಲಿ ವಿಮಾನ ತಯಾರಿಕಾ ಕಾರ್ಖಾನೆ, ಚಿತ್ತರಂಜನ್‌ನಲ್ಲಿ ರೈಲ್ವೆಕೋಚ್ ನಿರ್ಮಾಣ ಕೇಂದ್ರ, ಹಾಗೂ ಸಿಂದ್ರಿಯಲ್ಲಿ ಗೊಬ್ಬರ ಕಾರ್ಖಾನೆಗಳು ಸ್ಥಾಪಿತವಾದವು. 1950 ರಲ್ಲಿ ನೆಹರು ಲಿಯಾಖತ್ ಒಪ್ಪಂದ ವಿಚಾರದಲ್ಲಿ ಭಿನ್ನಾಭಿಪ್ರಾಯ ವ್ಯಕ್ತಮಾಡಿದ್ದ ಇವರು ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು.

1951 ರಲ್ಲಿ ಜನಸಂಘದ ಘಟಕಗಳನ್ನು ಒಗ್ಗೂಡಿಸಿ ಅಖಿಲ ಭಾರತೀಯ ಜನಸಂಘದ ಸ್ಥಾಪಕರಾಗಿ ಅದರ ಅಧ್ಯಕ್ಷರಾದರು.

1952ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಬಂಗಾಳದಿಂದ ಜನಸಂಘದ ಅಭ್ಯರ್ಥಿಯಾಗಿ, ಅಲ್ಲಿಂದ ಆಯ್ಕೆಯಾಗಿ ಸಂಸತ್ತಿಗೆ ಪ್ರವೇಶ ಪಡೆದರು. 1953 ರಲ್ಲಿ ಜಮ್ಮು ಪ್ರದೇಶವನ್ನು ಅಕ್ರಮವಾಗಿ ಪ್ರವೇಶಿಸಿದರೆಂಬ ಕಾರಣಕ್ಕಾಗಿ ಕಾಶ್ಮೀರ ಸರ್ಕಾರ ಅವರನ್ನು ಬಂಧಿಸಿ ಶ್ರೀನಗರದಲ್ಲಿ ಅವರನ್ನು ಸ್ಥಾನ ಬದ್ಧತೆಯಲ್ಲಿರಿಸಿತು.

ಅನಾರೋಗ್ಯದಿಂದ ಬಳಲುತ್ತಿದ್ದ ಶ್ಯಾಮ್ ಪ್ರಸಾದ್ ಮುಖರ್ಜಿ ರವರು ಬಂಧನದಲ್ಲಿ ಇದ್ದಾಗಲೇ 1953 ಜೂನ್ 23 ರಂದು ನಿಧನರಾದರು. ಕೇವಲ ಆಗ ಅವರಿಗೆ 52 ವರ್ಷ ವಯಸ್ಸಾಗಿತ್ತು. ಇಂತಹ ಮಹಾ ದೇಶಭಕ್ತ, ಅಖಂಡ ಭಾರತದ ಏಕತೆಗೆ ಶ್ರಮಿಸಿದ ಧೀಮಂತ ನಾಯಕ, ಪ್ರತಿಭಾವಂತ ಸಂಸದೀಯ ಪಟು, ಬದುಕು-ಬರಹ ಮಾಲಿಕೆ, ಲೋಹ ಪುರುಷ, ನ್ಯಾಯವಾದಿ, ಶಿಕ್ಷಣತಜ್ಞರಾಗಿ ಜನಮನ್ನಣೆಯನ್ನು ಗಳಿಸಿದ್ದರು.

ಇಂದು ಅವರ 124 ನೇ ವರ್ಷದ ಜನ್ಮ ಜಯಂತಿ ಈ ಸಂಬಂಧ ಅವರ ಆದರ್ಶಗಳನ್ನ ಪಾಲಿಸುವುದು ನಮ್ಮೆಲ್ಲರ ಧರ್ಮ ಅದೇ ಅವರಿಗೆ ಕೊಡಬೇಕಾದ ದೊಡ್ಡ ಉಡುಗೊರೆ.

# ಪೌರ ಕಾರ್ಮಿಕರ ಸಂಘಟನೆಗಳ ಬೆಂಬಲ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ದಿ ಸಂಘ ಮತ್ತು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತು ವತಿಯಿಂದ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಜುಲೈ 8ರಂದು ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಇದರ ಕುರಿತು ಬಿಬಿಎಂಪಿ ನೌಕರರ ಭವನದಲ್ಲಿ ರಾಜ್ಯಾಧ್ಯಕ್ಷರಾದ ಎ.ಅಮೃತ್ ರಾಜ್ ರವರು ಸಂಘದ ಪದಾಧಿಕಾರಿಗಳು, ಸದಸ್ಯರ ಪೂರ್ವಭಾವಿ ಸಭೆ ಇದೇ ಸಂದರ್ಭದಲ್ಲಿ ಎ.ಅಮೃತ್ ರಾಜ್ ರವರು ಮಾತನಾಡಿ ಬಿಬಿಎಂಪಿಯಲ್ಲಿ 12ಬೇಡಿಕೆ ಮತ್ತು 10ಮಹಾನಗರ ಪಾಲಿಕೆಯ 6ಬೇಡಿಕೆಗಳ ಈಡೇರಿಕೆಗಾಗಿ ಬಿಬಿಎಂಪಿ ಮತ್ತು 10ಮಹಾನಗರ ಪಾಲಿಕೆಯ ಅಧಿಕಾರಿ, ನೌಕರರು ಸಾಮೂಹಿಕ ರಜೆ ಹಾಕಿ ಪ್ರತಿಭಟನೆ ಮಾಡಲಿದ್ದೇವೆ. ಕಛೇರಿ ಮತ್ತು ಹೊರಗಡೆ ಕೆಲಸ ನಿರ್ವಹಿಸುತ್ತಿರುವುದರಿಂದ ಲಾಫ್ ಆಫ್ ಪದ್ದತಿ ಬಿಡಬೇಕು, 6000ಅಧಿಕಾರಿ ಸಿಬ್ಬಂದಿಗಳ ಕೊರತೆ ಇದೆ ಕೊರತೆ ಭರ್ತಿ ಮಾಡಬೇಕು ಹಾಗೂ ವಿದ್ಯಾ ಇಲಾಖೆ ಪ್ರಾಂಶುಪಾಲರು, ಮುಖ್ಯೋಪಾಧ್ಯಯರು ಮೇಲಿನ ಇಲಾಖೆ ವಿಚಾರಣೆ ಕೈಬಿಡಬೇಕು. ಸಹಾಯಕ ಕಾರ್ಯಪಾಲಕ, ಕಾರ್ಯಪಾಲಕ ಅಭಿಯಂತರುಗಳಗೆ ಮುಂಬಡ್ತಿ ನೀಡಬೇಕು, ಇ-ಆಸ್ತಿ ನೋಂದಾಣೆ ಪದ್ದತಿ ಈ ಹಿಂದೆ ಇರುವ ನಿಯಮದಂತೆ ಮುಂದುವರೆಸಬೇಕು. ರಾಜ್ಯ ಸರ್ಕಾರಿ ನೌಕರರಿಗೆ ಸಿಗುವ ಆರೋಗ್ಯ ಸೌಲಭ್ಯ ಪಾಲಿಕೆ ನೌಕರರಿಗೆ ಯೋಜನೆ ಜಾರಿಯಾಗಬೇಕು, ಎರವಲು ಸೇವೆ ಅಧಿಕಾರಿಗಳು ಮಾತ್ರ ಇಲಾಖೆಗೆ ವರ್ಗಾವಣೆ ಮಾಡಬೇಕು. ನೌಕರರ ಜೇಷ್ಠತಾ ಪಟ್ಟಿ ಅಂತಿಮಗೊಳಿಸಬೇಕು.ಹೆಲ್ತ್ ಸೂಪರ್ ವೈಸರ್ ಗಳಿಗೆ ವಾಣಿಜ್ಯ ಪರವಾನಗಿ ನೀಡುವ ಅಧಿಕಾರ ನೀಡಬೇಕು, ಕಾನೂನುಬಾಹಿರವಾಗಿ ಕಾರ್ಯ ನಿರ್ವಹಿಸುತ್ತಿರುವ ಮಾರ್ಷಲ್ ಗಳನ್ನು ರದ್ದುಪಡಿಸಬೇಕು. ಕರ್ನಾಟಕ ರಾಜ್ಯ ನಗರಪಾಲಿಕೆ ನಗರಸಭೆ ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವಚ್ಛತಾ ಪೌರ ಕಾರ್ಮಿಕರ ಮಹಾಸಂಘವು ಸಂಪೂರ್ಣ ಬೆಂಬಲ ನೀಡಿದೆ ಉಪಾಧ್ಯಕ್ಷರಾದ ಕೆ.ಜಿ.ರವಿ ಮತ್ತು ಸಾಯಿಶಂಕರ್, ಎಸ್.ಜಿ.ಸುರೇಶ್, ಎ.ಜೆ.ಬಾಬು, ಎಂ.ಎಲ್.ಎ.ಮಂಜುನಾಥ್, ರುದ್ರೇಶ್, ಸಂತೋಷ್ ಕುಮಾರ್ ನಾಯಕ್, ತಿಪ್ಪೇಶ್ ರವರು, ರೇಣುಕಾಂಬ, ಕೆ.ನರಸಿಂಹ, ಶ್ರೀಧರ್, ಹೆಚ್.ಬಿ.ಹರೀಶ್, ಮಾರ್ಕೆಟ್ ಮಂಜುನಾಥ್ ರವರು ಸದಸ್ಯರುಗಳು ಭಾಗವಹಿಸಿದ್ದರು.

**7ನೇ ವೇತನ ಆಯೋಗದ ಮಹಾನಗರ ಪಾಲಿಕೆ ನೌಕರರಿಗೆ ವಿಸ್ತರಣೆ, ವೃಂದ ಮತ್ತು ನೇಮಕಾತಿಯಲ್ಲಿ ತಿದ್ದುಪಡಿ ಹಾಗೂ ಕೆಜಿಐಡಿ ಮತ್ತು ಜಿಪಿಎಫ್ ಸೌಲಭ್ಯ ಹಾಗೂ ಆರೋಗ್ಯ ಸಂಜೀವಿನಿ ಯೋಜನೆ ಜಾರಿಯಾಗಬೇಕು. ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರಿಗೆ ಪ್ರತಿವರ್ಷ ಕ್ರೀಡಾಕೂಟ ಆಯೋಜನೆ ಮಾಡಬೇಕು. ಮಹಾನಗರ ಪಾಲಿಕೆಯಲ್ಲಿ ಹಲವಾರು ವರ್ಷಗಳಿಂದ ಮುಂಬಡ್ತಿ ನೀಡಿಲ್ಲ ಇಷ್ಟು ಬೇಡಿಕೆ ಈಡೇರಿಕೆಗಾಗಿ ಬಿಬಿಎಂಪಿ ಮತ್ತು 10ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರು ಸಾಮೂಹಿಕ ರಜೆ ಹಾಕಿ ಪ್ರತಿಭಟನೆ ಮಾಡಲಿದ್ದೇವೆ ಎಂದು ಹೇಳಿದರು.**

# ತಪ್ತಮುದ್ರಾಧಾರಣೆ, ಪ್ರಖ್ಯಾತ ವಿದ್ವಾಂಸರುಗಳಿಂದ ಅಖಂಡ ಭಾಗವತ ಪ್ರವಚನ

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪ್ರಥಮ ಏಕಾದಶಿ ಪ್ರಯುಕ್ತ ಜುಲೈ 6, ಭಾನುವಾರ ಬೆಳಗ್ಗೆ 7 ಗಂಟೆಯಿಂದ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದರು ತಮ್ಮಅಮೃತ ಹಸ್ತದಿಂದ ಶ್ರೀಮನ್ ಮೂಲ ರಾಮಚಂದ್ರದೇವರ ಸಂಸ್ಥಾನ ಪೂಜೆಯನ್ನು ನೆರವೇರಿಸಿ ಶ್ರೀ ಸುದರ್ಶನ ಹೋಮದೊಂದಿಗೆ ಪ್ರಾರ್ಥನೆಯನ್ನು ಸಲ್ಲಿಸಿ ತದನಂತರ ಸಹಸ್ರಾರು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಶಿಷ್ಯರಿಗೆ-ಭಕ್ತರಿಗೆ ಬೆಳಗ್ಗೆ 7:30 ರಿಂದ ರಾತ್ರಿ 9:30 ವರೆಗೆ ನಿರಂತರವಾಗಿ ತಪ್ತಮುದ್ರಾಧಾರಣೆಯನ್ನು ಮಾಡಲಿದ್ದಾರೆ.


ಉದಯವಾಹಿನಿ ಚಿತ್ರ


ಎಂದು ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದಿಂದ್ರ ಆಚಾರ್ಯರು ತಿಳಿಸಿದರು,

ಇದೇ ಸಂದರ್ಭದಲ್ಲಿ ನಾಡಿನ ಹೆಸರಾಂತ ಪಂಡಿತರುಗಳಿಂದ ಅಖಂಡ ಭಾಗವತ ಪ್ರವಚನ ಏರ್ಪಡಿಸಿದ್ದು ವಿವರಗಳು ಈ ರೀತಿ ಇವೆ : ಶ್ರೀ ವೇಣುಗೋಪಾಲಾಚಾರ್ಯ (ಪ್ರಥಮ ಸ್ಕಂದ), ಕಡಪ ಶಶಿಧರಾಚಾರ್ಯ (ದ್ವಿತೀಯ ಸ್ಕಂದ), ಶ್ರೀ ಪ್ರಣವಾಚಾರ್ಯ (ತೃತೀಯ ಸ್ಕಂದ), ಶ್ರೀ ಕಡಪ ವಸುಧೇಂದ್ರಾಚಾರ್ಯ (ಚತುರ್ಥ ಸ್ಕಂದ), ಶ್ರೀ ಉಮರ್ಜಿ ಪ್ರಲ್ಹಾದಾಚಾರ್ಯ (ಪಂಚಮ ಸ್ಕಂದ), ಶ್ರೀ ಅಗ್ನಿಹೋತ್ರಿ ವೇಣುಗೋಪಾಲಾಚಾರ್ಯ ಷಷ್ಟಮ ಸ್ಕಂದ, ಶ್ರೀ ಗೊಗ್ಗಿ ಸುಶೀಲೇಂದ್ರಾಚಾರ್ಯ (ಸಪ್ತಮ ಸ್ಕಂದ), ಶ್ರೀ ಸಂಜೀವಾಚಾರ್ಯ ದೇಶಪಾಂಡೆ (ಅಷ್ಟಮ ಸ್ಕಂದ), ಶ್ರೀ ಕಲ್ಯಾ ನರಸಿಂಹಮೂರ್ತಿ ಆಚಾರ್ಯ (ನವಮ ಸ್ಕಂದ), ಶ್ರೀ ಐತರೇಯಾಚಾರ್ಯ (ದಶಮಸ್ಕಂದ ಪೂರ್ವಾರ್ಧ), ಶ್ರೀ ವಿಷ್ಣುಕಶ್ಯಪಾಚಾರ್ಯ (ದಶಮಸ್ಕಂದ ಉತ್ತರಾರ್ಧ), ಶ್ರೀ ತಿರುಮಲಾಚಾರ್ಯ ಕುಲಕರ್ಣಿ (ಏಕಾದಶ ಸ್ಕಂದ), ಶ್ರೀ ವೆಂಕಟನರಸಿಂಹಾಚಾರ್ಯ ರಾಜಪುರೋಹಿತ (ದ್ವಾದಶ ಸ್ಕಂದ).

ಈ ಸಂದರ್ಭದಲ್ಲಿ ಆರ್ ಕೆ ವಾದಿಂದ್ರ ಆಚಾರ್ಯರು ಮಾತನಾಡುತ್ತಾ ತಪ್ತ ಮುದ್ರಾ ಧಾರಣೆಗೆ ಆಗಮಿಸುವ ಸಹಸ್ರಾರು ಶಿಷ್ಯರಿಗೆ ಸಾಲಾಗಿ ಬರಲುಅಚ್ಚುಕಟ್ಟಾದ ವ್ಯವಸ್ಥೆಯನ್ನು ಮಾಡಲಾಗಿದೆ ವಯೋವೃದ್ದವರಿಗೂ ವಿಕಲಚೇತನರಿಗೂ, ಗರ್ಭಿಣಿ ಸ್ತ್ರೀಯರಿಗೂ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು ಈ ಸಂದರ್ಭದಲ್ಲಿ ಶ್ರೀ ನಂದಕಿಶೋರ ಆಚಾರ್ಯರು ಮತ್ತು ಶ್ರೀಮಠದ ಸಿಬ್ಬಂದಿಗಳು ಸ್ವಯಂಸೇವಕರು ಭಾಗವಹಿಸಿದ್ದರು

# ಇದು ಹಾರ್ಟ್ ಅಟ್ಯಾಕ್‌ಗಿಂತಲೂ ಅಪಾಯಕಾರಿ ಯಾಕೆ?

ಹೃದಯಘಾತಕ್ಕೂ ಹೃದಯ ಸ್ತಂಭನಕ್ಕೂ ಕೂಡ ವ್ಯತ್ಯಾಸವಿದೆ. ಹೃದಯವು ತನ್ನ ಕಾರ್ಯಚಟುವಟಿಕೆಯನ್ನು ಥಟ್ಟನೆ ಸ್ಥಗಿತಗೊಳ್ಳುವುದನ್ನು ಅಥವಾ ಇದ್ದಕ್ಕಿದಂತೆ ಹೃದಯ ತನ್ನ ಬಡಿತವನ್ನು ನಿಲ್ಲಿಸಿ ಬಿಡುವುದನ್ನು ಹೃದಯ ಸ್ತಂಭನ ಎನ್ನಲಾಗುತ್ತದೆ. ಹೃದಯಘಾತಕ್ಕೆ ಹೋಲಿಸಿದೆ ಹೃದಯಸ್ತಂಭನ ತುಂಬಾನೇ ಅಪಾಯಕಾರಿ ಎನ್ನಲಾಗುತ್ತದೆ ಕೆಲವರು ನೋಡಲು ದಷ್ಟುಪುಷ್ಟವಾಗಿ ಆರೋಗ್ಯವಾಗಿ ಕಂಡರೂ ಕೂಡ, ಅವರ ಹೃದಯ ಮಾತ್ರ ತುಂಬಾನೇ ವೀಕ್ ಇರುತ್ತದೆ ಹೀಗಾಗಿ ಕೆಲವೊಮ್ಮೆ ಇದ್ದಕ್ಕಿದಂತೆ ಎದುರಾಗುವ ಸಣ್ಣ ಪುಟ್ಟ ಯಾವುದೇ ರೀತಿಯ ಅನಾರೋಗ್ಯದ ಸೂಚನೆಗಳನ್ನು ನಿರ್ಲಕ್ಷ್ಯ ಮಾಡಲು ಹೋಗಬಾರದು ಎನ್ನುತ್ತಾರೆ ಹಲವಾರು ಸಂಶೋಧನೆಗಳು ಹಾಗೂ ಆರೋಗ್ಯ ತಜ್ಞರು ಉದಾಹರಣೆಗೆ ಹೇಳುವುದಾದರೆ ಹೃದಯದ ಬಡಿತದಲ್ಲಿ ಏರುಪೇರು ಕಾಣಿಸಿಕೊಂಡಾಗ, ತಂಪಾದ ವಾತಾವರಣ ಇದ್ದರೂ ಕೂಡ ಮೈ ಬೆವರಲು ಶುರುವಾಗುತ್ತದೆ, ಇದರ ಜೊತೆ-ಜೊತೆಗೆ ತುಂಬಾನ ಸುಸ್ತು ಆಯಾಸ ಕಾಣಿಸಿಕೊಳ್ಳುತ್ತದೆ, ಸ್ವಲ್ಪ ಹೊತ್ತಿನ ನಂತರ ವಾಕರಿಕೆ ಕಾಣಿಸಿಕೊಳ್ಳಲು ಶುರುವಾಗುತ್ತದೆ, ಜೊತೆಗೆ ಕಣ್ಣಿನಲ್ಲಿ ಉರಿ, ಭುಜದ ಹತ್ತಿರ ನೋವು ಕೂಡ ಕಾಣಿಸಿ ಕೊಳ್ಳಲು ಶುರುವಾಗುತ್ತದೆ ಹೀಗೆ ಇವೆಲ್ಲಾ ರೋಗಲಕ್ಷಣಗಳು



ಒಂದೊಂದಾಗಿ ಕಾಣಿಸಿಕೊಳ್ಳಲು ಶುರುವಾಗುತ್ತದೆ. ಆದರೆ ಇವೆಲ್ಲಾ ರೋಗಲಕ್ಷಣಗಳು ಹೃದಯದ ಆರೋಗ್ಯದಲ್ಲಿ ಸಮಸ್ಯೆ ಆಗಿದೆ ಎನ್ನುವುದರ ರೋಗಲಕ್ಷಣಗಳು, ಇವುಗಳನ್ನು ತಪ್ಪಿಯೂ ಕೂಡ ನಿರ್ಲಕ್ಷ್ಯ ಮಾಡಲು ಹೋಗಬಾರದು

**ಎದೆ ನೋವು :** ವ್ಯಾಯಾಮ, ಭಾರ ಎತ್ತುವುದು, ಓಡುವುದು ಮುಂತಾದ ಯಾವುದೇ ಶ್ರಮದಾಯಕ ಕೆಲಸಗಳಲ್ಲಿ ತೊಡಗಿಲ್ಲದಿದ್ದರೂ ಸಹ ನಿರಂತರ ಎದೆ ನೋವು ಬಂದರೆ ಅಥವಾ ಎದೆಯಲ್ಲಿ ಒಂದು ರೀತಿಯ ಬಿಗಿತ ಅಥವಾ ಏನೋ ಒಂದು ರೀತಿಯಲ್ಲಿ ಭಾರ ಆಗುವ ರೀತಿಯಲ್ಲಿ ಕಂಡು ಬಂದರ ಇದು ಕಾರ್ಡಿಯಾಕ್ ಅರೆಸ್ಟ್ ಲಕ್ಷಣವಾಗಿರುವ ಸಾಧ್ಯತೆ ಇರಬಹುದು ಕೂಡಲೇ ಹತ್ತಿರದ ವೈದ್ಯರಲ್ಲಿ ಹೋಗಿ ಮೊದಲು ಬಿಪಿ ಇಸಿಜಿ ಮಾಡಿಸಿಕೊಳ್ಳುವುದು ದೀರ್ಘಕಾಲದವರೆಗೆ ಇರುವ ಸಮಸ್ಯೆಯನ್ನು ನಿರ್ಣಯಿಸುವುದು ಉತ್ತಮ.

**ಹೃದಯದ ಬಡಿತದಲ್ಲಿ ಏರುಪೇರು**

**ತಜ್ಞರು ಕೂಡ ಹೇಳುವ ಪ್ರಕಾರ ಈ ಸ್ಥಿತಿಯು ಹೆಚ್ಚು ಅಪಾಯಕಾರಿ ಏಕೆಂದರೆ ಇದು ಕೆಲವೇ ನಿಮಿಷಗಳಲ್ಲಿ ಸಾವಿಗೆ ಕಾರಣವಾಗಬಹುದು. ಯಾವುದೇ ವಯಸ್ಸಿನಲ್ಲಿ ಸಂಭವಿಸಬಹುದು, ವಿಶೇಷವಾಗಿ ಕುಟುಂಬದ ಇತಿಹಾಸ, ಅಧಿಕ ರಕ್ತದೊತ್ತಡ, ಮಧುಮೇಹ ಅಥವಾ ಹೃದ್ರೋಗ ಇದ್ದರೆ. ಮೇಲಿನ ಯಾವುದೇ ಲಕ್ಷಣಗಳು ನಿಮ್ಮಲ್ಲಿ ಕಂಡುಬಂದರೆ, ತಕ್ಷಣ ನಿಮ್ಮ ವೈದ್ಯರನ್ನು ಸಂಪರ್ಕಿಸಿ ಮತ್ತು ಇಸಿಜಿ,ಎಕೋ ಅಥವಾ ಇತರ ಅಗತ್ಯ ಪರೀಕ್ಷೆಗಳನ್ನು ಮಾಡಿಸಿ. ಇಂದಿನ ಲೇಖನದಲ್ಲಿ ಹೃದಯ ಸ್ತಂಭನದ 5 ಲಕ್ಷಣಗಳು ಯಾವುವು ಎನ್ನುವುದರ ಬಗ್ಗೆ ನೋಡೋಣ....**


# ಹಿಂದೂಸ್ತಾನಿ ಶಾಸ್ತ್ರೀಯ ದಾಸವಾಣಿ ಕಾರ್ಯಕ್ರಮ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಶ್ರೀ ವೆಂಕಟೇಶ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಜುಲೈ 6, ಭಾನುವಾರ ಸಂಜೆ 5-30ಕ್ಕೆ ಶ್ರೀ ಸಮೀರ್ ಕುಲಕರ್ಣಿ ಇವರಿಂದ ಹಿಂದೂಸ್ತಾನಿ ಶಾಸ್ತ್ರೀಯ ದಾಸವಾಣಿ ಹಾರ್ಮೋನಿಯಂ: ಶ್ರೀ ತೇಜಸ್ ಕಾಟೋಟಿ, ತಬಲಾ: ಶ್ರೀ ಪ್ರಹ್ಲಾದ್ ದೇಶಪಾಂಡೆ. ಸ್ಥಳ: ಸುಮಧ್ವ ಧಾಮ, (ಶ್ರೀನಿವಾಸ ಟೆಂಟ್ ಹೌಸ್ ಎದುರು), 6ನೇ ಮುಖ್ಯರಸ್ತೆ, ಕೆ.ಎಸ್.ಆರ್.ಟಿ.ಸಿ. ಲೇಔಟ್, ಚಿಕ್ಕಲ್ಲಸಂದ್ರ, ಬೆಂಗಳೂರು-560061
ಸರ್ವರಿಗೂ ಆತ್ಮೀಯ ಸುಸ್ವಾಗತ

# ರಾಮಾಯಣ



ಭರದ್ವಾಜ ಮುನಿಯಿಂದ ಭರತಾದಿಗಳಿಗೆ ಔತಣ

• ಹಿಂದಿನ ಸಂಚಿಕೆಯಿಂದ 91 ನೆಯ ಅಧ್ಯಾಯ

ಈ ಪ್ರಕಾರ ಭರತನು ಭರದ್ವಾಜಮುನಿಯ ಆಶ್ರಮದಲ್ಲಿ ಔತಣವನ್ನು ಪಡೆದು ಆ ರಾತ್ರಿ ಅಲ್ಲಿಯೇ ಇದ್ದನು. ಆಮೇಲೆ ಗಂಧರ್ವರು ತಮ್ಮ ಲೋಕಗಳಿಗೆ ಹೋದರು. ದೇವಸ್ತ್ರೀಯರು ಭರದ್ವಾಜಮುನಿಯಿಂದ ಬೀಳ್ಕೊಂಡು ತಮ್ಮ ತಮ್ಮ ಲೋಕಗಳಿಗೆ ತೆರಳಿದರು. ಭರತನ ಸೇನೆಯ ಭಟರು ತಮಗೆ ತಕ್ಕ ಯಥೇಷ್ಟವಾದ ಆಹಾರಗಳನ್ನೂ ಉತ್ತಮವಾದ ವಸ್ತ್ರಗಳನ್ನೂ ದಿವ್ಯಗಂಧಾನುಲೇಪನಗಳನ್ನೂ ಸ್ವೀಕರಿಸಿ ದೇವತಾಯೋಗ್ಯವಾದ ಪುಷ್ಪಮಾಲಿಕೆಗಳನ್ನು ಧರಿಸಿ ಕೊಂಡು ಅತಿಹರ್ಷವುಳ್ಳವರಾದರು.

**ಚಿತ್ರಕೂಟ ಸ ರ್ವತಕ್ಕೆ ಭರತನ ಪ್ರಯಾಣ**

ಆಮೇಲೆ ಭರತನು ಸೇನಾಸಮೇತನಾಗಿ ಆ ರಾತ್ರಿಯನ್ನು ಕಳೆದು ಪ್ರಾತಃಕಾಲದಲ್ಲಿದ್ದು ಸಮಸ್ತ ಮುನಿಗಳ ಸಮೂಹದಲ್ಲಿ ಕುಳಿತಿದ್ದ ಭರದ್ವಾಜಮುನಿಯ ಸಮೀಪಕ್ಕೆ ಹೋಗಿ ನಮಸ್ಕಾರ ವನ್ನು ಮಾಡಿ ಕೈಮುಗಿದುಕೊಂಡು ನಿಂತನು. ಆ ಮುನೀಶ್ವರನು ಆತನನ್ನು ನೋಡಿ ಭರತ, ನಿನ್ನೆಯ ರಾತ್ರಿಯನ್ನು ನನ್ನ ಆಶ್ರಮದಲ್ಲಿ ಸುಖವಾಗಿ ಕಳೆದೆಯಾ ನಿನ್ನ ಸೇನೆಗೂ ನಿನಗೂ ಭೋಜನಾದಿಗಳು ತೃಪ್ತಿಕರವಾಗಿದ್ದವೆ ಎಂದು ಕೇಳಿದನು. ಭರತನು ಭಗವನ್, ಇಲ್ಲಿ ಯಾರು ಯಾರಿಗೆ ಯಾವ ಯಾದ ವಸ್ತುಗಳು ಪ್ರಿಯವಾಗಿದ್ದವೋ ಅವರವರು ಆಯಾ ಭೋಜ್ಯವಸ್ತುಗಳನ್ನು ಭುಂಜಿಸಿ ಸಂತುಷ್ಟಚಿತ್ತರಾದರು. ದಾರಿಯ ಬಳಲಿಕೆಯು ಕಳೆಯಿತು. ನನ್ನ ಭಟರು ಬೇಕಾದ ಭಕ್ಷ್ಯಗಳನ್ನು ಕಟ್ಟಿಕೊಂಡರು. ಸಮಸ್ತ ಜನರೂ ಸುಖವಾಗಿರುವರು. ಭರದ್ವಾಜಮುನೀಶ್ವರರೆ, ನನ್ನ ಒಂದು ಬಿನ್ನಪವನ್ನು ಕೇಳಿರಿ. ನಾನು ನಮ್ಮ ಅಣ್ಣನಾದ ಶ್ರೀರಾಮನ ಬಳಿಗೆ ಹೋಗುವಂತೆ ಕೃಪಾದೃಷ್ಟಿಯಿಂದ ನೋಡಿರಿ. ಮಹಾತ್ಮನೂ ಧರ್ಮಜ್ಞನೂ ಆದ ಶ್ರೀರಾಮನಿರುವ ಆಶ್ರಮಕ್ಕೆ ಮಾರ್ಗವನ್ನು ಹೇಳಿರಿ. ಆ ಆಶ್ರಮವು ಇಲ್ಲಿಗೆ ಎಷ್ಟು ದೂರದಲ್ಲಿದೆ ಎಂದು ಕೇಳಿದನು. ಭರದ್ವಾಜಮುನೀಶ್ವರನು ರಾಜಕುಮಾರ, ಇಲ್ಲಿಂದ ಮೂರುಗಾವುದ ದೂರದಲ್ಲಿ ಮಹತ್ತಾದ ಅರಣ್ಯಮಧ್ಯದಲ್ಲಿ ಚಿತ್ರಕೂಟಪರ್ವತವಿದೆ. ಆ ಪರ್ವತದ ಸಮೀಪದಲ್ಲಿ ದೇವತಾ ಯೋಗ್ಯವಾದ ವನವಿದೆ. ಅದರ ಬಡಗಣ ದಿಕ್ಕಿನಲ್ಲಿ ಮಂದಾಕಿನಿಯೆಂಬ ದಿವ್ಯನದಿ ಇದೆ. ನದಿಯ ತೀರಗಳಲ್ಲಿ ಪುಷ್ಪಫಲಗಳಿಂದ ಮನೋಹರವಾದ ಅನೇಕ ವೃಕ್ಷಗಳಿವೆ. ಆ ವನದಲ್ಲಿ ಒಂದು ಪರ್ಣ ಶಾಲೆ ಇದೆ. ಅಲ್ಲಿ ಸೀತಾಲಕ್ಷ್ಮಣಸಮೇತನಾದ ಶ್ರೀರಾಮನು ಇರುವನು. ಇಲ್ಲಿಂದ ತೆಂಕಣ ಮಾರ್ಗವಾಗಿ ಹೋಗಿ ಮುಂದೆ ಬಲಪಾರ್ಶ್ವವಾಗಿ ತಿರುಗಿ ಹೋದರೆ ಚಿತ್ರಕೂಟಪರ್ವತದಲ್ಲಿ ಶ್ರೀರಾಮನನ್ನು ಕಾಣುವೆ ಎಂದು ಹೇಳಿದನು.ಆಗ ದಶರಥರಾಯನ ಸ್ತ್ರೀಯರು ಭರದ್ವಾಜಮುನೀಶ್ವರನ ಸಮೀಪಕ್ಕೆ ಬಂದರು. ಕೌಸಲ್ಯಾ ದೇವಿ ಸುಮಿತ್ರಾದೇವಿಯರು ಆ ಮುನೀಶ್ವರನ ಪಾದಗಳಿಗೆ ನಮಸ್ಕಾರವನ್ನು ಮಾಡಿದರು. ಆಮೇಲೆ ಕೈಕೇಯಿದೇವಿಯು ಮಹಾಲಜ್ಜಿತಳಾಗಿ ನಡುಗುತ್ತ ಭರದ್ವಾಜಮುನಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿದಳು. ವ್ರತಸ್ಥನಾದ ಆ ಮುನಿಯು ಭರತನನ್ನು ಕುರಿತು ''ಭರತ, ಇವರು ಮೂವರು ಯಾರು ಇವರ ಸ್ವರೂಪವನ್ನು ಹೇಳು ಎಂದು ಕೇಳಿದನು.

ಮುಂದುವರಿಯುವುದು...

# ಕೊಲೆಸ್ಟ್ರಾಲ್ ಜಮೆಯಾದರೆ, ಕಾಲುಗಳಲ್ಲಿ ನಿರಂತರ ನೋವು ಕಾಡುತ್ತದೆಯಂತೆ!

ಕೆಲವೊಮ್ಮೆ ಕಾಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಸಾಮಾನ್ಯ ಸಮಸ್ಯೆ, ಆದರೆ ಈ ನೋವು ದೀರ್ಘಕಾಲದವರೆಗೆ ಮುಂದುವರಿದರೆ ಅದನ್ನು ನಿರ್ಲಕ್ಷ್ಯ ಮಾಡಲು ಹೋಗ ಬಾರದು, ಯಾಕೆಂದ್ರೆ ಕೆಲವೊಮ್ಮೆ ಕಾಲಿನ ನರಗಳಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಅಂಶವು ಜಮೆಯಾದರೆ ಕೂಡ ಈ ರೀತಿಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತದೆ. ಇದ್ದಕ್ಕಿದಂತೆ ಕಾಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಕೂಡ ಇಂದಿನ ದಿನಗಳಲ್ಲಿ ಸಾಮಾನ್ಯ ಸಮಸ್ಯೆಯಾಗಿ ಬಿಟ್ಟಿದೆ. ದೇಹದ ಸಂಪೂರ್ಣ ಭಾರವನ್ನು ಹೊತ್ತುಕೊಳ್ಳುವಂತಹ ಕಾಲುಗಳ ಆರೈಕೆ ಬಗ್ಗೆ ನಮ್ಮಲ್ಲಿ ಇರುವಂತಹ ನಿರ್ಲಕ್ಷ್ಯದಿಂದಾಗಿ, ಈ ಸಮಸ್ಯೆ ಬಹುತೇಕರಲ್ಲಿ ಹೆಚ್ಚಾಗುತ್ತಿದೆ.

ನಮ್ಮಲ್ಲಿ ಹೆಚ್ಚಿನವರು ಕಾಲುಗಳಲ್ಲಿ ನೋವು ಮತ್ತು ಅಸ್ವಸ್ಥತೆ ಉಂಟಾದಾಗಲೆಲ್ಲಾ, ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಆದರೆ ನಿಮಗೆ ಗೊತ್ತಿರಲಿ ಒಂದು ವೇಳೆ ಕಾಲಿನ ನರಗಳಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಅಂಶವು ಜಮೆಯಾಗಿಬಿಟ್ಟರೆ ಕಾಲಿನಲ್ಲಿ ವಿಪರೀತ ನೋವು, ಸೆಳೆತ, ನಡೆಯುವಾಗ ಬಳಲಿಕೆ ನಿಶ್ಯಕ್ತಿ, ಸುಸ್ತು ಹೀಗೆ ನಾನಾ ರೀತಿಯಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳಲು ಶುರುವಾಗುತ್ತದೆ!

**ಕೊಲೆಸ್ಟ್ರಾಲ್ ಹೆಚ್ಚಾದರೆ :** ನಿಮಗೆ ಗೊತ್ತಿರಲಿ ಅಧಿಕ ಕೊಲೆಸ್ಟ್ರಾಲ್ ಎನ್ನುವುದು ಅಪಾಯಕಾರಿ ಆರೋಗ್ಯ ಸಮಸ್ಯೆ, ಈ ಕಾಯಿಲೆಯನ್ನು ನಿರ್ಲಕ್ಷ್ಯ ಮಾಡಿದರೆ ಮುಂದಿನ ದಿನಗಳಲ್ಲಿ ಹೃದಯಕ್ಕೆ ಆಪತ್ತು ಕಟ್ಟಿಟ್ಟ ಬುತ್ತಿ ಎನ್ನುತ್ತಾರೆ ತಜ್ಞರು. ಅಷ್ಟೇ ಅಲ್ಲ ಈ ಕಾಯಿಲೆಯಿಂದಾಗಿ ದೇಹದ ಇತರ ಭಾಗಗಳಲಿಯೂ ಕೂಡ ಪರಿಣಾಮ ಬೀರಬಹುದು! ಪ್ರಮುಖವಾಗಿ ಎದೆಯಲ್ಲಿ ನೋವು, ಉಸಿರಾಟದ ತೊಂದರೆ, ಪಾರ್ಶ್ವವಾಯು ಅಪಾಯ ಕೂಡ ಇದರಿಂದ ಹೆಚ್ಚಾಗ ಬಹುದು, ಅಂತಹ ಪರಿಸ್ಥಿತಿಯಲ್ಲಿ, ಕಾಲಿನ ಚಲನೆಯ ಮೇಲೆ ಪರಿಣಾಮ ಬೀರುವ ಕೊಲೆಸ್ಟ್ರಾಲ್ ಮಟ್ಟಗಳು ಹೃದಯ ಸಮಸ್ಯೆಗಳ ಆರಂಭಿಕ ಎಚ್ಚರಿಕೆ ಸಂಕೇತವಾಗಿ ರಬಹುದು ಎಂಬುದನ್ನು ಮರೆಯ ಬಾರದು!

**ಅಧಿಕ ಕೊಲೆಸ್ಟ್ರಾಲ್ ಮತ್ತು ಪಾದದ ತೊಂದರೆ:**

**ಅದಕ್ಕೆ ಕಾರಣವೇನು:** ಹೈಪರ್ಲಿಪಿಡೆಮಿಯಾ ಎಂದೂ ಕರೆಯಲ್ಪಡುವ ಅಧಿಕ ರಕ್ತದ ಕೊಲೆಸ್ಟ್ರಾಲ್ ಮಟ್ಟಗಳು ಹೆಚ್ಚಾದರೆ, ದೇಹದ ಅಪಧಮನಿಗಳು ಸರಿಯಾಗಿ ಕೆಲಸ ಮಾಡುವುದನ್ನು ನಿಲ್ಲಿಸುತ್ತವೆ. ಇದು ಮೊದಲು ನಮ್ಮ ಹೃದಯ ದಲ್ಲಿ ಮತ್ತು ಸುತ್ತಮುತ್ತಲಿನ ಅಪಧಮನಿಗಳ ಕಾರ್ಯ ನಿರ್ವಹಣೆಯನ್ನು ನಿಲ್ಲಿಸುತ್ತದೆ. ಈ ಕಾರಣಕ್ಕಾಗಿ, ಇದು ಕೆಲವೊಮ್ಮೆ ಕಾಲುಗಳಲ್ಲಿರುವ ಅಂಗಗಳು ಸೇರಿದಂತೆ ಇತರ ಸ್ಥಳಗಳ ಅಪಧಮನಿಗಳ ಮೇಲೆ ಪರಿಣಾಮ ಬೀರುತ್ತದೆ. ಇದು ಬಾಹ್ಯ ಅಪಧಮನಿ ಕಾಯಿಲೆ ಅಥವಾ PAD ಗೆ ಕಾರಣ ವಾಗುತ್ತದೆ, ಏಕೆಂದರೆ ಕಾಲುಗಳು ಚಲನೆ ಮತ್ತು ಕಾರ್ಯಕ್ಕೆ ಸಾಕಷ್ಟು ರಕ್ತದ ಹರಿವನ್ನು ಪಡೆಯುವುದಿಲ್ಲ.

**ಕಾಲು ನೋವು ಹೃದಯಾಘಾತದ ಸಂಕೇತವಾಗಿರಬಹುದು :** ಕಾಲು ನೋವು ಹೆಚ್ಚಾಗಿ ಅಧಿಕ ಕೊಲೆಸ್ಟ್ರಾಲ್ ಅಥವಾ ಹೃದಯ ಸಂಬಂಧಿ ಸಮಸ್ಯೆಗಳ ಸಂಕೇತವಾಗಿರಬಹುದು.ಕೆಲವೊಮ್ಮೆ ನೋವು ಹೆಚ್ಚಾದರೆ ಜನರಲ್ಲಿ ಆರೋಗ್ಯ ಸಮಸ್ಯೆಗಳು ಕಾಣಿಸಿ ಕೊಳ್ಳುವ ಸಾದ್ಯತೆ ಹೆಚ್ಚು, ಅದರಲ್ಲೂ ತೀವ್ರ ಅಸ್ವಸ್ಥತೆ ಮತ್ತು ಹೃದಯಾಘಾತ ಅಥವಾ ಪಾರ್ಶ್ವವಾಯುವಿಗೆ ಒಳಗಾಗುವ ಅಪಾಯ ಹೆಚ್ಚು ಎನ್ನುತ್ತಾರೆ ತಜ್ಞರು.

ಆದಾಗ್ಯೂ, ಕೆಲವೊಮ್ಮೆ ಈ ರೀತಿಯ ನೋವು ನಡೆಯುವುದ ರಿಂದಲೂ ಉಂಟಾಗುತ್ತದೆ, ಆದರೆ ಈ ಸಮಯದಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದಾಗ ಪರಿಹಾರ ಸಿಗುತ್ತದೆ.

**ಕಾಲು ನೋವು**

**ಯಾವುದೇ ಆರೋಗ್ಯ ಸಮಸ್ಯೆ ಇಲ್ಲದೆ ಕಾಲು ನೋವು ಅನುಭವಿಸುವುದು ಕೆಲವು ಸಂದರ್ಭಗಳಲ್ಲಿ ಕೆಟ್ಟದ್ದಾಗಿ ರಬಹುದು, ಕೊಲೆಸ್ಟ್ರಾಲ್ ಇದಕ್ಕೆ ಮುಖ್ಯ ಕಾರಣ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ!ಇದಲ್ಲದೆ, ದೇಹದಲ್ಲಿ ಪಿಎಡಿ ಇರುವವರಿಗೆ, ಕಾಲು ನೋವು ಹೆಚ್ಚಾಗಿ ಆರಂಭಿಕ ಹೃದಯ ತೊಂದರೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳ ಸಂಕೇತವಾಗಿದೆ.**



## ಪ್ರವಾಹ ಪರಿಸ್ಥಿತಿ ಎದುರಿಸಲು ಸನ್ನದ್ಧರಾಗಿ: ಜಿಲ್ಲಾಧಿಕಾರಿ ಸಂಗಪ್ಪ

• **ಉದಯವಾಹಿನಿ, ಬಾಗಲಕೋಟೆ**

ಮಳೆಗಾಲದಲ್ಲಿ ಎದುರಾಗಬಹುದಾದ ತುರ್ತು ಪರಿಸ್ಥಿತಿ-ಪ್ರವಾಹ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಮುನ್ನೆಚ್ಚರಿಕೆಯಾಗಿ ಸನ್ನದ್ಧರಾಗಿರುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ ಹಳೆಯ ಸಭಾಂಗಣದಲ್ಲಿ ಪ್ರವಾಹ ಪರಿಸ್ಥಿತಿ ನಿಯಂತ್ರಣಕ್ಕೆ ನಿಯೋಜಿಸಲಾದ ನೋಡಲ್ ಅಧಿಕಾರಿಗಳು ಹಾಗೂ ವಿವಿಧ ತಾಲ್ಲೂಕು ತಹಶೀಲ್ದಾರ, ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರವಾಹ ಪರಿಸ್ಥಿತಿ ನಿರ್ವಹಣೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಜನ-ಜಾನುವಾರುಗಳ ರಕ್ಷಣೆ,



ಉದಯವಾಹಿನಿ ಚಿತ್ರ

> ಮಳೆಗಾಲ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸಂಭವವಿರುವುದರಿಂದ ಮುಂಚಿತವಾಗಿಯೇ ನಿಯಂತ್ರಣಕ್ಕಾಗಿ ಎಲ್ಲಾ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ವೈದ್ಯಕೀಯ ವ್ಯವಸ್ಥೆಯೊಂದಿಗೆ ಔಷಧಿ ದಾಸ್ತಾನುಗಳನ್ನು ಸಂಗ್ರಹಿಸಿ ಇಟ್ಟಿರಬೇಕು. ಮಳೆ ನೀರು ಒಂದೆಡೆ ನಿಲ್ಲದಂತೆ ನೋಡಿಕೊಳ್ಳುವಂತೆ ಜನರಲ್ಲಿ ಸೂಕ್ತ ಜಾಗೃತಿ ಮೂಡಿಸಬೇಕು. ಮಳೆಗಾಲದ ಸಂದರ್ಭದಲ್ಲಿ ಗಿಡ-ಮರಗಳು ಬಿದ್ದು, ಯಾವುದೇ ಜೀವ ಹಾನಿ ಸಂಭವಿಸದಂತೆ ನೋಡಿಕೊಳ್ಳಬೇಕು. ಅವಗಡ್ ಸಂಭವಿಸಬಹುದಾದ ಪ್ರದೇಶಗಳಲ್ಲಿ ಅಗತ್ಯ ಕ್ರಮ ವಹಿಸಲು ತಿಳಿಸಿದರು. -ಜಿಲ್ಲಾಧಿಕಾರಿ

ಪುರ್ನವಸತಿ, ಪರಿಹಾರ, ಕಾಳಜಿ ಕೇಂದ್ರಗಳ ಸ್ಥಾಪನೆ ಸೇರಿದಂತೆ ಮುಂಜಾಗ್ರತೆಯಾಗಿ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಅವರು ಸೂಚನೆ ನೀಡಿದರು. ರಕ್ಷಣಾ ಸಾಮಗ್ರಿಗಳನ್ನು ಸುಸಜ್ಜಿತವಾಗಿಟ್ಟುಕೊಳ್ಳಬೇಕು. ನುರಿತ ಈಜುಗಾರರು, ಹಾವಾಡಿಗರು ಸೇರಿದಂತೆ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಿಕೊಟ್ಟುಕೊಳ್ಳಬೇಕು. ಪ್ರವಾಹ ಪರಿಸ್ಥಿತಿ ನಿಯಂತ್ರಣಕ್ಕಾಗಿ ನೇಮಕ ಮಾಡಲಾದ ನೋಡಲ್ ಅಧಿಕಾರಿಗಳು, ಸಂಬಂಧಿಸಿದ ತಾಲ್ಲೂಕುಗಳಿಗೆ ಭೇಟಿ ನೀಡಿ ಗ್ರಾಮಗಳ ಪರಿಸ್ಥಿತಿಯನ್ನು ಅವಲೋಕಿಸಬೇಕು. ಪ್ರತಿ ವಾರಕ್ಕೊಮ್ಮೆ ಸಭೆ ನಡೆಸಿ, ತಾಲ್ಲೂಕುಗಳಲ್ಲಿ ನಡೆದ ಸಭೆಗಳ ಮಾಹಿತಿ ಜಿಲ್ಲಾಡಳಿತದ ಗಮನಕ್ಕೆ ತರಬೇಕು. ಸಭೆಗಳಲ್ಲಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು. ಮಳೆ-ಗಾಳಿ ರಭಸಕ್ಕೆ ವಿದ್ಯುತ್ ತಂತಿ ಹರಿದು ಬಿದ್ದ ಸಂದರ್ಭದಲ್ಲಿ ಹೆಸ್ಕಾಂ ಇಲಾಖೆ ಅಧಿಕಾರಿಗಳು ತಕ್ಷಣ ಇಂತಹ ಅಪಾಯವನ್ನುಂಟು ಮಾಡುವ ತಂತಿ, ಕಂಬಗಳ ತೆರವುಗೊಳಿಸ ಕ್ರಮ ವಹಿಸಬೇಕು. ಪ್ರವಾಹ ಪರಿಸ್ಥಿತಿ ಸಂದರ್ಭದಲ್ಲಿ ಹಾನಿವುಂಟಾದಲ್ಲಿ ನಿಗದಿತ ಕಾಲಾವಧಿಯಲ್ಲಿ ಪರಿಹಾರ ಒದಗಿಸಲು ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು. ಒಟ್ಟಾರೆ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಮುಂಜಾಗ್ರತೆ ವಹಿಸುವ ಮೂಲಕ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಬಾರದು. ಯಾವುದೇ ಘಟನೆ ಸಂಭವಿಸಿದ್ದಲ್ಲಿ ಅಧಿಕಾರಿಗಳನ್ನೇ ನೇರ ಹೊಣೆಗಾರನ್ನಾಗಿಸಿ ಮಾಡಲಾಗುವುದೆಂದು ತಿಳಿಸಿದರು.

## ರಿಯಾಯಿತಿ ದರದಲ್ಲಿ ಸಕ್ಕರೆ ವಿತರಣೆ

• **ಉದಯವಾಹಿನಿ, ಚನ್ನಮ್ಮನ ಕಿತ್ತೂರು**



ಸಮೀಪದ ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಸಿದ್ದಸಮುದ್ರ ಎಲ್ಲಾ ಸದಸ್ಯರಿಗೆ ರಿಯಾಯಿತಿ ದರದಲ್ಲಿ 50 ಕೆ.ಜಿ. ಸಕ್ಕರೆ ಕೊಡಲು ಆಡಳಿತ ಮಂಡಳಿ ನಿರ್ಧರಿಸಿದೆ ಎಂದು ಕಾರ್ಖಾನೆ ಅಧ್ಯಕ್ಷ ಬಸವರಾಜ ಬಾಳೇಕುದರಗಿ ಹೇಳಿದರು. ಕಾರ್ಖಾನೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದವರು ಪ್ರತಿ ಕೆ.ಜಿಗೆ 20 ರೂ. ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲಾಗುವುದು. ಜುಲೈ 31ರ ಒಳಗಾಗಿ ಶೇರುದಾರರು ಸಕ್ಕರೆಯನ್ನು ತೆಗೆದುಕೊಂಡು ಹೋಗಬೇಕು. ಒಂದು ವೇಳೆ ಸಕ್ಕರೆ ವಿತರಣಾ ಪತ್ರ ತಲುಪದಿರುವ ಸದಸ್ಯರು ಸಕ್ಕರೆ ತೆಗೆದುಕೊಳ್ಳಲು ಕಾರ್ಖಾನೆಗೆ ಬರುವಾಗ ಕಾರ್ಖಾನೆಯಿಂದ ನೀಡಿದ ಗುರುತಿನ ಪತ್ರ, ಅಥವಾ ಶೇರು ಪ್ರಮಾಣ ಪತ್ರ ಜೆರಾಕ್ಸ್ ಪ್ರತಿ ನೀಡಿ ಸಕ್ಕರೆ ತೆಗೆದುಕೊಂಡು ಹೋಗಬೇಕೆಂದು ತಿಳಿಸಿದರು. ಬೆಳಿಗ್ಗೆ 10 ರಿಂದ ಸಾಯಂಕಾಲ 5 ಗಂಟೆಯವರೆಗೆ ಮಾತ್ರ ಸಕ್ಕರೆ ವಿತರಿಸಲಾಗುವುದು. ಇದರ ಲಾಭ ಎಲ್ಲಾ ಸದಸ್ಯರು ಪಡೆದುಕೊಳ್ಳಿ ಎಂದು ತಿಳಿಸಿದರು.

## ಶಿಕ್ಷಣದಿಂದ ಬದಲಾವಣೆ ಸಾಧ್ಯ

• **ಉದಯವಾಹಿನಿ, ಗುಳೇದಗುಡ್ಡ**

ವಿದ್ಯಾರ್ಥಿಗಳು ತಮ್ಮ ಜೀವನವನ್ನು ಉನ್ನತಗೊಳಿಸಲು ಪ್ರಬಲವಾದ ಅಸ್ತ್ರವೇ ಶಿಕ್ಷಣ. ನಿಮ್ಮ ಗುರಿಯನ್ನು ಸಾಧಿಸಲು ಸತತ ಪ್ರಯತ್ನ ಮಾಡಬೇಕು. ದೃಢ ನಿಶ್ಚಯದಿಂದ ಓದಿದ್ದೆ ಆದರೆ ಸಮಾಜಕ್ಕೆ ನೀವುಗಳು ಒಳ್ಳೆಯ ಕೊಡುಗೆಯನ್ನು ನೀಡುತ್ತೀರಿ ಎಂದು ಪಟ್ಟಣದ ವ್ಯಾಪಾರಸ್ಥ ಪಿ.ಎನ್. ಪವಾರ ಹೇಳಿದರು. ಪಟ್ಟಣದ ಬಾಲಕರ ಪಪೂ ಕಾಲೇಜಿನ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ವಿತರಣೆ ಮಾಡಿ ಮಾತನಾಡಿ, ಮುಂದೊಂದು ದಿನ ನೀವು ಕಲಿತ ಇದೇ ಕಾಲೇಜಿನಲ್ಲಿ ಇದೇ ರೀತಿ ದಾನ ಮಾಡುವ ಸಾಮರ್ಥ್ಯವನ್ನು ಹೊಂದಬೇಕು ಎಂದರು.

## ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಸಂದೇಶ: ಓರ್ವ ಆರೋಪಿಯ ಬಂಧನ

• **ಉದಯವಾಹಿನಿ, ಮಂಗಳೂರು**

ಮಂಗಳೂರು ನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಸಮಾಜದ ಶಾಂತಿ ಕದಡಲು ಹಾಗೂ ಸೌಹಾರ್ದತೆಗೆ ಭಂಗ ತರಲು ಪ್ರಯತ್ನಿಸುತ್ತಿರುವವರ ಪತ್ತೆಗಾಗಿ ಮಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಈ ತಂಡಗಳು ಇದೀಗ ಓರ್ವ ಆರೋಪಿಯನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿವೆ. ಬಂಧಿತನನ್ನು ಉಡುಪಿ ಜಿಲ್ಲೆಯ ಕಾರ್ಕಳ ನಿವಾಸಿ ಆಶಿಕ್ ಎಸ್ ಕೋಟ್ಯಾನ್, 25 ವರ್ಷ, ಎಂದು ಗುರುತಿಸಲಾಗಿದೆ. ಆರೋಪಿಯು ಇನ್ಸ್ಟಾಗ್ರಾಂ ಸಾಮಾಜಿಕ ಜಾಲತಾಣದಲ್ಲಿ ನಮಗೆ ಯಾವುದೇ ರೀತಿಯ ಉತ್ತರಗಳು ಬೇಡ, ರಕ್ತಕ್ಕೆ ರಕ್ತವೇ ಉತ್ತರವಾಗಬೇಕು, ಜೀವಕ್ಕೆ ಜೀವವೇಬೇಕು ಎಂದು ಸ್ಟೇಟಸ್ ಹಾಕಿದ್ದನು. ಈತನನ್ನು ಜುಲೈ 3 ರಂದು ಪತ್ತೆಹಚ್ಚಿ, ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಜಿಲ್ಲೆಯಾದ್ಯಂತ ''ವಕ್ಫ್ ತಿದ್ದುಪಡಿ ಕಾಯಿದೆ'' ವಿರೋಧಿಸಿ ಮಾನವ ಸರಪಳಿ

• **ಉದಯವಾಹಿನಿ ಉಡುಪಿ**

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ''ವಕ್ಫ್ ತಿದ್ದುಪಡಿ ಕಾಯಿದೆ'' ವಿರೋಧಿಸಿ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ರಾಜ್ಯಾದ್ಯಂತ ಮಾನವ ಸರಪಳಿಗೆ ಕರೆ ನೀಡಿತ್ತು. ಆ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯಾದ್ಯಂತ ಜುಮ್ಮಾ ನಮಾಝಿನ ನಂತರ ಮಸೀದಿಯ ಸಮೀಪ ಮುಸ್ಲಿಮರು ಮಾನವ ಸರಪಳಿ ಸಂಘಟಿಸಿದರು. ಮಾನವ ಸರಳಪಳಿಯಲ್ಲಿ ವಕ್ಫ್ ತಿದ್ದುಪಡಿ ಕಾಯಿದೆಯನ್ನು ವಿರೋಧಿಸಿ ಕರಪತ್ರ ಪ್ರದರ್ಶಿಸಿದರು.

## ಜಿಲ್ಲೆಯಾದ್ಯಂತ ಮುಂದುವರಿದ ಮಳೆ

• **ಉದಯವಾಹಿನಿ ಚಿಕ್ಕಮಗಳೂರು**

ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ಧಾರಾಕಾರವಾಗಿ ಸುರಿಯಿತು. ಚಿಕ್ಕಮಗಳೂರು ನಗರ ಮತ್ತು ಸುತ್ತಮುತ್ತ ಶುಕ್ರವಾರ ಬೆಳಿಗ್ಗೆ ಬಿಸಿಲಿನ ವಾತಾವರಣ ಇತ್ತು. ನಡುವೆ ಆಗಾಗ ಮಳೆ ಸುರಿಯಿತು. ಮುತ್ತೋಡಿ, ಮಲ್ಲಂದೂರು, ಮುಳ್ಳಯ್ಯನಗಿರಿ ಭಾಗದಲ್ಲಿ ಮಳೆ ಆರ್ಭಟಿಸಿತು. ಚಿಕ್ಕಮಗಳೂರು ನಗರದಲ್ಲಿ ಶಾಲೆಗಳಿಗೆ ರಜೆ ಇತ್ತು.

**ಮನೆಗೆ ಹಾನಿ:** ಕೊಪ್ಪ ತಾಲ್ಲೂಕಿನಲ್ಲಿ ಕಳೆದೆರಡು ದಿನಗಳಿಂದ ಸುರಿಯುತ್ತಿರುವ ಮಳೆ ಶುಕ್ರವಾರವೂ ಮುಂದುವರಿಯಿತು.

ಶಾನುವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿಲಗದ್ದೆ ಗ್ರಾಮದ ಕಸ್ತೂರಿ ಅವರ ಮನೆ ಚಾವಣಿ ಕುಸಿದು ಹಾನಿ ಸಂಭವಿಸಿದೆ. ಗ್ರಾಮಪಂಚಾಯಿತಿ ಸದಸ್ಯ ನವೀನ್ ಕರುವಾನೆ ಭೇಟಿ ನೀಡಿದ್ದರು. ಕಳೆದ 24 ಗಂಟೆಗಳಲ್ಲಿ ಕೊಪ್ಪದಲ್ಲಿ 4.02 ಸೆಂ.ಮೀ., ಹರಿಹರಪುರದಲ್ಲಿ 4 ಸೆಂ.ಮೀ., ಜಯಪುರದಲ್ಲಿ 4.96 ಸೆಂ.ಮೀ., ಕಮ್ಮರಡಿಯಲ್ಲಿ 6.04 ಸೆಂ.ಮೀ., ಬಸರಿಕಟ್ಟೆಯಲ್ಲಿ 5.56 ಸೆಂ.ಮೀ. ಮಳೆ ದಾಖಲಾಗಿದೆ.

## ಗಾಳಿಯಲ್ಲಿ ಗುಂಡು ಹಾರಿಸಿದ ರಮೇಶ ಜಾರಕಿಹೊಳಿ ಪುತ್ರ: ಗೋಕಾಕ ಜಾತ್ರೆಯಲ್ಲಿ ಘಟನೆ

• **ಉದಯವಾಹಿನಿ, ಬೆಳಗಾವಿ**

ಜಿಲ್ಲೆಯ ಗೋಕಾಕದ ಮಹಾಲಕ್ಷ್ಮಿ ಜಾತ್ರೆಯಲ್ಲಿ ಶನಿವಾರ ಶಾಸಕ ರಮೇಶ ಜಾರಕಿಹೊಳಿ ಅವರ ಪುತ್ರ ಸಂತೋಷ, ಜನಸಂದಣಿಯ ಮಧ್ಯೆಯೇ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿದ್ದಾರೆ.



ಉದಯವಾಹಿನಿ ಚಿತ್ರ

ದಶಕದ ಬಳಿಕ ಗೋಕಾಕದಲ್ಲಿ ಅದ್ದೂರಿ ಜಾತ್ರೆ ನಡೆಯುತ್ತಿದ್ದು, ಜಾರಕಿಹೊಳಿ ಕುಟುಂಬದವರೇ ಮುಂದಾಳತ್ವ ವಹಿಸಿದ್ದಾರೆ. ಉತ್ಸವದ ಆರನೇ ದಿನವಾದ ಶನಿವಾರ ಸಂತೋಷ ಜಾರಕಿಹೊಳಿ ಕೂಡ ಭಂಡಾರದ ಓಕುಳಿಯಲ್ಲಿ ಪಾಲ್ಗೊಂಡರು. ಈ ವೇಳೆ ಬಂದೂಕು ಹಿಡಿದುಕೊಂಡು ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿದರು. ಸುತ್ತ ಸೇರಿದ ಅವರ ಬೆಂಬಲಿಗರೆಲ್ಲ ಮಹಾಲಕ್ಷ್ಮೀಗೆ ಜೈ ಎಂದು ಕೂಗಾಡಿ, ಕುಣಿದಾಡಿ ಸಂಭ್ರಮಿಸಿದರು. ಇದರ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.

### • ವಾಹನ ಪಾರ್ಕಿಂಗ್‌ಗೆ ಜಾಗದ ಕೊರತೆ ಹಾಗೂ ಒಳಚರಂಡಿ ಸಮಸ್ಯೆ ಈ ವಾರ್ಡ್ ಅನ್ನು ಬಹುವಾಗಿ ಕಾಡುತ್ತಿದೆ

# ದುರ್ವಾಸನೆಗೆ ಬೇಸತ್ತ ಜನರು: ಒಳಚರಂಡಿ ದುರಸ್ತಿಗೆ ಬೇಕಿದೆ ಕಾಯಕಲ್ಪ

• **ಉದಯವಾಹಿನಿ, ಮಂಗಳೂರು**

ವಸತಿ ಸಮುಚ್ಚಯಗಳಿಗಿಂತ ಹೆಚ್ಚಾಗಿ, ವ್ಯಾಪಾರ ಮಳಿಗೆಗಳು, ದೇವಸ್ಥಾನ ಧಾರ್ಮಿಕ ಸ್ಥಳಗಳನ್ನು ಹೊಂದಿರುವ ವಾರ್ಡ್ ಸೆಂಟ್ರಲ್ ಮಾರ್ಕೆಟ್. ಹೆಚ್ಚು ಜನದಟ್ಟಣೆ, ವಾಹನ ಸಂಚಾರ ದಟ್ಟಣೆ ಇರುವ ಪ್ರದೇಶ ಇದಾಗಿದೆ. ವಾಹನ ಪಾರ್ಕಿಂಗ್‌ಗೆ ಜಾಗದ ಕೊರತೆ ಹಾಗೂ ಒಳಚರಂಡಿ ಸಮಸ್ಯೆ ಈ ವಾರ್ಡ್ ಅನ್ನು ಬಹುವಾಗಿ ಕಾಡುತ್ತಿದೆ.

ಒಳಚರಂಡಿ ಪೈಪ್‌ಗಳು ಹಳೆಯದಾಗಿವೆ. ಇದರಿಂದಾಗಿ ಆಗಾಗ ಚರಂಡಿಯ ಕೊಳಚೆ ನೀರು ರಸ್ತೆ ಬದಿಯಲ್ಲಿ ಹರಿಯುತ್ತದೆ. ಮೈದಾನ ನಾಲ್ಕನೇ ಕ್ರಾಸ್‌ನಿಂದ ಟಿ.ಟಿ.ರಸ್ತೆ, ಗೌರಿ ಮಠ ರಸ್ತೆಯ ಬದಿಯಲ್ಲಿ ಹರಿಯುವ ಕೊಳಚೆ ನೀರು ಇಡೀ ಪರಿಸರವನ್ನು ದುರ್ವಾಸನೆಗೊಳಿಸಿದೆ. ಮಳೆಗಾಲದಲ್ಲಿ ಮಳೆ ನೀರು ಸೇರಿ ಇನ್ನಷ್ಟು ಅಸಹ್ಯವಾಗುತ್ತದೆ. ಇದು ಪರಿಹಾರ ಕಾಣದ ಸಮಸ್ಯೆಯಾಗಿದೆ. ಮಹಾನಗರ ಪಾಲಿಕೆ ಗಮನಕ್ಕೆ ತಂದರೂ ಪ್ರಯೋಜನ ಇಲ್ಲವೆಂದು ಸುಮ್ಮನಾಗಿದ್ದೇವೆ ಎಂದು ಅಂಗಡಿ ಕಾರರೊಬ್ಬರು ಬೇಸರಿಸಿದರು.

ಈ ಭಾಗಕ್ಕೆ ಬಾವುಟಗುಡ್ಡೆ ಟ್ಯಾಂಕ್‌ನಿಂದ ನೀರು ಸರಬರಾಜಾಗುತ್ತದೆ. ನೀರು ಪೂರೈಕೆಯಲ್ಲಿ ಆಗಾಗ ವ್ಯತ್ಯಯವಾಗುವುದು ಮಾಮೂಲಾಗಿ ಬಿಟ್ಟಿದೆ. ತ್ರಿಶೂಲೇಶ್ವರ ದೇವಸ್ಥಾನದ ರಸ್ತೆ, ಮಾರ್ಕೆಟ್ ರಸ್ತೆ, ಗೌರಿ ಮಠ ರಸ್ತೆ ನಿವಾಸಿಗಳಿಗೆ ಹೆಚ್ಚು ಸಮಸ್ಯೆಯಾಗುತ್ತದೆ. ಎತ್ತರ ಮತ್ತು



ಉದಯವಾಹಿನಿ ಚಿತ್ರ

**ಪರಿಹಾರ ಕಾಣದ ಸಮಸ್ಯೆ**

ತಗ್ಗು ಪ್ರದೇಶಗಳು ಇಲ್ಲಿ ಹೆಚ್ಚು ಇರುವುದರಿಂದ ಈ ಸಮಸ್ಯೆ ಆಗುತ್ತದೆ ಎಂದು ಹೇಳಿ ಪಾಲಿಕೆ ಅಧಿಕಾರಿಗಳು ನುಣುಚಿಕೊಳ್ಳುತ್ತಾರೆ. ಹಾಗಿದ್ದರೆ ಜನರ ಸಮಸ್ಯೆಗೆ ಪರಿಹಾರ ಕಲ್ಪಿಸುವುದು ಅವರ ಹೊಣೆಯಲ್ಲವೇ' ಎಂದು ಪ್ರಶ್ನಿಸುತ್ತಾರೆ ಗೌರಿ ಮಾರ್ಕೆಟ್ ರಸ್ತೆಯ ನಿವಾಸಿಯೊಬ್ಬರು. 'ಬೀಬಿ ಅಲಾಬಿ ರಸ್ತೆಗೆ ಕಾಂಕ್ರೀಟ್ ಹಾಕಲಾಗಿದೆ. ರಸ್ತೆ ಸುಸಜ್ಜಿತಗೊಂಡಿದೆ ಎಂದು ಖುಷಿಯಾಗಿತ್ತು. ಆದರೆ, ರಸ್ತೆಯ ಮೇಲೆ ಗುಜರಿ ವಸ್ತುಗಳನ್ನು ಕುಟ್ಟುವುದು ನಿಂತಿಲ್ಲ. ಇದಕ್ಕೆ ಕ್ರಮ ಆಗಬೇಕಾಗಿದೆ' ಎಂದು ಬೈಕ್ ನಿಲ್ಲಿಸಿಕೊಂಡು ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಿದ್ದ ಇಸ್ಮಾಯಿಲ್ ಒತ್ತಾಯಿಸಿದರು. ಮಳೆಗಾಲದಲ್ಲೂ ಇಲ್ಲಿ ಕೆಲಸ ಮುಂದುವರಿದಿದ್ದು, ಕಟ್ಟಡದ ಒಳ ಹಾಗೂ ಹೊರ ಆವರಣದಲ್ಲಿ ಕಾಮಗಾರಿಗಳು ನಡೆಯುತ್ತಿರುವುದು ಕಂಡುಬಂತು.

### ಮಾರ್ಕೆಟ್ ಸುತ್ತ ಸ್ವಚ್ಛತೆಯ ಕೊರತೆ

ವಾರ್ಡ್‌ನ ಬಹುತೇಕ ಕಡೆಗಳಲ್ಲಿ ಕಾಂಕ್ರೀಟ್ ರಸ್ತೆಗಳು ನಿರ್ಮಾಣಗೊಂಡಿವೆ. ಶರವು ದೇವಸ್ಥಾನದ ಸಮೀಪ 150 ಮೀಟರ್‌ನಷ್ಟು ಉದ್ದದ ಡಾಂಬರ್ ರಸ್ತೆಯಲ್ಲಿ ಅಲ್ಲಲ್ಲಿ ಹೊಂಡಗಳಾಗಿದ್ದು ವಾಹನ ಸವಾರರಿಗೆ ವಾಹನ ಚಲಾಯಿಸಲು ಕಷ್ಟವಾಗುತ್ತಿದೆ. ಅಲ್ಲಲ್ಲಿ ಕಂಡು ಬರುವ ಬ್ಲ್ಯಾಕ್ ಸ್ಪಾಟ್‌ಗಳು ಮಾರ್ಕೆಟ್ ಪ್ರದೇಶದಲ್ಲಿ ಸ್ವಚ್ಛತೆಯ ಕೊರತೆ ಕಳೆಗಿಡಗಳು ಬೆಳೆದ ಹೂಳು ತುಂಬಿರುವ ಚರಂಡಿಯಿಂದಾಗಿ ರಸ್ತೆಯಲ್ಲಿ ಹರಿಯುವ ಮಳೆ ನೀರು ಈ ವಾರ್ಡ್‌ಗೆ ಕಪ್ಪುಚುಕ್ಕೆಯಾಗಿವೆ.



ಉದಯವಾಹಿನಿ ಚಿತ್ರ

> ಸೆಂಟ್ರಲ್ ಮಾರುಕಟ್ಟೆ ಕಟ್ಟಡ ಆದಷ್ಟು ಶೀಘ್ರ ಪೂರ್ಣಗೊಳಿಸಿ ನಮಗೆ ಅಂಗಡಿ ಹಂಚಿಕೆ ಮಾಡಬೇಕು. ಮಳೆಯಲ್ಲಿ ರಸ್ತೆ ಬದಿಯಲ್ಲಿ ಕುಳಿತು ವ್ಯಾಪಾರ ನಡೆಸುವುದು ತೀರಾ ಕಷ್ಟ.
> -ನವಾಜ್, ಹಣ್ಣಿನ ವ್ಯಾಪಾರಿ

### ಕಟ್ಟಡ ನಿರ್ಮಾಣ ಅರೆಬರೆ

ಸ್ಮಾರ್ಟ್ ಸಿಟಿ ಯೋಜನೆಯಡಿ 114 ಕೋಟಿ ವೆಚ್ಚದಲ್ಲಿ ಪಿಪಿಪಿ ಮಾದರಿಯಲ್ಲಿ ಆರು ಅಂತಸ್ತಿನ ಸೆಂಟ್ರಲ್ ಮಾರ್ಕೆಟ್ ಕಟ್ಟಡ ನಿರ್ಮಾಣವಾಗುತ್ತಿದೆ. ಕೋವಿಡ್ -19 ಸಾಂಕ್ರಾಮಿಕದ ವೇಳೆ ಹಳೆಯ ಕಟ್ಟಡ ಕೆಡವಿ ಹೊಸ ಕಟ್ಟಡ ನಿರ್ಮಾಣ ಆರಂಭಿಸಲಾಗಿದೆ. ಶೀಘ್ರ ಕಾಮಗಾರಿ ಪೂರ್ಣಗೊಳಿಸುವುದಾಗಿ ಪಾಲಿಕೆ, ಸ್ಮಾರ್ಟ್ ಸಿಟಿ ಅಧಿಕಾರಿಗಳು ಹೇಳುತ್ತಿದ್ದಾರೆ. ಒಂದು ವರ್ಷದಿಂದ ಇದೇ ಮಾತನ್ನು ಕೇಳುತ್ತಿದ್ದೇವೆ. ಇನ್ನೂ ಕಟ್ಟಡ ನಿರ್ಮಾಣ ಅರೆಬರೆಯಾಗಿದ್ದು, ಪೂರ್ಣಗೊಳ್ಳುವ ಲಕ್ಷಣಗಳು ಕಾಣುತ್ತಿಲ್ಲ' ಎಂದು ಹಣ್ಣಿನ ವ್ಯಾಪಾರಿ ನವಾಜ್ ಹೇಳಿದರು.


## ಚಿಕ್ಕ ಕುಟುಂಬದ ಆದರ್ಶವನ್ನು ಪಾಲಿಸಿದಲ್ಲಿ ಸುಖ ಜೀವನ ಹೊಂದಬಹುದು: ಡಾ. ನಳಿನಾಕ್ಷಿ

• **ಉದಯವಾಹಿನಿ, ಚಿತ್ರದುರ್ಗ**

ಕುಟುಂಬ ಯೋಜನೆಗಳನ್ನು ಒಂದೆರಡು ಕುಟುಂಬಗಳು ಅಳವಡಿಸಿಕೊಳ್ಳದೆ ಎಲ್ಲಾ ಕುಟುಂಬಗಳು ಅನುಸರಿಸಬೇಕು, ಹಾಗೂ ಚಿಕ್ಕ ಚೊಕ್ಕ ಕುಟುಂಬದ ಆದರ್ಶವನ್ನು ಪಾಲಿಸಿದಲಿ ಸುಖಿ ಜೀವನ ಹೊಂದಬಹುದು ಎಂದು ಬೆಳಗಟ್ಟ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಬೆಳಗಟ್ಟ ಆರೋಗ್ಯ ಕೇಂದ್ರದ ಸಹಯೋಗದೊಂದಿಗೆ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿದ್ದ ವಿಶ್ವ ಜನಸಂಖ್ಯಾ ಸ್ಥಿರತಾ ಪಾಕ್ಷಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜನಸಂಖ್ಯಾ ಸ್ಥಿರತೆ ಕಾಪಾಡುವ ನಿಟ್ಟಿನಲ್ಲಿ ಸಮುದಾಯದ ಜಾಗೃತಿಕರಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸಾರ್ವಜನಿಕರಲ್ಲಿ ವಿಭಿನ್ನವಾದ ಮನಸ್ಸುಗಳಿದ್ದು ಕೆಲವರಿಗೆ ಚಿಕ್ಕ ಕುಟುಂಬ ಅನುಸರಿಸುವುದು, ಕೆಲವರಿಗೆ ಹಲವು ಮಕ್ಕಳನ್ನು ಹೊಂದುವ ಬಯಕೆ ಸರ್ವೇಸಾಮಾನ್ಯ. ಆಧುನಿಕ ಯುಗದಲ್ಲಿ ಮಕ್ಕಳಿಗೆ ಸಮಾನ ಶಿಕ್ಷಣ ಸಮಾನ ಸವಲತ್ತುಗಳನ್ನು ಒದಗಿಸುವುದು ಪೋಷಕರ ಜವಾಬ್ದಾರಿಯಾಗಿದ್ದು, ಚಿಕ್ಕ ಕುಟುಂಬ ಇದ್ದಲ್ಲಿ ಮನೆಯ ಎಲ್ಲಾ ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಜೊತೆಗೆ ಉತ್ತಮ ಸಮಾಜ



ಉದಯವಾಹಿನಿ ಚಿತ್ರ

ನಿರ್ಮಾಣ ಮಾಡಬಹುದಾಗಿದೆ ಎಂದರು.

ಬೆಳಗಟ್ಟ ಆರೋಗ್ಯ ನೀರಿಕ್ಷಣಾಧಿಕಾರಿ ಮಹೇಶ ಡಿ ಮಾತನಾಡುತ್ತಾ ತಾಯಿಮರಣ ಮತ್ತು ಶಿಶುಮರಣ ತಪ್ಪಿಸುವ ನಿಟ್ಟಿನಲ್ಲಿ ಒಂದು ಮಗುವಿಂದ ಮತ್ತೊಂದು ಮಗುವಿಗೆ ಕನಿಷ್ಠ ಮೂರು ವರ್ಷಗಳು ಅಂತರ ಬೇಕಾಗುತ್ತದೆ. ಜನ್ಮ ನೀಡಿದ ಮಗುವಿಗೆ ಕನಿಷ್ಠ ಎರಡು ವರ್ಷದತನಕ ತಾಯಿಯ ಎದೆ ಹಾಲು ಬೇಕು, ಹೆರಿಗೆ ಅಂತರ ಪಾಲಿಸದೆ ಎಂಟು ತಿಂಗಳ ಬಾಣಂತಿ ಮತ್ತೆ ಮೂರು ತಿಂಗಳ ಗರ್ಭಿಣಿ ಅದಲ್ಲಿ ಹೊಟ್ಟೆಯಲ್ಲಿ ಬೆಳೆಯುವ ಭ್ರೂಣಕ್ಕೆ ಯಾವ ರೀತಿ ಪೋಷಕಾಂಶಗಳು ಸಿಗಬಹುದು ಎಂಬುದನ್ನ ಚಿಂತನೆ ಮಾಡಬೇಕಾಗಿದೆ, ಇಲ್ಲವಾದಲ್ಲಿ ದಿನತುಂಬದ ಹೆರಿಗೆ, ಹೆರಿಗೆಯ ಸಮಯದಲ್ಲಿ ತಾಯಿಗೆ ರಕ್ತಸ್ರಾವ, ತಾಯಿ ಮರಣ ಇಲ್ಲವೇ ಶಿಶುಮರಣ ಆಗಬಹುದು. ಇವುಗಳಿಗೆ ಕಡಿವಾಣ ಹಾಕಬೇಕಾದರೆ ಕುಟುಂಬ ಕಲ್ಯಾಣ ತಾತ್ಕಾಲಿಕ ವಿಧಾನಗಳು ಉಚಿತವಾಗಿ ಎಲ್ಲಾರಿ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯ ಇದ್ದು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಸಾರ್ವಜನಿಕರಿಗೆ ಕರೆ ನೀಡಿದರು.

ಒಂದೆರಡು ಮಕ್ಕಳ ಜನನದ ನಂತರ ಸ್ವಯಂ ಪ್ರೇರಿತವಾಗಿ ತಾಯಂದಿರೇ ಮಕ್ಕಳು ಬೇಡವೆಂದು ನಿರ್ಧರಿಸಿ ಕುಟುಂಬ ಕಲ್ಯಾಣ ಶಾಶ್ವತ ವಿಧಾನವನ್ನು ಅನುಸರಿಸಲು ಮುಂದೆ ಬರುತ್ತಾರೆ, ಹಾಗೆಯೇ ಪುರುಷರು ಕೂಡ ಪುರುಷ ಸಂತಾನ ನಿರೋಧ ಶಸ್ತ್ರಚಿಕಿತ್ಸೆ (ಎನ್.ಎಸ್.ವಿ) ಒಂದು ಸೂಕ್ತ ಸರಳ ವಿಧಾನ, ಹೊಲಿಗೆ ಇಲ್ಲ, ಗಾಯ ಇಲ್ಲ, ಆಸ್ಪತ್ರೆಯಲ್ಲಿ ತಂಗುವ ಹಾಗೆ ಇಲ್ಲ, ಪುರುಷರಲ್ಲಿ ದೈಹಿಕ ನಿಶಕ್ತಿ ಉಂಟಾಗುವುದಿಲ್ಲ, ಲೈಂಗಿಕ ಸಂಪರ್ಕದಲ್ಲಿ ಯಾವುದೇ ಅಡ್ಡಿ ಆತಂಕ ಇರುವುದಿಲ್ಲ, ಇಂತಹ ಸರಳ ವಿಧಾನದ ಕಡೆಗೆ ಸಾಕ್ಷರತೆ ಹೊಂದಿದ ನಾವುಗಳು ಮುಂದೆ ಬಂದು ಸೂಕ್ತ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಕುಟುಂಬದಲ್ಲಿ ದಂಪತಿಗಳು ಸುಖಮಯ ದಾಂಪತ್ಯ ಜೀವನ ನಡೆಸಬಹುದು ಎಂದರು. ಸಮುದಾಯ ಆರೋಗ್ಯ ಅಧಿಕಾರಿ ಭಾರತಮ್ಮ, ಅಶಾ ಕಾರ್ಯಕರ್ತೆಯರಾದ ಮಹಾದೇವಿ, ಸವಿತಾ, ಪುಷ್ಪಾವತಿ, ಹೇಮಲತಾ, ಗ್ರಾಮಸ್ಥರು, ತಾಯಂದಿರು ಮತ್ತು ಪುರುಷರು ಹಾಜರಿದ್ದರು.

> ಕುಟುಂಬದಲ್ಲಿ ಹೆಣ್ಣು ಗಂಡು ಎಂಬ ಭೇದವಿಲ್ಲದೆ ಅಪಾಯದ ಅಂಚಿನಲ್ಲಿರುವ ತಾಯಂದಿರುಗಳಿಗೆ ಕುಟುಂಬ ಯೋಜನೆ ಅಳವಡಿಸುವುದಕ್ಕಿಂತ ಪುರುಷರು ಮುಂದೆ ಬಂದು ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಅಂದೆ ಕೆಲಸ ಕಾರ್ಯಗಳಲ್ಲಿ ತೊಡಗಬಹುದು ತಾಯಂದಿರಿಗೆ ತಾತ್ಕಾಲಿಕ ವಿಧಾನಗಳಾದ ಡಿಮ್ಪ ಇಂಜೆಕ್ಷನ್, ವಾರಕ್ಕೊಮ್ಮೆ ಛಾಯಾ ಮಾತ್ರೆಗಳು, ವಂಕಿ ಅಳವಡಿಕೆ, ಪುರುಷರಿಗೆ ನಿರೋದ್ ಉಚಿತವಾಗಿ ಲಭ್ಯವಿದ್ದು ಇದರ ಸದುಪಯೋಗ ಪಡಿಸಿಕೊಂಡು ಜನಸಂಖ್ಯಾ ಸ್ಥಿರತೆ ಕಾಪಾಡಿ ಸುಖೀ ಕುಟುಂಬದತ್ತ ದಾಪುಕಾಲು ಹಾಕಬಹುದೆಂದರು.
> -ಟಿ. ನಿರ್ಮಲ, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ

## ವಯೋವೃದ್ಧ ನದಿ ನೀರು ಪಾಲು

• **ಉದಯವಾಹಿನಿ ಭಾಲ್ಕಿ**

ತಾಲ್ಲೂಕಿನ ಗಡಿಭಾಗದ ಭಾಟಸಾಂಗವಿ ಗ್ರಾಮದ ವಯೋವೃದ್ಧರೊಬ್ಬರು ಗುರುವಾರ ಮಾಂಜ್ರಾ ನದಿ ನೀರು ಪಾಲಾಗಿದ್ದಾರೆ. ಹಿರಿಯ ಜೀವಿ ನಾಮದೇವ ಭೀಮರಾವ ಝುಳಕೆ(65) ಎಂಬುವರು ನದಿ ದಾಟುವ ಸಂದರ್ಭದಲ್ಲಿ ನೀರಿನ ರಭಸಕ್ಕೆ ಕೊಚ್ಚಿ ಹೋಗಿದ್ದಾರೆ. ಇವರು ಸಂಬಂಧಿಕರ ಭೇಟಿಯಾಗಿ ಮೇಹಕರ್ ಗ್ರಾಮಕ್ಕೆ ತೆರಳಿದ್ದರು. ಭಾಟಸಾಂಗವಿ ಮತ್ತು ನಾರದ ಸಂಗಮ ನಡುವೆ ಹರಿಯುವ ಮಾಂಜ್ರಾ ನದಿ ನೀರು ಹರಿವು ಕಡಿಮೆ ಇದ್ದ ಹಿನ್ನೆಲೆಯಲ್ಲಿ ಗುರುವಾರ ಬೆಳಿಗ್ಗೆ ನದಿ ದಾಟಿ ಮೇಹಕರ್ ಗ್ರಾಮಕ್ಕೆ ತೆರಳಿದ್ದರು.

ಮಧ್ಯಾಹ್ನ 3 ಗಂಟೆ ಸುಮಾರಿಗೆ ಇದೇ ನದಿ ಮಾರ್ಗವಾಗಿ ಸ್ವಗ್ರಾಮಕ್ಕೆ ಮರಳುತ್ತಿದ್ದರು. ಈ ಸಂದರ್ಭದಲ್ಲಿ ಮಹಾರಾಷ್ಟ್ರ ರಾಜ್ಯದಿಂದ ಹೆಚ್ಚುವರಿ ನೀರು ಹರಿದು ಬಂದಿದ್ದರಿಂದ ನೀರಿನ ರಭಸಕ್ಕೆ ಕೊಚ್ಚಿ ಹೋಗಿದ್ದಾರೆ. ಈ ಕುರಿತು ಭಾಲ್ಕಿಯ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಉದಯವಾಹಿನಿ ಚಿತ್ರ

## ಗ್ರಾಮ ಆಡಳಿತಾಧಿಕಾರಿಗಳಿಗೆ ಲ್ಯಾಪ್‌ಟಾಪ್ ವಿತರಣೆ

• **ಉದಯವಾಹಿನಿ ಕಲಬುರಗಿ**

ಕಂದಾಯ ಇಲಾಖೆಯಲ್ಲಿನ ಸೇವೆಗಳು ಕಾಗದ ರಹಿತವಾಗಿಸಲು ಮತ್ತು ಉತ್ತಮ ಗುಣಮಟ್ಟದ ಸೇವೆ ನೀಡುವ ಸದುದ್ದೇಶದಿಂದ ಸರ್ಕಾರದ ವತಿಯಿಂದ ಶಾಸಕ ಎಂ.ವೈ. ಪಾಟೀಲ ಅವರು ಗ್ರಾಮ ಆಡಳಿತಾಧಿಕಾರಿಗಳಿಗೆ ಲ್ಯಾಪ್ ಟಾಪ್ ನೀಡುವ ಮೂಲಕ ಉತ್ತಮ ಸೇವೆ ಸಲ್ಲಿಸಿ ಎಂದು ಗ್ರಾಮ ಆಡಳಿತ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಸಂಜೀವಕುಮಾರ ದಾಸರ, ಅತನೂರ ಆರ್.ಐ. ಸಂಜೀವಕುಮಾರ, ಗ್ರಾಮ ಆಡಳಿತಾಧಿಕಾರಿಗಳಾದ ಪಾಂಡುರಂಗ ಇರಕರ್, ಭಾಗೇಶ ಯಾಳವಾರ, ಆಪ್ತ ಸಹಾಯಕ ರಾಹುಲ್ ಮಳ್ಳಿ ಇದ್ದರು.



## ಕನಕದಾಸರ ಮೂರ್ತಿ ವಿರೂಪ ಗೊಳಿಸಿದ ಘಟನೆ ಬೇವಿನಹಾಳ ಗ್ರಾಮಕ್ಕೆ ಭೇಟಿ ನೀಡಿದ ತಂಗಡಗಿ

• **ಉದಯವಾಹಿನಿ ಕಾರಟಗಿ**

ತಾಲ್ಲೂಕಿನ ಬೇವಿನಹಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೇವಿನಹಾಳ ಗ್ರಾಮದಲ್ಲಿ ಭಕ್ತ ಕನಕದಾಸ ಮೂರ್ತಿಯನ್ನು ಭಗ್ನಗೊಳಿಸಿ ಜನರ ಭಾವನೆಗಳಿಗೆ ಧಕ್ಕೆಯನ್ನು ಉಂಟುಮಾಡಿ ಸಮಾಜದಲ್ಲಿ ಶಾಂತಿ ಕದಡುವ ಹುನ್ನಾರ ಯತ್ನ ನಡೆದಿರುವ ಬಗ್ಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ ಕನಕದಾಸರ ಪ್ರತಿಮೆಗೆ ಆಗಿರುವ ಅಪಮಾನವನ್ನು ಜಿಲ್ಲೆಯಾದ್ಯಂತ ಚಿಂತಕರು ವಿವಿಧ ದಲಿತ ಸಂಘಟನೆಗಳು ಸೇರಿದಂತೆ ಜಾತ್ಯಾತೀತವಾಗಿ ಹೋರಾಟಗಾರರು ರೈತ ಮುಖಂಡರು ಖಂಡಿಸಿದ್ದಾರೆ.

ಕನಕಗಿರಿ ಕ್ಷೇತ್ರದ ಮಾಜಿ ಶಾಸಕ ಬಸವರಾಜ್ ದಢೇಸೂಗೂರ್ ಬೇವಿನಹಳ ಗ್ರಾಮಕ್ಕೆ ಭೇಟಿ ನೀಡಿ ಕನಕದಾಸ ಮೂರ್ತಿಗೆ ಅಪಮಾನ ಮಾಡಿರುವ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿದ್ದರು. ಹಾಗೂ ಪೋಲಿಸ್, ಕಂದಾಯ ಸರ್ಕಾರಿ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಕನಕದಾಸರ ಮೂರ್ತಿ ಭಗ್ನಗೊಳಿಸಿದವರನ್ನು ಪತ್ತೆ ಹಚ್ಚುವ ಪ್ರಯತ್ನಗಳು ನಡೆಸಿದ್ದಾರೆ. ಜೂನ್ 24 ರ ತಡ ರಾತ್ರಿ ನಡೆದಿರುವ ಘಟನೆ ಜೂನ್ 25 ರಂದು ಬೆಳಕಿಗೆ ಬಂದಿದೆ 10 ದಿನ



ಉದಯವಾಹಿನಿ ಚಿತ್ರ

**ಆರೋಪಿಗಳ ಸುಳಿವು ಸಿಕ್ಕಿಲ್ಲ**

ಕಳೆದರೂ ಮೂರ್ತಿ ವಿರೂಪಗೊಳಿಸಿದ ಆರೋಪಿಗಳ ಸುಳಿವು ಸಿಕ್ಕಿಲ್ಲ ಇದು ಪೊಲೀಸರಿಗೆ ಸವಾಲಾಗಿದೆ, ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕ ಮತ್ತು ಸಚಿವರಾದ ಶಿವರಾಜ್ ಎಸ್ ತಂಗಡಗಿ ಅವರು ಅಂತೂ ಹತ್ತು ದಿನಗಳ ನಂತರ ತಡವಾಗಿ ಬೇವಿನಹಾಳ ಗ್ರಾಮಕ್ಕೆ ಭೇಟಿ ನೀಡಿ ಕನಕದಾಸರ ಮೂರ್ತಿ ವಿರೂಪಗೊಳಿಸಿದ ಆರೋಪಿಗಳ ಪತ್ತೆಗೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಿದರು. ಕನಕದಾಸರ ಮೂರ್ತಿ ಭಗ್ನ ಮಾಡಿರುವ ಘಟನೆ ಅಕ್ಷಮ್ಯ ಅಪರಾಧ, ಘಟನೆ ಹಿಂದಿರುವವರು ಯಾರೇ ಆಗಿರಲಿ ಮುಲಾಜಿಲ್ಲದೆ ಶಿಕ್ಷೆಗೆ ಒಳಪಡಿಸಲಾಗುತ್ತದೆ, ಅಂಥವರು ಗ್ರಾಮದಲ್ಲಿ ಇರೋದು ಸಮಾಜಕ್ಕೆ ಮಾರಕ ಆರೋಪಿಗಳನ್ನು ಪತ್ತೆ ಹಚ್ಚುವವರೆಗೆ ಗ್ರಾಮದ ಪ್ರತಿಯೊಬ್ಬರು ಶಾಂತಿಯಿಂದ ಇರಬೇಕು ಎಂದರು.

### ಕನಕದಾಸರು ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ

**ಆದರೆ ಸಚಿವರು ಬೇರೆ ಸಮಾಜದವರು ಹಣ ನೀಡಿದರೆ ತೆಗೆದುಕೊಳ್ಳಬಾರದು ಎನ್ನುವ ಮಾತು ಆಕ್ರೋಶಕ್ಕೆ ಕಾರಣವಾಯಿತು. ಕನಕದಾಸರು ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ ಅವರು ಸಮಾಜದ ಪ್ರತಿಯೊಬ್ಬರ ಏಳಿಗೆಗಾಗಿ ಶ್ರಮಿಸಿದವರು ಸಮಾಜದಲ್ಲಿ ಕುಲ ಎನ್ನುವ ಪದವನ್ನು ಬೇರೆ ಸಮೇತ ಕಿತ್ತು ಹಾಕಲು ಶ್ರಮಿಸಿದವರು ಆ ಕಾರಣಕ್ಕಾಗಿಯೇ ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆ ಏನಾದರೂ ಬಲ್ಲಿರಾ ? ಎಂದು ಪ್ರತಿಯೊಬ್ಬರನ್ನು ಪ್ರಶ್ನೆ ಮಾಡಿ ಸಮಾಜದಲ್ಲಿ ಪರಿವರ್ತನೆಗಾಗಿ ಕ್ರಾಂತಿಯನ್ನೇ ಉಂಟುಮಾಡಿದರು. ಆದರೆ ಕನಕದಾಸರ ಮೂರ್ತಿಗೆ ಬೇರೆ ಸಮಾಜದವರು ದೇಣಿಗೆ ನೀಡಿದರೆ ತೆಗೆದುಕೊಳ್ಳಬಾರದು ಎಂದು ಹೇಳಿರುವುದು ಯಾಕೆ ಎಂದು ಪ್ರಶ್ನೆಸುವಂಥಾಗಿದೆ.**

ಬೇವಿನಹಾಳ ಸರ್ಕಲ್ ನಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವಂತೆ ತಾಲ್ಲೂಕ ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಶ್ರೀಮತಿ ಲಕ್ಷ್ಮಿ ದೇವಿ ಅವರಿಗೆ ಸಚಿವರು ಸೂಚನೆ ನೀಡಿದರು.

**ಆಕ್ರೋಶಕ್ಕೆ ಕಾರಣವಾದ ಸಚಿವರ ನಡೆ ಮಾತಿನ ಚಕಮಕಿ :** ಕನಕದಾಸರ ನೂತನ ಮೂರ್ತಿ ವಿರೂಪಗೊಂಡ ಬೇವಿನಹಾಳ ಗ್ರಾಮಕ್ಕೆ ಸಚಿವರಾದ ಶಿವರಾಜ್ ಎಸ್ ತಂಗಡಗಿ ಅವರು ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾಮದ ನೂರಾರು ಜನರು ಸೇರಿದ್ದರು. ಸಚಿವರು ನೂತನ ಕನಕದಾಸರ ಮೂರ್ತಿಯನ್ನು ನಿರ್ಮಾಣ ಮಾಡುವ ಬಗ್ಗೆ ಭರವಸೆಯನ್ನು ನೀಡಿದರು ಈ ಸಂದರ್ಭದಲ್ಲಿ ಸಚಿವರು ಮಾತನಾಡಿ ನೂತನ ಮೂರ್ತಿಗೆ ಆಗುವ ಖರ್ಚಿನ ಶೇಕಡ 75% ರಷ್ಟು ಖರ್ಚು ನಾನು ನೀಡುತ್ತೇನೆ ಉಳಿದ 25% ರಷ್ಟು ಖರ್ಚು ಸಮುದಾಯದವರು ಭರಿಸಬೇಕು. ನಿಮ್ಮ ಸಮಾಜದವರು ಮಾತ್ರ ಹಣ ಹೊಂದಿಕೆ ಮಾಡಿಕೊಳ್ಳಿ ಬೇರೆ ಸಮಾಜದವರು ನೀಡಿದರೆ ತೆಗೆದುಕೊಳ್ಳಬಾರದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಲ್ಲಿ ನೆರೆದಿರುವ ಕೆಲವರು ಸಚಿವರ ಮಾತಿಗೆ ವಿರೋಧ ವ್ಯಕ್ತಪಡಿಸಿದರು ಗ್ರಾಮದಲ್ಲಿ ಪ್ರತಿಯೊಬ್ಬರು ಸೌಹಾರ್ದತೆಯಿಂದ ಇದ್ದೇವೆ ಯಾವುದೇ ಹಬ್ಬ ಹರಿದಿನಗಳನ್ನು ನಾವು ಒಂದಾಗಿ ಆಚರಣೆ ಮಾಡುತ್ತೇವೆ ಕನಕದಾಸರ ಮೂರ್ತಿಗೆ ನಾವು ಕೂಡ ಹಣ ದೇಣಿಗೆ ನೀಡುತ್ತೇವೆ ಎಂದರು.

# ಬಾಗಲಕೋಟೆಗೆ ಮತ್ತೆ 'ಚಿಗುರಿದ ವಿಮಾನ' ಕನಸು


• **ಉದಯವಾಹಿನಿ, ಬಾಗಲಕೋಟೆ**

ಹಲವು ವರ್ಷಗಳಿಂದ ಹಿನ್ನೆಲೆಗೆ ಸರಿದಿದ್ದ ವಿಮಾನ ನಿಲ್ದಾಣದ ಕನಸು ಜಿಲ್ಲೆಯಲ್ಲಿ ಮತ್ತೆ ಚಿಗುರೊಡೆದಿದೆ.

ಶಾಸಕ ಎಚ್.ವೈ.ಮೇಟಿ ಬಾಗಲಕೋಟೆ ತಾಲ್ಲೂಕು ವ್ಯಾಪ್ತಿಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಅವರಿಗೆ ಮನವಿ ಸಲ್ಲಿಸಿದ್ದಾರೆ. ಬಿಜೆಪಿ ಸರಕಾರದ ಅವಧಿಯಲ್ಲಿ ವಿಮಾನ ನಿಲ್ದಾಣದ ರೂಪ ಪಡೆದು ಸ್ಥಗಿತವಾಗಿದ್ದ ಪ್ರಕ್ರಿಯೆಗೆ ಮತ್ತೆ ಈಗ ಚಾಲನೆ

- **ಬಾಗಲಕೋಟೆ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಶಾಸಕ ಹೆಚ್.ವೈ.ಮೇಟಿ, ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲರಿಗೆ ಮನವಿ ಸಲ್ಲಿಸಿದ್ದಾರೆ.**
- **2019ರಲ್ಲಿ ಬಿಜೆಪಿ ಸರಕಾರದ ಅವಧಿಯಲ್ಲಿ ವಿಮಾನ ನಿಲ್ದಾಣಕ್ಕಾಗಿ ಯೋಜನೆ ರೂಪಿಸಲಾಯಿತು, ಆದರೆ ರೈತರ ಪ್ರತಿರೋಧದಿಂದ ಅದು ಸ್ಥಗಿತಗೊಂಡಿತು.**
- **ಜಿಲ್ಲೆಯಲ್ಲಿ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ವಿಮಾನ ನಿಲ್ದಾಣ ಸ್ಥಾಪನೆ ಅಗತ್ಯವಿದೆ**

ದೊರೆಯುವ ಸಾಧ್ಯತೆಯಿದೆ. 2019ರಲ್ಲಿ ಬಿಜೆಪಿ ಸರಕಾರದ ಅವಧಿಯಲ್ಲಿ ಜಿಲ್ಲೆಯ ಹಲಕುರ್ಕಿ ಬಳಿ ವಿಮಾನ ನಿಲ್ದಾಣಕ್ಕೆ ಯೋಜಿಸಲಾಯಿತು. 200 ಎಕರೆ ಪ್ರದೇಶದ ಭೂಸ್ವಾಧೀನಕ್ಕೆ ರೈತರು ವಿರೋಧ ವ್ಯಕ್ತಪಡಿಸಿದರು. ರೈತರ ಪ್ರತಿರೋಧದಿಂದ



ಉದಯವಾಹಿನಿ ಚಿತ್ರ

ಸರಕಾರ ಯೋಜನೆಯಿಂದ ಹಿಂದಕ್ಕೆ ಸರಿಯಿತು.

2008ರಲ್ಲಿ ಅರವಿಂದ ಲಿಂಬಾವಳಿ ಜಿಲ್ಲಾಉಸ್ತುವಾರಿ ಸಚಿವರಿದ್ದಾಗ ಬಾದಾಮಿ ತಾಲ್ಲೂಕಿನ ಕೊಂಕಣಕೊಪ್ಪ ಬಳಿ ಏರ್‌ಪೋರ್ಟ್ ಸ್ಥಾಪಿಸಲು ಯೋಜಿಸಲಾಗಿತ್ತು. ಆದರೆ ವಿಮಾನಯಾನ ಸಚಿವಾಲಯದಿಂದ ಅನುಮೋದನೆ ದೊರೆಯಲಿಲ್ಲ. ರಾಜ್ಯ ಸರಕಾರ ಭೂಮಿ ಒದಗಿಸುವ ಭರವಸೆ ನೀಡಿ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿದರೆ ವಿಮಾನ ನಿಲ್ದಾಣ ಸ್ಥಾಪನೆಯಾಗುವ ಕನಸು ನನಸಾಗಬಹುದು. ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ವಿಮಾನ ನಿಲ್ದಾಣ ಸ್ಥಾಪನೆಯಾದರೆ ಪ್ರವಾಸೋದ್ಯಮ ಅಭಿವೃದ್ಧಿಯಾಗಲಿದೆ. ಈ ನಿಟ್ಟಿನಲ್ಲಿ ಸಚಿವರಿಗೆ ಮನವಿ ನೀಡಿದ್ದೇನೆ ಎಂದಿದ್ದಾರೆ ಎಚ್.ವೈ.ಮೇಟಿ, ಶಾಸಕ.

### ಪೂರಕ ಸಾರಿಗೆ ಸಂಪರ್ಕ

**ಜಿಲ್ಲೆಯಿಂದ ಪ್ರತಿ ದಿನ ಸಾವಿರಾರು ಜನ ಮಹಾನಗರಗಳಿಗೆ ಪ್ರಯಾಣಿಸುತ್ತಾರೆ. ತೋಟಗಾರಿಕೆ ವಿಶ್ವವಿದ್ಯಾಲಯ, ಎರಡು ಮೆಡಿಕಲ್ ಕಾಲೇಜ್‌ಗಳಿವೆ. ಈ ನಿಟ್ಟಿನಲ್ಲಿ ಎಲ್ಲಾ ದೃಷ್ಟಿಯಿಂದಲೂ ಜಿಲ್ಲೆ ಏರ್ ಪೋರ್ಟ್‌ಗೆ ಸೂಕ್ತವಾಗಿದೆ. 2021ರಲ್ಲಿ ವಿಜಯಪುರದಲ್ಲಿ ವಿಮಾನ ನಿಲ್ದಾಣ ಸ್ಥಾಪನೆಯಾಗುವ ಸಂದರ್ಭದಲ್ಲಿ ಬಾಗಲಕೋಟೆಯಲ್ಲಿ ನಿರ್ಮಿಸಬೇಕು ಎಂಬ ಬೇಡಿಕೆಯಿತ್ತು. ಜಿಲ್ಲೆಯ ಶಾಸಕರು ಎರಡೂ ಜಿಲ್ಲೆಗಳ ಮಧ್ಯದ ಆಲಮಟ್ಟಿಯಲ್ಲಾಗಲಿ ಎಂಬ ಬೇಡಿಕೆ ಮಂಡಿಸಿದ್ದರು.**

### ಪ್ರವಾಸಿ ತಾಣ, ಹೆದ್ದಾರಿಗಳ ಜಾಲ

**ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮದಂತಹ ಪ್ರವಾಸಿ ತಾಣಗಳು ಜಿಲ್ಲೆಯಲ್ಲಿವೆ. ಗೋವಾ, ಹೊಸಪೇಟೆಯಿಂದ ವಿದೇಶಿ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ. ಪ್ರವಾಸೋದ್ಯಮಕ್ಕೆ ಪೂರಕವಾಗಿ ವಿಮಾನ ನಿಲ್ದಾಣ ನಿರ್ಮಾಣವಾಗುವುದು ಅತ್ಯವಶ್ಯ. ಜಿಲ್ಲೆಯಲ್ಲಿ ಹುಬ್ಬಳ್ಳಿ-ಸೊಲ್ಲಾಪುರ, ಗದ್ದನಕೇರಿ ಕ್ರಾಸ್-ಬಾಣಾಪುರ ಹೆದ್ದಾರಿಗಳಿವೆ. ಈ ಹೆದ್ದಾರಿಗಳು ಹುಬ್ಬಳ್ಳಿ, ವಿಜಯಪುರ, ಕೊಪ್ಪಳ, ಗದಗ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸಿವೆ. ಹೊಸದಾಗಿ ಪಣಜಿ-ಹೈದರಾಬಾದ್, ಪುಣೆ-ಬೆಂಗಳೂರು ಹೆದ್ದಾರಿ ನಿರ್ಮಾಣವಾಗಲಿವೆ. ಕುಡಚಿ-ಬಾಗಲಕೋಟೆ ರೈಲು ಮಾರ್ಗ ಸಿದ್ಧವಾಗುತ್ತಿದೆ. ವಿಮಾನಗಳಿಗೆ ಪೂರಕವಾಗಿ ಸಾರಿಗೆ ಸಂಪರ್ಕವಿರುವ ಕಾರಣ ಏರ್‌ಪೋರ್ಟ್ ಬೇಕು ಎಂಬ ವಾದವಿದೆ.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಸಂತೋಷದ ಚೈತನ್ಯದಾಯಕ ನಿಮ್ಮ ಖುಷಿಯ ಸ್ವಭಾವ ಸುತ್ತಲಿನವರಿಗೆ ಸಂತೋಷಮತ್ತು ಖುಷಿಯನ್ನು ತರುತ್ತದೆ. ದೀರ್ಘಕಾಲದ ನಂತರ ನಿಮ್ಮ ಸ್ನೇಹಿತರಿಗೆ ಸಂಧಿಸುವ ವಿಚಾರ ನಿಮ್ಮ ಮನಸ್ಸಿನೆಲ್ಲೆಡೆ ತುಂಬಿರುತ್ತದೆ.

**ವೃಷಭ** ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವೈಯಕ್ತಿಕ ಸಂಬಂಧಗಳನ್ನು ದುರ್ಬಳಕೆ ಮಾಡುವುದು ನಿಮ್ಮ ಪತ್ನಿಗೆ ಕೋಪ ಬರಿಸುತ್ತದೆ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ.

**ಮಿಥುನ** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು.

**ಕರ್ಕಾಟಕ** ನಿಮ್ಮ ಅತಿಥಿಗಳ ಜೊತ ಒರಟಾಗಿ ನಡೆದುಕೊಳ್ಳಬೇಡಿ. ನಿಮ್ಮ ವರ್ತನೆ ಕೇವಲ ನಿಮ್ಮ ಕುಟುಂಬಕ್ಕೆ ಮಾತ್ರವೇ ಅಸಮಾಧಾನ ತರದೇ ಸಂಬಂಧಗಳಲ್ಲೂ ಶೂನ್ಯತೆಯನ್ನು ತರಬಹುದು.

**ಸಿಂಹ** ತಂದೆಯು ನಿಮ್ಮನ್ನು ಆಸ್ತಿಯ ಉತ್ತರಾಧಿಕಾರಿತ್ವ ದಿಂದ ತಪ್ಪಿಸಬಹುದು. ಆದರೆ ಧೃತಿಗೆಡಬೇಡಿ. ಅಭ್ಯುದಯ ಮನಸ್ಸಿಗೆ ಮುದ ನೀಡಿದರೆ ಅಭಾವ ಅದನ್ನು ಬಲಗೊಳಿಸುತ್ತದೆಂದು ನೆನಪಿಡಿ.

**ಕನ್ಯಾ** ನಿಮ್ಮ ಚೈತನ್ಯವನ್ನು ಹೆಚ್ಚಿಸಲು ನಿಮ್ಮ ಮನಸ್ಸಿನಲ್ಲಿ ಪ್ರಕಾಶಮಾನವಾದ ಸುಂದರವಾದ ಮತ್ತು ಅದ್ಭುತವಾದ ಚಿತ್ರವನ್ನು ಕಲ್ಪಿಸಿಕೊಳ್ಳಿ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ.

**ತುಲಾ** ನೀವು ಯಾವುದೇ ದುಬಾರಿ ಸಾಹಸಕ್ಕೆ ಕೈಹಾಕುವ ಮೊದಲು ವಿವೇಚನೆ ಬಳಸಿ. ನೀವು ಪ್ರಾಮುಖ್ಯತೆ ನೀಡುವ ಸಮಬಂಧಗಳಿಗೆ ಸಾಮ್ಯವನ್ನು ನೀಡುವುದು ಸಹ ನೀವು ಕಲಿಯಬೇಕು.

**ವೃಶ್ಚಿಕ** ಸಾಮಾಜಿಕ ಕೂಟಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯ ಗೊಳಿಸುತ್ತದೆ. ನಿಮ್ಮ ಪ್ರೇಮದ ಸಂಗಾತಿ ನಿಮ್ಮನ್ನು ಹೊಗಳಬಹುದು. ಅವರನ್ನು ಏಕಾಂಗಿಯಾಗಿ ಈ ಪ್ರಪಂಚದಲ್ಲಿ ಬಿಡಬೇಡಿ.

**ಧನಸ್ಸು** ನೀವು ಎಲ್ಲಾ ಕೆಲಸಗಳನ್ನು ಹೊರತುಪಡಿಸಿ, ಬಾಲ್ಯದಲ್ಲಿ ನೀವು ಮಾಡಲು ಇಷ್ಟಪಟ್ಟ ಕೆಲಸಗಳನ್ನು ಮಾಡಲು ಇಷ್ಟಪಡುತ್ತೀರಿ. ನಿಮ್ಮ ಯೋಜನೆಗಳು ಒಬ್ಬ ಅನಿರೀಕ್ಷಿತ ಅತಿಥಿಯ ಕಾರಣ ಹಾಳಾಗಬಹುದು.

**ಮಕರ** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ. ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ – ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ.

**ಕುಂಭ** ಇಂದು ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ.

**ಮೀನ** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ನೀವು ಇಂದು ನಿಮಗೆ ನೀಡಲಾದ ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು.

● ಶಿವಮೊಗ್ಗ ರೈಲು ನಿಲ್ದಾಣದಲ್ಲಿ ಪ್ರಿಪೇಯ್ಡ್ ಕೌಂಟರ್ ತೆರೆಯಲು ಮೂರು ಸಲ ಟೆಂಡರ್ ಕರೆಯಲಾಗಿದೆ


# ಆಟೋ ಪ್ರಯಾಣ ದರದಲ್ಲಿ ಬೆಂಗಳೂರನ್ನೂ ಮೀರಿಸಿದ ಶಿವಮೊಗ್ಗ

• ಉದಯವಾಹಿನಿ ಶಿವಮೊಗ್ಗ

ಶಿವಮೊಗ್ಗ ನಗರದ ರೈಲು ನಿಲ್ದಾಣ ಆವರಣದಲ್ಲಿ ಆಟೋರಿಕ್ಷಾ ಪ್ರಿಪೇಯ್ಡ್ ಕೌಂಟರ್ ಆರಂಭಿಸಬೇಕೆಂಬ ಬೇಡಿಕೆ ಕಳೆದ 25 ವರ್ಷಗಳಿಂದ ಚರ್ಚೆಯಲ್ಲಿದೆ. ಆದರೆ, ಇದುವರೆಗೆ ಮಾಡಲು ಸಾಧ್ಯವಾಗಿಲ್ಲ. ಟೆಂಡರ್ ಕರೆದರೂ ಗುತ್ತಿಗೆದಾರರು ಪಾಲ್ಗೊಳ್ಳುತ್ತಿಲ್ಲ. ಇದರ ಹಿಂದಿದೆ, ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಇರದ ಆಟೋ ದರ ಕಾರಣ.

ರಾಜ್ಯದ ರಾಜಧಾನಿ ಬೆಂಗಳೂರು ನಗರದಲ್ಲಿ ಎರಡು ಕಿ.ಮೀ. ಪ್ರಯಾಣದ ಕನಿಷ್ಠ ಆಟೊ ದರ 30 ರೂ. ಇದ್ದು, ಅದರ ನಂತರದ ಪ್ರತಿ ಕಿ.ಮೀ. ಪ್ರಯಾಣಕ್ಕೆ 15 ರೂ. ಇದೆ. ಅದನ್ನು 40 ರೂ.ಗೆ ಹೆಚ್ಚಿಸುವಂತೆ ಆಟೊ ಚಾಲಕರ ಸಂಘವು ಸಾರಿಗೆ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಮನವಿ ಮಾಡಿದೆ. ಈ ಹಿನ್ನೆಲೆಯಲ್ಲಿ ಕನಿಷ್ಠ ಆಟೊ ದರವನ್ನು 36 ರೂ. ಮತ್ತು ನಂತರದ ಕಿ.ಮೀ.ಗೆ 18 ರೂ.ಗೆ ಏರಿಕೆ ಮಾಡಿ ತೀರ್ಮಾನಿಸಲಾಗಿದೆ. ಸಾರಿಗೆ ಸಚಿವರು ಮತ್ತು ಸಿಎಂ ಒಪ್ಪಿಗೆ ಸೂಚಿಸಿದರೆ ಪರಿಷ್ಕೃತ ದರ ಜಾರಿಗೆ ಬರಲಿದೆ. ವಿಚಿತ್ರವೆಂದರೆ, ಶಿವಮೊಗ್ಗ ನಗರದಲ್ಲಿ 2022ರಲ್ಲಿ ಆಟೋ ಚಾಲಕರ ಸಂಘದ ಮನವಿಯಂತೆ, ಪ್ರತಿ ಒಂದೂವರೆ ಕಿ.ಮೀ.ಗೆ

**4 ಕಿ.ಮೀ, 100 ರೂ ಪಾವತಿ ಅನಿವಾರ್ಯ**


ಉದಯವಾಹಿನಿ ಚಿತ್ರ

ಕನಿಷ್ಠ ದರ 40 ರೂ. ಮತ್ತು ನಂತರದ ಪ್ರತಿ ಒಂದು ಕಿ.ಮೀ.ಗೆ ಗರಿಷ್ಠ 20 ರೂ. ಪ್ರಯಾಣ ದರ ಪರಿಷ್ಕರಿಸಿದೆ. ಆದ್ದರಿಂದ ಶಿವಮೊಗ್ಗ ನಗರದಲ್ಲಿ ಬೆಂಗಳೂರು ನಗರವನ್ನೂ ಮೀರಿಸುವ ಆಟೊ ಪ್ರಯಾಣ ದರವಿದೆ. ಹೀಗಾಗಿ, ನಾಲ್ಕು ಕಿ.ಮೀ. ಪ್ರಯಾಣಿಸಬೇಕಾದರೆ ಮೀಟರ್ ಹಾಕಿದಲ್ಲಿ ಕನಿಷ್ಠ 100 ರೂ. ಅನ್ನು ಪ್ರಯಾಣಿಕರು ಪಾವತಿಸುವ ಅನಿವಾರ್ಯತೆ ಇದೆ.

ಒಂದುವೇಳೆ, ಶಿವಮೊಗ್ಗ ನಗರದ ರೈಲು ನಿಲ್ದಾಣದಲ್ಲಿ ಪ್ರಿಪೇಯ್ಡ್ ಕೌಂಟರ್ ಆರಂಭಿಸಿದಲ್ಲಿ ಗುತ್ತಿಗೆದಾರ ಪ್ರತಿ ಪ್ರಯಾಣಕ್ಕೆ ಕನಿಷ್ಠವೆಂದರೂ 5 ರೂ. ವಸೂಲಿ ಮಾಡಬೇಕಾಗುತ್ತದೆ. ಅಂದರೆ, ಪ್ರತಿ ಪ್ರಯಾಣಕ್ಕೆ ಒಂದೂವರೆ ಕಿ.ಮೀ.ಗೆ 45 (40+5) ರೂ. ಆರ್ಥಿಕ ಹೊರೆ ಬೀಳಲಿದೆ. ಆರ್‌ಟಿಒ ದಿಂದ ಕನಿಷ್ಠ ದರವನ್ನು 35 ರೂ.ಗೆ ಇಳಿಸಲು ಮುಂದಾದರೆ, ಆಟೊ ಮಾಲೀಕರು ಮತ್ತು ಚಾಲಕರು ಸುಮ್ಮನಿರುವುದಿಲ್ಲ. ಈ ಕಾರಣದಿಂದಾಗಿ ಆರ್‌ಟಿಒ ಈ ವಿಚಾರದಲ್ಲಿ ಮೌನ ವಹಿಸಿದೆ. ಟೆಂಡರ್ ಕರೆದರೂ ಗುತ್ತಿಗೆದಾರರು ಭಾಗವಹಿಸುತ್ತಿಲ್ಲ.

ಪ್ರಿಪೇಯ್ಡ್ ಕೌಂಟರ್ ಆರಂಭಿಸಬೇಕಾದರೆ, ಕನಿಷ್ಠ ಒಂದು ಕಂಪ್ಯೂಟರ್, ನೆಟ್ವರ್ಕ್ ಮತ್ತು ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಬೇಕು. ಅವರಿಗೆ ಸಂಬಳ ನೀಡಿ ಗುತ್ತಿಗೆದಾರ ಲಾಭ ಮಾಡಿಕೊಳ್ಳಬೇಕು. ಇದೆಲ್ಲಕಾರ್ಯಸಾಧು ಅಲ್ಲದ ಕಾರಣ ಆರಂಭದಿಂದಲೂ ಇದರ ಬಗ್ಗೆ ಚರ್ಚೆ ಆಗುತ್ತಿದೆಯೇ ವಿನಾ ಕಾರ್ಯರೂಪಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ರೈಲು ನಿಲ್ದಾಣ, ಬಸ್ ನಿಲ್ದಾಣ ಮುಂಭಾಗದಲ್ಲಿ ಜನರು, ಪ್ರಯಾಣಿಕರು ಒಳಗೆ ನುಸುಳದಂತೆ ಮತ್ತು ಹೊರಗೆ ಬರದಂತೆ ಆಟೊಗಳು ಘೇರಾವ್ ಮಾಡುತ್ತಿವೆ. ಅದಕ್ಕೂ ಈ ಕೌಂಟರ್‌ನಿಂದ ಪರಿಹಾರ ಸಿಗುತ್ತದೆ. ಗ್ರಾಹಕರ ಸುಲಿಗೆ ನಿಲ್ಲಲಿ ಎಂಬ ಕಾರಣಕ್ಕಾಗಿಯೇ ಶಿವಮೊಗ್ಗ ನಗರದಲ್ಲಿ ಆಟೊರಿಕ್ಷಾ ಪ್ರಿಪೇಯ್ಡ್ ಕೌಂಟರ್ ಮಾಡುವಂತೆ ಕೇಳಲಾಗುತ್ತಿದೆ.

ಪ್ರಸ್ತುತ ನಗರದಲ್ಲಿ ಬಾಯಿಗೆ ಬಂದಂತೆ ಹಣ ಕೇಳಲಾಗುತ್ತಿದೆ. ಅದಕ್ಕೆ ಮೊದಲು ತಡೆ ಬೀಳಬೇಕು. ಜನಸಾಮಾನ್ಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಆಡಳಿತ ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ ಕೆ.ವಿ. ವಸಂತ್ ಕುಮಾರ್, ಸಾಮಾಜಿಕ ಹೋರಾಟಗಾರ.

### ಪ್ರಿಪೇಯ್ಡ್ ಕೌಂಟರ್ ಪ್ರಯೋಜನವೇನು?

ಅಷ್ಟಕ್ಕೂ ಪ್ರಿಪೇಯ್ಡ್ ಕೌಂಟರ್‌ನಿಂದ ಸಾರ್ವಜನಿಕರಿಗೆ ಏನು ಪ್ರಯೋಜನ ಎಂಬ ಪ್ರಶ್ನೆ ಬಹುತೇಕರಲ್ಲಿದೆ. ಇದರ ಮೂಲ ಉದ್ದೇಶ ಪ್ರಯಾಣಿಕರಿಂದ ಅಧಿಕ ಹಣ ವಸೂಲಿ ಮಾಡುವುದನ್ನು ತಪ್ಪಿಸುವುದು. ಸಂಭಾವ್ಯ ಸಮಸ್ಯೆಗಳಿಂದ ಅವರನ್ನು ರಕ್ಷಿಸುವುದು. ಪ್ರಸ್ತುತ ಶಿವಮೊಗ್ಗ ನಗರದಲ್ಲಿ 'ಆಟೊದವರು ಯರ್‍ರಾಬಿರ್‍ರಿ ಹಣ ವಸೂಲಿ ಮಾಡುತ್ತಿದ್ದಾರೆ' ಎಂಬ ಸಿದ್ಧ ಆರೋಪವಿದೆ. ಅದಕ್ಕೆ ಇದರಿಂದ ಮುಕ್ತಿ ಸಿಗಬಹುದು.

> ಶಿವಮೊಗ್ಗ ರೈಲು ನಿಲ್ದಾಣದಲ್ಲಿ ಪ್ರಿಪೇಯ್ಡ್ ಕೌಂಟರ್ ತೆರೆಯಲು ಮೂರು ಸಲ ಟೆಂಡರ್ ಕರೆಯಲಾಗಿದೆ. ಆದರೆ, ಯಾರೂ ಭಾಗವಹಿಸಿಲ್ಲ. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಹೊರೆಯಾಗದಂತೆ, ಆಟೊ ಚಾಲಕರಿಗೆ ಕಷ್ಟವಾಗದಂತೆ ಸಮಗ್ರವಾಗಿ ಚಿಂತಿಸಿ ಕ್ರಮ ಕೈಗೊಳ್ಳಲಾಗುವುದು. ಒಂದುವೇಳೆ, ಗುತ್ತಿಗೆದಾರರು ಮುಂದೆ ಬಂದರೆ ರೈಲು ನಿಲ್ದಾಣ ಮತ್ತು ವಿಮಾನ ನಿಲ್ದಾಣದಲ್ಲಿ ಪ್ರಿಪೇಯ್ಡ್ ಕೌಂಟರ್ ತೆರೆಯುವ ಯೋಚನೆ ಇದೆ ಎಂದಿದ್ದಾರೆ.
> -ಗುರುದತ್ತ ಹೆಗಡೆ, ಜಿಲ್ಲಾಧಿಕಾರಿ

> ರೈಲು ನಿಲ್ದಾಣ ಹೊರ ಭಾಗದಲ್ಲಿ ಈಗಾಗಲೇ ಇಬ್ಬರು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ರೈಲುಗಳು ಬಂದಾಗ ಆಟೊಗಳು ಸುತ್ತುವರಿಯುತ್ತಿರುವ ಬಗ್ಗೆ ದೂರುಗಳು ಬಂದಿವೆ. ಜನರಿಗೆ ಆಗುತ್ತಿರುವ ತೊಂದರೆ ತಪ್ಪಿಸಲು ಇನ್ನಿಬ್ಬರು ಸಿಬ್ಬಂದಿಯನ್ನು ನಿಯೋಜಿಸಲಾಗುವುದು.
> -ಜಿ.ಕೆ. ಮಿಥುನ್ ಕುಮಾರ್, ಎಸ್‌ಪಿ

- ಬೆಂಗಳೂರು ನಗರ: ಪ್ರತಿ ಎರಡು ಕಿ.ಮೀ.ಗೆ 30 ರೂ. ನಂತರ ಕಿ.ಮೀ.ಗೆ 15 ರೂ.
- ಬೆಳಗಾವಿ: ಪ್ರತಿ ಒಂದೂವರೆ ಕಿ.ಮೀ.ಗೆ 30 ರೂ. ನಂತರ ಕಿ.ಮೀ.ಗಳಿಗೆ 15 ರೂ
- ಶಿವಮೊಗ್ಗ ನಗರ: ಪ್ರತಿ ಒಂದೂವರೆ ಕಿ.ಮೀ.ಗೆ 40 ರೂ. ನಂತರ ಕಿ.ಮೀ.ಗೆ 20 ರೂ.

## ರಸ್ತೆ ಕಾಮಗಾರಿಯ ಗುಣಮಟ್ಟವನ್ನು ಕಾಪಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ ಎಮ್ ಸಮೀವುಲ್ಲಾ

• ಉದಯವಾಹಿನಿ ಅರಸೀಕೆರೆ

ಅರಸೀಕೆರೆ ನಗರಾದ್ಯಂತ ರಸ್ತೆ ಡಾಂಬರೀಕರಣ ಚರಂಡಿ ನಿರ್ಮಾಣ ಕಾರ್ಯ ರಾಜ ಕಾಲುವೆಗಳ ಕಾರ್ಯ ನಡೆಯುತ್ತಿದ್ದು ಇದರ ಗುಣಮಟ್ಟವನ್ನು ಕಾಯ್ದುಕೊಂಡು ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಲು ಕ್ರಮ ಕೈಗೊಳ್ಳಬೇಕು ಎಂದು ಅರಸೀಕೆರೆ ನಗರಸಭೆ ಅಧ್ಯಕ್ಷರಾದ ಎಮ್ ಸಮೀವುಲ್ಲಾ ನಗರಸಭೆಯ ಅಧಿಕಾರಿಗಳಿಗೆ ತಮ್ಮ ಕಚೇರಿಯಲ್ಲಿ ಸೂಚಿಸಿದರು

ನಗರದಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿ ಚರಂಡಿ ಮತ್ತು ರಸ್ತೆ ಬದಿಯಲ್ಲಿ ನೀರು ಹಾದು ಹೋಗಲು ಸುಗಮ ವ್ಯವಸ್ಥೆಯಾಗಲು ಕಾಮಗಾರಿಗಳು ನಿರಂತರವಾಗಿ ನಡೆಯುತ್ತಿದ್ದು ಇದರ ಗುಣಮಟ್ಟವನ್ನು ಅಧಿಕಾರಿಗಳು ಭೇಟಿ ನೀಡಿ ಸರಿಯಾದ ರೀತಿಯಲ್ಲಿ ವೀಕ್ಷಿಸಿ ಕಾಮಗಾರಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಸೂಚನೆ ನೀಡಿದರು .

ಬೆಳಗ್ಗೆ ನಗರ ಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಜೊತೆ ಮಾತನಾಡಿದ ಅಧ್ಯಕ್ಷರಾದ ಎಮ್ ಸಮೀವುಲ್ಲಾ ಸಾರ್ವಜನಿಕರಿಂದ ಯಾವುದೇ ದೂರುಗಳು ಬರದೇ ರೀತಿಯಲ್ಲಿ ನಾಗರೀಕರ ಸ್ವತ್ತುಗಳ ಈ ಸ್ವತ್ತು ಮತ್ತು ಖಾತೆ ಬದಲಾವಣೆ ಅರ್ಜಿ ಬಂದರೆ ಅವುಗಳನ್ನು ನಿಗದಿತ ಸಮಯದಲ್ಲಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದರು. ನಗರಸಭೆಯಲ್ಲಿ ಕರವಸೂಲಿಗಾರರು ನಗರದ ನಾಗರಿಕರಿಗೆ ಕಚೇರಿಗೆ ಬಂದ ವೇಳೆಯಲ್ಲಿ ಸಿಗುತ್ತಿಲ್ಲ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ನಗರಸಭೆಯ ಅಧ್ಯಕ್ಷರು ಕಚೇರಿ ವೇಳೆಯಲ್ಲಿ ನಗರಸಭೆ ಎಲ್ಲಾ ಸಿಬ್ಬಂದಿಗಳು ಖುದ್ದಾಗಿ ಹಾಜರಿದ್ದು ನಗರದ ನಾಗರೀಕರ ಸಂಪರ್ಕದಲ್ಲಿ ಇರಬೇಕೆಂದು ಅರಸಿಕೆರೆ ನಗರಸಭೆಯ ಅಧ್ಯಕ್ಷರಾದ ಎಂ ಸಮೀವುಲ್ಲಾ ಸೂಚನೆ ನೀಡಿದರು.


ಉದಯವಾಹಿನಿ ಚಿತ್ರ

> ಬಾಕಿ ಇರುವ ಈ ಸ್ವತ್ತು ಪತ್ರಗಳನ್ನು ಶೀಘ್ರದಲ್ಲೇ ಶಾಸಕರು ಮತ್ತು ಕರ್ನಾಟಕ ರಾಜ್ಯ ಸರ್ಕಾರದ ಗೃಹ ಮಂಡಳಿ ಅಧ್ಯಕ್ಷರಾದ ಕೆ ಎಮ್ ಶಿವಲಿಂಗೇಗೌಡರನ್ನು ನಗರಸಭೆಗೆ ಆಹ್ವಾನ ನೀಡಿ ಅವರ ಕಡೆಯಿಂದ ಈ ಸ್ವತ್ತು ದಾಖಲೆಗಳನ್ನು ನಾಗರಿಕರಿಗೆ ವಿತರಿಸಲಾಗುವುದು ಈವರೆಗೆ ಅರಸೀಕೆರೆ ನಗರದ ನಾಗರಿಕರು ಖಾತೆ ಬದಲಾವಣೆ ಮತ್ತು ಈ ಸ್ವತ್ತು ಪಡೆಯಲು ಅನುಭವಿಸುತ್ತಿದ್ದ ತೊಂದರೆಯ ನಿವಾರಣೆಗಾಗಿ ನಗರಸಭೆಯ ಎಲ್ಲಾ ಸಿಬ್ಬಂದಿಗಳು ಶ್ರಮ ವಹಿಸಿ ಕೆಲಸ ನಿರ್ವಹಿಸಬೇಕಾಗಿದೆ.
> -ಎಮ್ ಸಮೀವುಲ್ಲಾ , ಅರಸೀಕೆರೆ ನಗರಸಭೆ ಅಧ್ಯಕ್ಷ

## ಮೆಕ್ಕೆ ಜೋಳದಲ್ಲಿ ಸೈನಿಕ ಹುಳುವಿನ ನಿರ್ವಹಣೆಗಾಗಿ ಸಲಹೆ

• ಉದಯವಾಹಿನಿ ಗದಗ

ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರಿಗೆ ಮೆಕ್ಕೆಜೋಳದ ಬಿತ್ತನೆ ಪ್ರದೇಶ 115700 ಹೆ. ಗುರಿಯಿದ್ದು ಇದುವರೆಗೆ 125721 ಹೆ. ಶೇ.9ರಷ್ಟು ಅಧಿಕ ಬಿತ್ತನೆಯಾಗಿದೆ. ಜಿಲ್ಲೆಯಾದ್ಯಂತ ಅಲ್ಲಲ್ಲಿ ಸೈನಿಕ ಹುಳು(ಲದ್ದಿ ಹುಳು) ವಿನ ಬಾಧೆ ಕಂಡುಬಂದಿದೆ.

ಈ ಕೀಟವು ಮೆಕ್ಕೆಜೋಳ ಬೆಳೆ ಅಲ್ಲದೇ ಇತರೆ ಏಕದಳ ಧಾನ್ಯ ಬೆಳೆಗಳಾದ ಭತ್ತ, ಹೈಬ್ರಿಡ್ ಜೋಳ, ರಾಗಿ ಮುಂತಾದ ಬೆಳೆಗಳಲ್ಲಿ ಕಾಣಿಸಿಕೊಳ್ಳಲಿದ್ದು, ಮುಖ್ಯವಾಗಿ ಬೆಳೆಯ ಎಲೆ, ಕಾಂಡ, ತೆನೆಯ ಭಾಗವನ್ನು ಕೆರೆದು ತಿನ್ನುವದಲ್ಲದೇ, ಎಲೆಯ ಭಾಗದಲ್ಲಿ ಸರಣಿ ತೂತುಗಳನ್ನು ಕೊರೆಯುತ್ತದೆ. ಒಂದು ಚಿಟ್ಟೆಯು 1500 ಮೊಟ್ಟೆಯವರೆಗೆ ತತ್ತಿಗಳನ್ನಿಟ್ಟು, ಬೆಳೆಗಳಿಗೆ ತೀವ್ರ ಹಾನಿ ಮಾಡುತ್ತದೆ.

ಕೀಟವು ಮುಸುಕಿನ ಜೋಳದ ಸುಳಿಯನ್ನು ಕೊರೆಯುತ್ತದೆ. ಹುಳು ಬೆಳೆದಂತೆಲ್ಲ ಸುರುಳಿಯಲ್ಲಿ ಎಲೆಯನ್ನು ತಿಂದು ತ್ಯಾಜ್ಯವನ್ನು ಬಿಡುವುದರಿಂದ ಸುಳಿ ಕೈಯಿಂದ ಎಳೆದಾಗ ಸುಲಭವಾಗಿ ಹೊರಬರುವುದು. ಬೆಳೆಯ ಬೆಳವಣಿಗೆಗೆ ತೀವ್ರ ಹಾನಿಯನ್ನುಂಟು ಮಾಡುವುದರಿಂದ ಉತ್ಪಾದನೆಯು ಕುಂಠಿತವಾಗುತ್ತದೆ.

**ಬೆಳೆಗಳಿಗೆ ತೀವ್ರ ಹಾನಿ**


ಉದಯವಾಹಿನಿ ಚಿತ್ರ

ಕೀಟವನ್ನು ನಿರ್ವಹಣೆ ಮಾಡಲು, ಬೆಳೆಯ ಶೇ.10ಕ್ಕಿಂತ ಹೆಚ್ಚು ಎಲೆಗಳು ಬಾಧಿತವಾಗಿದ್ದಲ್ಲಿ ಸ್ಪೈನೆಟೊರಂ 11.7% ಎಸ್.ಸಿ. 1 ಮಿ.ಲೀ., ಅಥವಾ ಕ್ಲೊರಾಂಟ್ರಾನಿಲಿಪ್ರೊಲ್ 18.5% ಎಸ್.ಸಿ. 0.4 ಮಿ.ಲೀ, ಅಥವಾ ಥೈಯಾಮಿಥೊಕ್ಸಾಯಮ್ 12.6% + ಲ್ಯಾಂಬ್ಡಾ ಸೈಹ್ಯಾಲೊಥ್ರಿನ್ 9.5% ಝಡ್.ಸಿ. ಪ್ರತಿ ಲೀಟರ್ ನೀರಿಗೆ ಬೆರೆಸಿ ಔಷಧಿಯ ಮಿಶ್ರಣ ಬೆಳೆಯ ಸುಳಿಗೆ ಬೀಳುವಂತೆ ಸಿಂಪಡಿಸಬೇಕು. ಮೊದಲ ಸಿಂಪರಣೆಯನ್ನು ಬಿತ್ತನೆಯಾದ 15–20 ದಿನಗಳೊಳಗೆ ತೆಗೆದುಕೊಳ್ಳಬೇಕು. ಎರಡನೇ ಸಿಂಪರಣೆಯನ್ನು ಮೊದಲನೆಯ ಸಿಂಪರಣೆಯ 10–15 ದಿನಗಳ ನಂತರ ತೆಗೆದುಕೊಳ್ಳುವುದು. ಪ್ರತಿ ಸಿಂಪರಣೆಯನ್ನು ಮುಂಜಾನೆ ಅಥವಾ ಸಾಯಂಕಾಲದ ಸಮಯದಲ್ಲಿ ತೆಗೆದುಕೊಳ್ಳಬೇಕು. ಪ್ರತಿ ಸಲವೂ ಒಂದೇ ತೆರನಾದ ಕೀಟನಾಶಕವನ್ನು ಸಿಂಪರಣೆ ಮಾಡಬಾರದು.

## ಸೌಹಾರ್ದತೆಯಿಂದ ಮೊಹರಂ ಆಚರಣೆ: ಯಶವಂತರಾಯಗೌಡ

• ಉದಯವಾಹಿನಿ ಇಂಡಿ

ಪಟ್ಟಣದಲ್ಲಿ ಮೊಹರಂ ಹಬ್ಬದ ನಿಮಿತ್ಯ ಪ್ರಸಿದ್ಧ ಆಟವಿ ಖತಾಲ ಹಬ್ಬವನ್ನು ಭಕ್ತರು ಶಾಂತಿ ಸೌಹಾರ್ಧತೆಯಿಂದ ಆಚರಿಸುತ್ತಿವದು ಸಂತೋಷದ ಸಂಗತಿಯಾಗಿದೆ ಎಂದರು.

ಅವರು ಪಟ್ಟಣದ ಹುಸೇನ ಬಾದಷಹಾ ದರ್ಗಾದಲ್ಲಿ ಆಟವಿ ಖತಲ ನಿಮಿತ್ಯ ನಡೆದ ಬೃಹತ್ ಸಭೆಯಲ್ಲಿ ಮಾತನಾಡಿದರು. ತಾಲ್ಲೂಕಿನಲ್ಲಿ ಪ್ರತಿಯೊಂದು ಹಬ್ಬ ಹರಿದಿನಗಳಲ್ಲಿ ಜನತೆ ಶಾಂತಿ ಹಾಗೂ ಸೌಹಾರ್ಧತೆ ಕಾಪಾಡಿಕೊಂಡು ಬಂದಿದ್ದಾರೆ. ಮೊಹರಂ ಹಬ್ಬವೂ ಕೂಡ ತ್ಯಾಗದ ಪ್ರತೀಕವಾಗಿರುವದರಿಂದ ಸರ್ವ ದರ್ಮಿಯರು ಭಾವೈಕ್ಯತೆಯಿಂದ ಆಚರಿಸುತ್ತಿದ್ದಾರೆ ಎಂದರು. ಜಾವೇದ ಮೋಮಿನ, ಪ್ರಶಾಂತ ಕಾಳೆ, ಷಹನಷಹಾ ಜಹಾಗೀರದಾರ, ಜಟ್ಟೆಪ್ಪ ರವಳಿ, ಪ್ರಕಾಶ ಐರೋಡಗಿ, ತುಕಾರಾಮ ವಾಲಿಕಾರ, ದೇವಸ್ಥಾನ ಸಮಿತಿಯ ಮಕಾನದಾರ ಅರ್ಚಕ ಬಂದುಗಳು ಕುಟುಂಬದವರು ಪಾಲ್ಗೊಂಡಿದ್ದರು. ಇದಕ್ಕೂ ಮುಂಚೆ ಬೆಳಗ್ಗೆ 4 ಗಂಟೆಗೆ ಭಕ್ತರು ನೈವೆಧ್ಯಕ್ಕಾಗಿ ದೇವಸ್ಥಾನಕ್ಕೆ ಬರಲು ಪ್ರಾರಂಭಿಸಿದರು. ಜಿಲ್ಲೆಯ ಬೇರೆ ಜಿಲ್ಲೆ ಸುಮಾರು 50 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಭಕ್ತರು ದರ್ಶನ ಪಡೆದರು, ಬಿಜೆಪಿ ಕಾಸುಗೌಡ ಬಿರಾದಾರ, ದಾದಾಗೌಡರ ಮನೆತನದ ಪ್ರಭುಗೌಡ ಪಾಟೀಲ ಸೇರಿದಂತೆ ಅನೇಕ ಗಣ್ಯರು ದರ್ಶನ ಪಡೆದರು.

ಪಟ್ಟಣದ ಸಿಪಿಐ ಪ್ರದೀಪ ಬಿಸೆ ನೇತೃತ್ವದಲ್ಲಿ ಪೋಲಿಸ ಬಿಗಿ ಬಂದೋಬಸ್ತ ವ್ಯವಸ್ಥೆ ಮಾಡಲಾಗಿತ್ತು. ಪುರಸಭೆ ಮುಖ್ಯಾಧಿಕಾರಿಗಳು, ಸಿಬ್ಬಂದಿ ಚುನಾಯಿತ ಸದಸ್ಯರು ಕುಡಿಯುವ ನೀರಿನ ಮತ್ತು ಸ್ವಚ್ಚತೆ ವ್ಯವಸ್ಥೆ ಮಾಡಿದ್ದರಿಂದ ಭಕ್ತಾಧಿಗಳಿಗೆ ಯಾವದೇ ರೀತಿಯ ತೊಂದರೆ ಯಾಗಲಿಲ್ಲ.


ಉದಯವಾಹಿನಿ ಚಿತ್ರ

## ಗುಣಮಟ್ಟದ ಕಾಮಗಾರಿಗೆ ಸೂಚನೆ

• ಉದಯವಾಹಿನಿ ಬಾಗಲಕೋಟೆ

ಜಿಲ್ಲೆಯ ಹುನಗುಂದ ತಾಲ್ಲೂಕಿನ ಗ್ರಾಮೀಣ ಪ್ರದೇಶ ವ್ಯಾಪ್ತಿಯಲ್ಲಿ ಬರುವ ವಿವಿಧ ಸಿಸಿ ರಸ್ತೆ, ಅಂಗನವಾಡಿ ಕಟ್ಟಡ, ಬದು ನಿರ್ಮಾಣ ಕಾಮಗಾರಿ ಸೇರಿದಂತೆ ವಿವಿದೆಡೆ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಭೇಟಿ ನೀಡಿ ಪರಿಶೀಲನೆ ಮಾಡಿದರು.

ಹುನಗುಂದ ತಾಲ್ಲೂಕಿನ ಸೂಳೆಭಾವಿ ಗ್ರಾಮದಲ್ಲಿ ಕೃಷಿ ಇಲಾಖೆಯ ಗೋ ಕಟ್ಟೆ ಕಾಮಗಾರಿ, ಕಮತಗಿಯಿಂದ ಬೆನಕಟ್ಟಿ ಗ್ರಾಮದ ವರೆಗೆ ರಸ್ತೆ ಕಾಮಗಾರಿ, ಹಿರೇಮಾಗಿ ಗ್ರಾಮದಲ್ಲಿನ ಸಂತ ಸೇವಾಲಾಲ್ ಮಂದಿರ ಹತ್ತಿರ ಸಿಸಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪರಿಶೀಲನೆ ವೇಳೆಯಲ್ಲಿ ಗುಣಮಟ್ಟದ ಕಾಮಗಾರಿಗಳಿಗೆ ಹೆಚ್ಚಿನ ಗಮನ ಹರಿಸಬೇಕು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಿದರು.


ಉದಯವಾಹಿನಿ ಚಿತ್ರ

ಹಿರೇಮಾಗಿ ಗ್ರಾಮದ ನರ್ಸರಿಗೆ ಭೇಟಿ ನೀಡಿದ ಕುರೇರ ಅವರು ಹಸರೀಕರಣಕ್ಕಾಗಿ ಕೈಗೊಂಡ ಅಭಿಯಾನ ಕುರಿತು ಮಾಹಿತಿ ಪಡೆದುಕೊಂಡು ನರ್ಸರಿಯಲ್ಲಿ ಸಸಿಯನ್ನು ನೆಟ್ಟು ನೀರುಣಿಸಿದರು. ಅಮೀನಗಡ ಹೋಬಳಿ ವ್ಯಾಪ್ತಿಯ ಕೃಷಿ ಇಲಾಖೆಯಡಿ ಕೈಗೊಂಡ ಬದು ನಿರ್ಮಾಣ ಕಾಮಗಾರಿ ವೀಕ್ಷಣೆ ಮಾಡಿ ನಂತರ ಹುನಗುಂದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಕಡತ ವಿಲೇವಾರಿ ಕಾರ್ಯವನ್ನು ಪರಿಶೀಲನೆ ಮಾಡಿದರು.

> ಇಸ್ಲಾಂಪೂರದಲ್ಲಿನ ಡಬ್ಲೂಟಿಪಿ ಕಾಮಗಾರಿ ಪರಿಶೀಲನೆ ಮಾಡಿ ನಂತರ ತಾಲ್ಲೂಕಾ ವ್ಯಾಪ್ತಿಯಲ್ಲಿ ಬರುವ ವಿವಿಧ ವಸತಿ ನಿಲಯಗಳಿಗೆ ಭೇಟಿ ನೀಡಿ ಮಕ್ಕಳ ಹಾಜರಾತಿ, ಸ್ವಚ್ಛತೆ, ಕಲಿಕಾ ಸಾಮರ್ಥ್ಯ ಪರಿಶೀಲನೆ ಮಾಡಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಕಡತ ಪರಿಶೀಲನೆ ಮಾಡಿದ ನಿವೇಶನ ರಹಿತ ಅಂಗನವಾಡಿ ಕೇಂದ್ರಗಳಿಗೆ ನಿವೇಶನ ಗುರುತಿಸುವ ಕಾರ್ಯ ಚುರುಕಾಗಿ ಮಾಡಬೇಕು. ಕೇವಲ ಗುರುತಿಸುವ ಕಾರ್ಯ ಮಾಡಿದರೆ ಸಾಕು ಮುಂದಿನ ಕ್ರಮ ಮೇಲ್ಮಟ್ಟದ ಅಧಿಕಾರಿಗಳು ಮಾಡಲಿದ್ದಾರೆ ಎಂದು ತಿಳಿಸಿದರು.

## ಮಟಕಾ: ಬಂಧನ

• ಉದಯವಾಹಿನಿ ಕಲಬುರಗಿ

ನಗರದ ಆಳಂದ ಚೆಕ್‌ಪೋಸ್ಟ್ ಹತ್ತಿರದ ಶಿವಲಿಂಗ ನಗರ ಕಾಲೋನಿಯ ಗಾರ್ಡನ್ ಹತ್ತಿರದ ಲೇಔಟ್‌ನ ಖುಲ್ಲಾ ಪ್ಲಾಟ್‌ಗಳಲ್ಲಿರುವ ಸಾರ್ವಜನಿಕ ರಸ್ತೆಯ ಮೇಲೆ ಮಟಕಾ ನಂಬರ್ ಬರೆದುಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಪಿಐ ದಿಲೀಪಕುಮಾರ ಬಿ.ಸಾಗರ, ಸಿಬ್ಬಂದಿಗಳಾದ ರವೀಂದ್ರಕುಮಾರ, ಶ್ರೀಶೈಲ, ಸುನೀಲಕುಮಾರ, ನಾಗರಾಜ ಅವರು ದಾಳಿ ನಡೆಸಿ ಬುಲಂದ್ ಪರ್ವೇಜ್ ಕಾಲೋನಿಯ ಮಹ್ಮದ್ ಮಜೀದ್ (32) ಎಂಬಾತನನ್ನು ಬಂಧಿಸಿ 3,500 ರೂ.ನಗದು, ಮಟಕಾ ಚೀಟಿ, ಒಂದು ಬಾಲ್‌ಪೆನ್ ಜಪ್ತಿ ಮಾಡಿದ್ದಾರೆ. ಆರ್.ಜಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಾಹನಗಳ ಲೋಕಾರ್ಪಣೆ

• ಉದಯವಾಹಿನಿ ಹೊಸಪೇಟೆ

ಹೊಸಪೇಟೆ ನಗರಸಭೆ ಸಾರ್ವಜನಿಕರ ಅನುಕೂಲಕ್ಕಾಗಿ ಮುಕ್ತಿವಾಹನ ಸೇರಿದಂತೆ ಮೂರು ವಾಹನಗಳನ್ನು ಲೋಕಾರ್ಪಣೆ ಮಾಡಿದೆ.

ಹೊಸಪೇಟೆ ನಗರಸಭೆಯ ಆವರಣದಲ್ಲಿ ಅಧ್ಯಕ್ಷ ಎನ್.ರೂಪೇಶ್ ಕುಮಾರ ಉಪಾಧ್ಯಕ್ಷ ಜೆ.ಎಸ್.ರಮೇಶಗುಪ್ತಾ ಸಹಾಯಕ ಕಾರ್ಯಪಾಲಕ ಅಭಿಯಂತರ ಮನ್ಸೂರ್ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ರೂಪೇಶ ಕುಮಾರ ಹೊಸಪೇಟೆ ನಗರ ಜಿಲ್ಲಾ ಕೇಂದ್ರವಾದ ಮೇಲೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ ಸಾಮಾನ್ಯ ಜನ ಪರದಾಟ ತಪ್ಪಿಸಲು ನಗರಸಭೆ ನಿರ್ಣಯ ಕೈಗೊಂಡು 28 ಲಕ್ಷ ವೆಚ್ಚದಲ್ಲಿ ಮುಕ್ತಿವಾಹನ, ತಗ್ಗು ತೊಡುವ 2 ವಾಹನಗಳನ್ನು ಖರೀದಿಸಿದ್ದು ಸಾಮಾನ್ಯ ಜನ ಕೇವಲ ರೂ 500 ಪಾವತಿಸುವ ಮೂಲಕ ಪಡೆಯಬಹುದಾಗಿದೆ ಎಂದರು ಸಾರ್ವಜನಿಕರು ಪ್ರಯೋಜನ ಪಡೆಯುವಂತೆ ತಿಳಿಸಿದರು.

## ಅಂಬಾರಗೋಡ್ಲು-ಕಳಸವಳ್ಳಿ ನೂತನ ಸೇತುವೆ ಲೋಕಾರ್ಪಣೆಜು.14ಕ್ಕೆ: ಬಿ.ವೈ.ರಾಘವೇಂದ್ರ

• ಉದಯವಾಹಿನಿ ಶಿವಮೊಗ್ಗ

ಸಾಗರ ತಾಲ್ಲೂಕಿನ ಅಂಬಾರಗೋಡ್ಲು-ಕಳಸವಳ್ಳಿ ನಡುವಿನ ನೂತನ ತೂಗು ಸೇತುವೆಯನ್ನು ಜುಲೈ 14 ರಂದು ಕೇಂದ್ರದ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದರು. ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ?473 ಕೋಟಿ ವೆಚ್ಚದಲ್ಲಿ 2.44 ಕಿ.ಮೀ ಉದ್ದ ನಿರ್ಮಿಸಿರುವ ಇದು ದೇಶದಲ್ಲಿಯೇ ಎರಡನೇ ಅತಿ ದೊಡ್ಡ ತೂಗು ಸೇತುವೆ ಎಂದರು. ಮಲೆನಾಡಿನ ಪ್ರಮುಖ ಯಾತ್ರಾ ಸ್ಥಳ ಸಿಗಂದೂರಿಗೆ ಈ ಸೇತುವೆ ಸಂಪರ್ಕ ಕಲ್ಪಿಸುವ ಕಾರಣಕ್ಕೆ 'ಸಿಗಂದೂರು ಶ್ರೀ ಚೌಡೇಶ್ವರಿ ಸೇತುವೆ' ಎಂದು ನಾಮಕರಣ ಮಾಡಲು ನಿರ್ಧರಿಸಲಾಗಿದೆ. ಆ ಬಗ್ಗೆ ಎನ್ ಒಸಿ ಕೊಟ್ಟು ರಾಜ್ಯ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಿ ಎಂದು ಒತ್ತಾಯಿಸಿದರು.ಸೇತುವೆ ನಿರ್ಮಾಣಕ್ಕೆ ಪಕ್ಷಾತೀತವಾಗಿ ಹೋರಾಟಗಳು ನಡೆದಿವೆ. ಆದರೆ ಅದರ ನಿರ್ಮಾಣಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕೊಡುಗೆ ಮಹತ್ವದ್ದು. ಆರಂಭದಲ್ಲಿ ಈ ಕಾರ್ಯಕ್ಕೆ ಯಡಿಯೂರಪ್ಪ 100 ಕೊಟ್ಟಿದ್ದರು.


ಉದಯವಾಹಿನಿ ಚಿತ್ರ

ಜೊತೆಗೆ ಸೇತುವೆ ನಿರ್ಮಾಣಕ್ಕೆ ಮೀಸಲಿಟ್ಟಿದ್ದ ಹಣವನ್ನು ಮಧ್ಯದಲ್ಲಿ ಬೇರೆ ಕಡೆ ವಿನಿಯೋಗಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಿತ್ತು. ಆ ವೇಳೆ ನಿತಿನ್ ಗಡ್ಕರಿ ಅವರಿಗೆ ದುಂಬಾಲು ಬಿದ್ದು ಆ ಹಣವನ್ನು ವಾಪಸ್ ತರಿಸುವಲ್ಲಿ ಯಡಿಯೂರಪ್ಪ ಶ್ರಮ ಹಾಕಿದ್ದರು' ಎಂದು ಸ್ಮರಿಸಿದರು. ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಸ್ಥಳ ಹಾಗೂ ಸಮಯ ಇನ್ನಷ್ಟೇ ನಿಗದಿಯಾಗಬೇಕಿದೆ ಎಂದರು.

● ಪಟ್ಟಣ ಪಂಚಾಯ್ತಿ ಸಿಬ್ಬಂದಿ ಪಟ್ಟಣದ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು: ಎಸ್.ಎಂ. ಮಠದ

# ತಗ್ಗು-ಗುಂಡಿಗಳದೇ ಪಾರುಪತ್ಯ: ಕೆಸರು ಗದ್ದೆಯಂತಾಗಿರುವ ಬಡಾವಣೆ ರಸ್ತೆಗಳು

• ಉದಯವಾಹಿನಿ ರಟ್ಟಿಹಳ್ಳಿ

ಮಳೆಗಾಲ ಪ್ರಾರಂಭವಾದರೆ ಸಾಕು ರಟ್ಟಿಹಳ್ಳಿ ಪಟ್ಟಣದ ಜನತೆ ಕೈಯಲ್ಲಿ ಜೀವ ಹಿಡಿದುಕೊಂಡು ನಡೆದಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಪಟ್ಟಣದ ಬಹುತೇಕ ರಸ್ತೆಗಳಲ್ಲಿ ದೊಡ್ಡ-ದೊಡ್ಡ ಗುಂಡಿಗಳು ಬಿದ್ದು, ಗುಂಡಿಗಳಲ್ಲಿ ಮಳೆ ನೀರು ನಿಂತು ಪಟ್ಟಣದ ಬೀದಿಗಳಲ್ಲಿ ಸಂಚರಿಸುವುದೇ ಒಂದು ದೊಡ್ಡ ಸಾಹಸವಾಗಿದೆ. ಇನ್ನೊಂದೆಡೆ ದ್ವಿಚಕ್ರ ವಾಹನ ಸವಾರರು ಪರಿಸ್ಥಿತಿ ಏನು ವಿಭಿನ್ನವಾಗಿಲ್ಲ. ಪಟ್ಟಣದ ಹೊಸ್ ಬಸ್ ನಿಲ್ದಾಣ ರಸ್ತೆ, ಕುರಬಗೇರಿ ರಸ್ತೆ, ಕೋಟೆ ಕದಂಬ ನಗರ, ಟೀಪುನಗರ, ತರಳುಬಾಳು ಬಡಾವಣೆ, ಟಾಕೀಸ್ ರಸ್ತೆ, ಸಂತೆ ಮಾರುಕಟ್ಟೆ ಪ್ರದೇಶ, ಬನಶಂಕರಿ ನಗರ, ಶಿರಗಂಬಿ ರಸ್ತೆ, ಶಿವಾಜಿ ರಸ್ತೆ, ಸರ್ಕಾರಿ ಆಸ್ಪತ್ರೆ ಹಿಂಭಾಗ, ಕೆವಿಜಿ ಬ್ಯಾಂಕ್ ರಸ್ತೆ, ಹೀಗೆ ಬಹುತೇಕ ಪಟ್ಟಣದ ಎಲ್ಲಕಡೆ ರಸ್ತೆ ಮಧ್ಯದಲ್ಲಿಯೇ ದೊಡ್ಡ ಗುಂಡಿಗಳಿದ್ದು, ರಸ್ತೆಗಳು ಕೆಸರು ಗದ್ದೆಗಳಾಂತಾಗಿವೆ.

ಮಳೆಗಾಲದಲ್ಲಿ ಗುಂಡಿಗಳಲ್ಲಿ ಮಳೆ ನೀರುನಿಂತು ನಿತ್ಯ ಬೀಳುವುದು, ಏಳುವುದು ಸರ್ವೆಸಾಮಾನ್ಯ. ಇನ್ನೂ ದ್ವಿಚಕ್ರ ವಾಹನ ಸವಾರರು ನಿತ್ಯ ಗುಂಡಿಗಳಲ್ಲಿ ಬಿದ್ದು ಕೈ-ಕಾಲು ಮುರಿದುಕೊಳ್ಳುವುದು ಪಟ್ಟಣದ ರಸ್ತೆಯ ದುಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.



ಉದಯವಾಹಿನಿ ಚಿತ್ರ

**ಸವಾರರಿಗೆ ಯಮಲೋಕ ದರ್ಶನ**

ರಟ್ಟಿಹಳ್ಳಿ ಪಟ್ಟಣ ವ್ಯಾಪ್ತಿಯ ಎಲ್ಲಾ ಬಡಾವಣೆಗಳಲ್ಲಿ ರಸ್ತೆಗಳು ಸುಮಾರು ವರ್ಷಗಳಿಂದ ಹಾಳಾಗಿದ್ದು, ರಸ್ತೆಯ ಮಧ್ಯದಲ್ಲಿಯೇ ಗುಂಡಿಗಳಿವೆ. ಚರಂಡಿಗಳು ಸ್ವಚ್ಚವಾಗಿಲ್ಲ. ರಸ್ತೆಗೆ ಹೊಂದಿಕೊಂಡೆ ಮುಳ್ಳುಗಿಡ-ಗಂಟಿಗಳು ಬೆಳೆದು ನಿತ್ಯ ಸಂಚರಿಸುವ ಪಾದಚಾರಿಗಳಿಗೆ, ಮಕ್ಕಳಿಗೆ, ವೃದ್ಧರಿಗೆ, ಮಹಿಳೆಯರಿಗೆ, ವಾಹನ ಸವಾರರಿಗೆ ಯಮಲೋಕ ದರ್ಶನವಾಗುತ್ತಿದೆ. ಪಟ್ಟಣ ಪಂಚಾಯ್ತಿ ಸಿಬ್ಬಂದಿ ಪಟ್ಟಣದ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಕುಡಿಯುವ ನೀರು, ಚರಂಡಿ ಸ್ವಚ್ಚತೆ, ರಸ್ತೆ, ಬೀದಿದೀಪ ಮುಂತಾದ ಸಾರ್ವಜನಿಕರ ಅಗತ್ಯ ಸೌಕರ್ಯಗಳನ್ನು ಒದಗಿಸುವ ಕೆಲಸ ಮಾಡಬೇಕು' ಎನ್ನುತ್ತಾರೆ ಬನಶಂಕರಿ ನಗರ ನಿವಾಸಿ ನಿವೃತ್ತ ಶಿಕ್ಷಕ ಎಸ್.ಎಂ. ಮಠದ.

**ಮಳೆಗಾಲಕ್ಕೂ ಮುನ್ನ ಎಚ್ಚೆತ್ತುಕೊಳ್ಳದ ಅಧಿಕಾರಿಗಳು:** ಪಟ್ಟಣದಲ್ಲಿ ರಸ್ತೆಯ ಮಧ್ಯದಲ್ಲಿಯೇ ದೊಡ್ಡ, ದೊಡ್ಡ ಗುಂಡಿಗಳಿದ್ದು, ಮಳೆಗಾಲಕ್ಕೂ ಮುನ್ನ ಅವುಗಳನ್ನು ಮುಚ್ಚಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕೆಂದು ಸೌಜನ್ಯ ಕೂಡ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗಾಗಲಿ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗಾಗಲಿ ಇಲ್ಲದಿರುವುದು ನಾಚಿಕಗೇಡಿನ ವಿಷಯ. ಪಟ್ಟಣವು ತಾಲ್ಲೂಕು ಕೇಂದ್ರವಾಗಿದೆ. ಅಲ್ಲದೇ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿ ನಾಲ್ಕು ವರ್ಷ ಕಳೆದಿದೆ. ಪಟ್ಟಣದ ನಿವಾಸಿಗಳು ಈ ಹಿಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಪ. ಪಂಚಾಯಿತಿಗೆ ತೆರಿಗೆ ರೂಪದಲ್ಲಿ ಹಣ ಸಂದಾಯ ಮಾಡುತ್ತಿದ್ದಾರೆ. ಪಟ್ಟಣ ಪಂಚಾಯಿತಿಯಾಗಿರುವ ಕಾರಣದಿಂದಾಗಿ ಸರ್ಕಾರದಿಂದ ಕೂಡ ಹಲವಾರು ಯೋಜನೆಗಳಿಗೆ ದೊಡ್ಡ ಪ್ರಮಾಣದಲ್ಲಿ ಅನುದಾನ ಬರುತ್ತದೆ ಹೀಗಿದ್ದೂ ಪಟ್ಟಣದಲ್ಲಿ ರಸ್ತೆ ಮಧ್ಯದಲ್ಲಿನ ಗುಂಡಿಗಳ ದುರಸ್ತಿ ಕಾರ್ಯಮಾಡದೆ ಇರುವುದಕ್ಕೆ ಅಧಿಕಾರಿಗಳ ವಿರುದ್ಧ ಅತೃಪ್ತಿ ವ್ಯಕ್ತಪಡಿಸುತ್ತಿದ್ದಾರೆ.

> ಪಟ್ಟಣ ಪಂಚಾಯಿತಿ ಅಧಿಕಾರಿಗಳು ಮೂಲ ಸೌಕರ್ಯ ಒದಗಿಸುವಲ್ಲಿ ವಿಫಲರಾಗಿದ್ದಾರೆ. ರಸ್ತೆ ಮಧ್ಯದಲ್ಲಿರುವ ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.
> -ಶಿವಕುಮಾರ ಉಪ್ಪಾರ, ಅಖಿಲ ಕರ್ನಾಟಕ ಹಿಂದುಳಿದ ಜನಾಂಗ ಜಾಗೃತ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ


### ಸಾರ್ವಜನಿಕರು ಬೇಸರ

ಪಟ್ಟಣ ಪಂಚಾಯಿತಿಗೆ ಸಾಕಷ್ಟು ಪ್ರಮಾಣದಲ್ಲಿ ಕರ (ಟ್ಯಾಕ್ಸ್) ವಸೂಲಿಯಾಗುತ್ತಿದ್ದು, ಹೀಗಿದ್ದೂ ಇಲ್ಲಿನ ನಿವಾಸಿಗಳ ಸುರಕ್ಷತೆಗೆ ಆದ್ಯತೆ ನೀಡದಿರುವುದು ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತದೆ. ಸಮಸ್ಯೆ ಕುರಿತು ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

## ಡಾ.ಜಾಧವ 2.50ಲಕ್ಷ ಚೆಕ್ ವಿತರಣೆ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ವೆಂಕಟಾಪೂರ ಗ್ರಾಮದ ಮಲ್ಲಿಕಾರ್ಜುನ ಎಂಬ ವ್ಯಕ್ತಿ ಕಳೆದ ನಾಲ್ಕೈದು ತಿಂಗಳ ಹಿಂದೆ ಕುಂಚಾವರಂ ವಿದ್ಯುತ್ ಉಪ ವಿಭಾದ ವೆಂಕಟಾಪೂರ ಗ್ರಾಮದಲ್ಲಿ ವಿದ್ಯುತ್ ಅಪಘಾತದಲ್ಲಿ ಆಕಸ್ಮಿಕವಾಗಿ ಸಾವನೋಪ್ಪಿದ್ದ ದಿ.ಮಲ್ಲಿಕಾರ್ಜುನ ಅವರ ಪತ್ನಿ ಪ್ರೇಮಿಳಾಗೆ ಕ್ಷೇತ್ರದ ಶಾಸಕ ಡಾ.ಅವಿನಾಶ ಜಾಧವ ಸರ್ಕಾರದಿಂದ 2.50 ಲಕ್ಷ ರೂಪಾಯಿ ಚೆಕ್ ವಿತರಿಸಿದರು. ಕ್ಷೇತ್ರದ ಶಾಸಕರು ಡಾ.ಅವಿನಾಶ ಜಾಧವ 2.50ಲಕ್ಷದ ಚೆಕ್ ವಿತರಿಸಿ ಮಾತನಾಡಿದ ಅವರು,ಈ ಹಣವನ್ನು ತಮ್ಮ ಬ್ಯಾಂಕ್ ನಲ್ಲಿಟ್ಟು ಮಕ್ಕಳ ಹೆಸರಿನಲ್ಲಿ ಡಿಡಿ ತುಂಬಿ ಮುಂದೆ ಅವರ ಜೀವನಕ್ಕೆ ಉಪಯೋಗವಾಗಲಿದೆ,ಉಳಿದ ಹಣದಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಿ ಒಳ್ಳೆಯ ಶಾಲಾಕಾಲೇಜುಗಳಲ್ಲಿ ಸೇರಿಸಿ ಈ ಹಣವನ್ನು ಸದುಪಯೋಗ ಪಡೆದುಕೊಳ್ಳಿ ಎಂದರು. ಈ ಸಂದರ್ಭದಲ್ಲಿ ಜೆಸ್ಕಾಂ ಎಇಇ ಕಾಮಣ್ಣಾ ಇಂಜೇಳಿ, ಸಂತೋಷ ಪಾಟೀಲ ಮಂಗಲಗಿ,ರಮೇಶ ವೆಂಕಟಾಪೂರ,ರಾಮಕೃಷ್ಣ ಕದಂ,ಜಗನ್ ಇದ್ದರು.


ಉದಯವಾಹಿನಿ ಚಿತ್ರ

● ಗಲ್ವಾನ್ ಕಣಿವೆ ಸಂಘರ್ಷದ ನಂತರ ನಾಲ್ಕು ವರ್ಷಗಳಿಂದ ಸ್ಥಗಿತಗೊಂಡಿದ್ದ ಭಾರತ – ಚೀನಾ ಸಂಬಂಧ

# ದಲೈಲಾಮಾ ಉತ್ತರಾಧಿಕಾರಿ ಕಿಚ್ಚು: ಭಾರತಕ್ಕೆ ಡ್ರ್ಯಾಗನ್ ವಾರ್ನಿಂಗ್

ಭಾರತ, ಚೀನಾ ಸಂಘರ್ಷ





**ಚೀನಾ:** ಮುಂದಿನ ದಲೈಲಾಮಾ ಯಾರು? ನಿರ್ಧರಿಸುವುದು ಧರ್ಮಗುರುವೇ ಅಥವಾ ಡ್ರ್ಯಾಗನ್ ರಾಷ್ಟ್ರವೇ? ಈ ಒಂದು ಪ್ರಶ್ನೆಯೇ ಈಗ ಭಾರತ ಮತ್ತು ಚೀನಾ ನಡುವೆ ಹೊಸ ಸಂಘರ್ಷದ ಕಿಡಿ ಹೊತ್ತಿಸಿದ್ದು, ಗಡಿಯಲ್ಲಿ ತಿಳಿಯಾಗುತ್ತಿದ್ದ ವಾತಾವರಣ ಮತ್ತೆ ಬೂದಿ ಮುಚ್ಚಿದ ಕೆಂಡದಂತಾಗಿದೆ. ದಲೈಲಾಮಾ ಅವರ ಉತ್ತರಾಧಿಕಾರಿ ವಿಚಾರಕ್ಕೆ ಚೀನಾ ಹಾಗೂ ಭಾರತದ ನಡುವೆ ಸಂಘರ್ಷ ಸೃಷ್ಟಿಯಾಗಿದೆ.

ದಲೈಲಾಮಾ ಉತ್ತರಾಧಿಕಾರಿ ವಿಚಾರದಲ್ಲಿ ತನ್ನ ಅನುಮೋದನೆ ಕಡ್ಡಾಯ ಎಂದು ಚೀನಾ ಹೇಳಿತ್ತು. ಅದಕ್ಕೆ ನನ್ನ ಉತ್ತರಾಧಿಕಾರಿಯನ್ನು ನಾನೇ ಡಿಸೈಡ್ ಮಾಡ್ತೀನಿ ಎಂದು ದಲೈಲಾಮಾ ಹೇಳಿದ್ದರು. ಇದರ ನಡುವೆ ಪ್ರತಿಕ್ರಿಯಿಸಿದ್ದ ಭಾರತ ದಲೈಲಾಮಾ ಅವರ ಇಚ್ಛೆಯಂತೆಯೇ ಅವರ ಉತ್ತರಾಧಿಕಾರಿ ಆಯ್ಕೆಯಾಗಬೇಕು ಎಂದು ಹೇಳಿತ್ತು. ಭಾರತದ ಪ್ರತಿಕ್ರಿಯೆಗೆ ಚೀನಾ ಕೆಂಡಾಮಂಡಲವಾಗಿದ್ದು, ಟಿಬೆಟ್ ಸಂಬಂಧಿತ ವಿಷಯಗಳಲ್ಲಿ ಭಾರತ ಎಚ್ಚರಿಕೆಯಿಂದ ವರ್ತಿಸಬೇಕು. ಇಲ್ಲದಿದ್ದರೆ ದ್ವಿಪಕ್ಷೀಯ ಸಂಬಂಧಗಳ ಸುಧಾರಣೆಯ ಮೇಲೆ ಪರಿಣಾಮ ಬೀರಲಿದೆ ಎಂದು ಡ್ರ್ಯಾಗನ್ ರಾಷ್ಟ್ರ ಭಾರತಕ್ಕೆ ಎಚ್ಚರಿಸಿದೆ.

ಹೌದು, ದಲೈಲಾಮಾ ಉತ್ತರಾಧಿಕಾರಿ ವಿಚಾರವಾಗಿ ಭಾರೀ ಚರ್ಚೆ ನಡೆಯುತ್ತಿದೆ. ಉತ್ತರಾಧಿಕಾರಿಗೆ ನನ್ನ ಅನುಮೋದನೆ ಬೇಕು, ನಮ್ಮ ವಿರುದ್ಧವಾಗಿ ಯಾವುದೇ ರೀತಿಯ ನಿರ್ಧಾರವನ್ನು ಕೈಗೊಳ್ಳುವಂತಿಲ್ಲ ಎಂದು ಚೀನಾ ತಾಕೀತು ಮಾಡಿದೆ. ಇದರ ಬೆನ್ನಲ್ಲೇ ಕೇಂದ್ರ ಸಚಿವ ಕಿರಣ್ ರಿಜಿಜು ದಲೈಲಾಮಾ ಅವರ ಉತ್ತರಾಧಿಕಾರಿ ಆಯ್ಕೆ ಅವರ ಇಚ್ಛೆಯಂತೆಯೇ ನಡೆಯಬೇಕು ಎಂದಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಚೀನಾ, ಟಿಬೆಟ್ ಸಂಬಂಧಿತ ವಿಷಯಗಳಲ್ಲಿ ಭಾರತ ಎಚ್ಚರಿಕೆಯಿಂದ ವರ್ತಿಸಬೇಕು. ಇಲ್ಲದಿದ್ದರೆ ದ್ವಿಪಕ್ಷೀಯ ಸಂಬಂಧಗಳ ಸುಧಾರಣೆಯ ಮೇಲೆ ಭಾರೀ ಪರಿಣಾಮ ಬೀರಲಿದೆ ಎಂದು ಚೀನಾ ವಾರ್ನಿಂಗ್ ನೀಡಿದೆ.

ಬೀಜಿಂಗ್‌ನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೋ ನಿಂಗ್, 4ನೇ ದಲೈಲಾಮಾ ಅವರು ಚೀನಾ ವಿರೋಧಿ ಪ್ರತ್ಯೇಕತಾವಾದಿ ಎಂಬುದನ್ನು ಭಾರತ ಸ್ಪಷ್ಟವಾಗಿ ಅರಿಯಬೇಕು. ಟಿಬೆಟ್ ಸಂಬಂಧಿತ ವಿಷಯಗಳಲ್ಲಿ ಭಾರತ ಚೀನಾದ ಬದ್ಧತೆಗಳನ್ನು ಗೌರವಿಸಬೇಕು ಎಂದು ಆಗ್ರಹಿಸಿದ್ದಾರೆ. ಇತ್ತೀಚೆಗೆ ಆರಂಭವಾದ ಕೈಲಾಸ ಮತ್ತು ಮಾನಸ ಸರೋವರ ಯಾತ್ರೆಯು ಸಂಬಂಧವನ್ನು ಸಾಮಾನ್ಯಗೊಳಿಸಲು ಉಭಯ ದೇಶಗಳು ಕೈಗೊಂಡ ಮೊದಲ ಹೆಜ್ಜೆ ಎಂದು ಹೇಳಲಾಗುತ್ತಿದೆ.

ಅದರ ಬೆನ್ನಲ್ಲೇ ಎರಡು ದೇಶಗಳ ನಡುವೆ ಸಂಘರ್ಷ ಏರ್ಪಡುವ ಲಕ್ಷಣ ಕಾಣುತ್ತಿದೆ. ಇದಕ್ಕೂ ಮುನ್ನ ದಲೈಲಾಮಾ ಸಂಸ್ಥೆಯು ಮುಂದುವರಿಯಲಿದೆ ಮತ್ತು ತನ್ನ ಉತ್ತರಾಧಿಕಾರಿಯನ್ನು ಗುರುತಿಸುವ ಅಧಿಕಾರ ಕೇವಲ 'ಗಾಡೆನ್ ಫೋಡ್ರಾಂಗ್ ಟ್ರಸ್ಟ್‌ಗೆ ಮಾತ್ರ ಇರುತ್ತದೆ ಎಂದು ಟಿಬೆಟಿಯನ್ ಧರ್ಮಗುರುಗಳು ಹೇಳಿದ್ದರು. ದಲೈಲಾಮಾ ಅವರ ಈ ಉತ್ತರಾಧಿಕಾರಿ ಯೋಜನೆಯನ್ನು ಚೀನಾ ತಿರಸ್ಕರಿಸಿತ್ತು. ಭವಿಷ್ಯದ ಉತ್ತರಾಧಿಕಾರಿಯು ತಮ್ಮ ಅನುಮೋದನೆಯನ್ನು ಪಡೆಯಲೇಬೇಕು ಎಂದು ಪಟ್ಟು ಹಿಡಿದಿತ್ತು. ಇದರ ಬೆನ್ನಲ್ಲೇ ರಿಜಿಜು ಅವರ ಹೇಳಿಕೆ ಬಂದಿದೆ.

ದಲೈಲಾಮಾ ಮತ್ತು ಪಂಚೆನ್ ಲಾಮಾ ಅವರ ಉತ್ತರಾಧಿಕಾರಿ ಆಯ್ಕೆಯ ಕಠಿಣ ಧಾರ್ಮಿಕ ಆಚರಣೆಗಳು, ಐತಿಹಾಸಿಕ ಸಂಪ್ರದಾಯಗಳು, 'ಸುವರ್ಣ ಪಾತ್ರೆ' ಯಿಂದ ಚೀಟಿ ಎತ್ತುವುದೆಲ್ಲವೂ ಕೇಂದ್ರ ಸರ್ಕಾರದ ಅನುಮೋದನೆಗೆ ಅನುಗುಣವಾಗಿರಬೇಕು ಎಂದು ಚೀನಾ ಹೇಳಿದೆ. 14ನೇ ದಲೈಲಾಮಾ ಅವರನ್ನೂ ಇದೇ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾಗಿತ್ತು ಎಂದು ಚೀನಾ ವಾದಿಸಿದೆ.

### ಚೀನಾ ಈಗ ವ್ಯಾಘ್ರ

ಕಿರಣ್ ರಿಜಿಜು, ದಲೈಲಾಮಾ ಅವರ ಉತ್ತರಾಧಿಕಾರಿಯ ಬಗ್ಗೆ ನಿರ್ಧಾರವನ್ನು ಅವರ ಸ್ಥಾಪಿತ ಸಂಸ್ಥೆ ಮತ್ತು ಟಿಬೆಟಿಯನ್ ಬೌದ್ಧರ ನಾಯಕ ದಲೈಲಾಮಾ ಅವರೇ ತೆಗೆದುಕೊಳ್ಳುತ್ತಾರೆ, ಬೇರೆ ಯಾರೂ ಅಲ್ಲ ಎಂದು ಸ್ಪಷ್ಟಪಡಿಸಿದ್ದರು. ದಲೈಲಾಮಾ ಅವರ ಉತ್ತರಾಧಿಕಾರಿ ಕುರಿತ ಹೇಳಿಕೆಗಳಿಗೆ ಭಾರತ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರಿಂದ ಮೊದಲ ಪ್ರತಿಕ್ರಿಯೆ ಇದಾಗಿತ್ತು.

### ಅಭಿವೃದ್ಧಿಯ ಮೇಲೆ ಪರಿಣಾಮ

ಭಾರತವು ತನ್ನ ಮಾತು ಮತ್ತು ಕೃತ್ಯಗಳಲ್ಲಿ ಎಚ್ಚರಿಕೆ ವಹಿಸಬೇಕು. ಕ್ಸಿಝಾಂಗ್ ಅಂದ್ರೆ ಟಿಬೆಟ್ ವಿಷಯಗಳನ್ನು ಬಳಸಿಕೊಂಡು ಚೀನಾದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಬೇಕು. ಇದು ಭಾರತ-ಚೀನಾ ಸಂಬಂಧಗಳ ಸುಧಾರಣೆ,ಅಭಿವೃದ್ಧಿಯ ಮೇಲೆ ಪರಿಣಾಮ ಬೀರಲಿದೆ.

## ಅಮೆರಿಕಾದ ಟೆಕ್ಸಾಸ್‌ನಲ್ಲಿ ಭಾರೀ ಮಳೆ, 24 ಮಂದಿ ಸಾವು



**ಕೆರ್ವಿಲ್ಲೆ:** ಟೆಕ್ಸಾಸ್‌ನ ಗುಡ್ಡಗಾಡು ಪ್ರದೇಶದಲ್ಲಿ ಸುರಿದ ಭಾರೀ ಮಳೆಯಿಂದಾಗಿ 24 ಜನರು ಸಾವನ್ನಪ್ಪಿದ್ದಾರೆ ಮತ್ತು ಅನೇಕರು ನಾಪತ್ತೆಯಾಗಿದ್ದಾರೆ. ನೀರಿನಲಿ ಪ್ರವಾಹದಲ್ಲಿ ಪ್ರವಾಸಕ್ಕೆ ಬಂದಿದ್ದ 20 ಯುವತೀಯರು ಕೊಚ್ಚಿ ಹೋಗಿದ್ದು, ಹೆಲಿಕಾಪ್ಟರ್ ಹಾಗು ದೋಣಿಯಲ್ಲಿ ಅಗ್ನಿಶಾಮಕ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಧ್ಯ ಕೆರ್‌ಕೌಂಟಿಯಲ್ಲಿ ರಾತ್ರಿಯಿಡಿ ಸುಮಾರು 25 ಸೆಂಟಿಮೀಟರ್ ಮಳೆ ಸುರಿದಿದ್ದು, ಗ್ವಾಡಾಲುಪೆ ನದಿಯಲ್ಲಿ ಹಠಾತ್ ಪ್ರವಾಹ ಉಂಟಾಗಿದೆ. ತಡರಾತ್ರಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪೊಲೀಸ್ ಮುಖ್ಯಸ್ಥ ಲ್ಯಾರಿ ಲೀಥಾ ಅವರು ಮಳೆ ಅನಾಹುತದಲ್ಲಿ 24 ಜನರು ಸಾವನ್ನಪ್ಪಿದ್ದಾರೆ ಎಂದು ಖಚಿತಪಡಿಸಿದ್ದಾರೆ. ಹೆಲಿಕಾಪ್ಟರ್ ಮೂಲಕ 167 ಜನರು ಸೇರಿದಂತೆ ಒಟ್ಟು 237 ಜನರನ್ನು ಇಲ್ಲಿಯವರೆಗೆ ರಕ್ಷಿಸಲಾಗಿದೆ ಎಂದು ತಿಳಿಸಿದ್ದಾರೆ.

ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ,ಈ ನಡುವೆ ಕಾಣೆಯಾದವ ನಿರ್ದಿಷ್ಟ ಸಂಖ್ಯೆ ಗೊತ್ತಾಗುತ್ತಿಲ್ಲ, ಸಾವಿನ ಸಂಖ್ಯೆ ಹೆಚ್ಚಾಗಬಹುದು ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ. ಒಂಬತ್ತು ರಕ್ಷಣಾ ತಂಡಗಳು, 14 ಹೆಲಿಕಾಪ್ಟರ್‌ಗಳು ಮತ್ತು 12 ಡ್ರೋನ್‌ಗಳನ್ನು ಬಳಸಲಾಗುತ್ತಿತ್ತು, ಕೆಲವು ಜನರನ್ನು ಮರಗಳಿಂದ ರಕ್ಷಿಸಲಾಯಿತು ಎಂದು ತಿಳಿಸಿದ್ದಾರೆ.

ರಣಭೀಕರ ಮಳೆ ,ಬಿರುಗಾಳಿಗೆ ಸ್ಥಳೀಯರು ಬೆಚ್ಚಿಬಿದ್ದಿದ್ದಾರೆ.ಹಲವಾರು ಮನೆಗಳು ನಾಶಗೊಂಡಿದೆ ರಕ್ಷಣಾ ಕಾರ್ಯಾಚರಣೆ ಬೆಳಿಗ್ಗೆ ತೀವ್ರಗೊಂಡಿದ್ದು ರಾತ್ರಿ ನಾವು ನೋಡಿದ ಭಯಾನಕ ದೃಶ್ಯ ಆತಂಕ ಮೂಡಿಸಿದೆ ಎಂದು ಸಾಮಾಜಿಕ ತಾಣದಲ್ಲಿ ಅಲ್ಲಿದ್ದವರು ತಿಳಿಸಿದ್ದಾರೆ.

## ಅಮರನಾಥ ಯಾತ್ರೆಯಲ್ಲಿ ಬಸ್‌ಗಳ ಸರಣಿ ಅಪಘಾತ



**ಶ್ರೀನಗರ:** ರಾಂಬನ್ ಜಿಲ್ಲೆಯಲ್ಲಿ ಐದು ಬಸ್‌ಗಳು ಪರಸ್ಪರ ಡಿಕ್ಕಿ ಹೊಡೆದು ಕನಿಷ್ಠ 36 ಅಮರನಾಥ ಯಾತ್ರಾರ್ಥಿಗಳಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ಇಂದು ಮುಂಜಾನೆ ನಡೆದಿದೆ. ಈ ಬಸ್‌ಗಳು ಜಮುವಿನ ಭಗವತಿ ನಗರದಿಂದ ದಕ್ಷಿಣ ಕಾಶೀರದ ಪಹಲ್ಗಾಮ್ ಬೇಸ್ ಕ್ಯಾಂಪ್‌ಗೆ ತೆರಳುತ್ತಿದ್ದ ಬೆಂಗಾವಲು ಪಡೆಯ ಭಾಗವಾಗಿತ್ತು. ಜಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯ ಉದ್ದಕ್ಕೂ ಚಂದರ್ಕೂಟ್ ಬಳಿ 8 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ. ಬೆಂಗಾವಲು ಪಡೆಯಲ್ಲಿರುವ ಬಸ್ ಒಂದರ ಬ್ರೇಕ್ ವೈಫಲ್ಯದಿಂದ ಡಿಕ್ಕಿ ಸಂಭವಿಸಿದೆ.

ಪಹಲ್ಗಾಮ್ ಬೆಂಗಾವಲು ಪಡೆಯ ಕೊನೆಯ ವಾಹನವು ನಿಯಂತ್ರಣ ಕಳೆದುಕೊಂಡು ಚಂದರ್ಕೋಟ್ ಲ್ಯಾಂಗರ್ ಸೈಟ್‌ನಲ್ಲಿ ಸಿಕ್ಕಿಬಿದ್ದ ವಾಹನಗಳಿಗೆ ಡಿಕ್ಕಿ ಹೊಡೆದಿದೆ. ನಾಲ್ಕು ವಾಹನಗಳಿಗೆ ಹಾನಿಯಾಗಿದೆ ಮತ್ತು 36 ಯಾತ್ರಿಗಳಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಸರಾಂಬನ್ ಉಪ ಆಯುಕ್ತ ಮೊಹಮದ್ ಅಲಿಯಾಸ್ ಖಾನ್ ಹೇಳಿದ್ದಾರೆ. ಪ್ರಥಮ ಚಿಕಿತ್ಸೆಯ ನಂತರ ಯಾತ್ರಾರ್ಥಿಗಳನ್ನು ತಕ್ಷಣವೇ ಬಿಡುಗಡೆ ಮಾಡಲಾಗಿದೆ ಎಂದು ರಾಂಬನ್ ವೈದ್ಯಕೀಯ ಅಧೀಕ್ಷಕ ಸುದರ್ಶನ್ ಸಿಂಗ್ ಕಟೋಚ್ ಹೇಳಿದ್ದಾರೆ. ಹಾನಿಗೊಳಗಾದ ಬಸ್ ಗಳನ್ನು ಬದಲಾಯಿಸಿದ ನಂತರ ಬೆಂಗಾವಲು ಪಡೆ ತನ್ನ ಗಮ್ಯಸ್ಥಾನಕ್ಕೆ ಹೊರಟಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 6,979 ಯಾತ್ರಾರ್ಥಿಗಳ ನಾಲ್ಕನೇ ಬ್ಯಾಚ್ 5,196 ಪುರುಷರು, 1,427 ಮಹಿಳೆಯರು, 24 ಮಕ್ಕಳು, 331 ಸಾಧುಗಳು ಮತ್ತು ಸಾಧ್ವಿಗಳು ಮತ್ತು ಒಬ್ಬ ತೃತೀಯಲಿಂಗಿ ಭಗವತಿ ನಗರ ಮೂಲ ಶಿಬಿರದಿಂದ ಎರಡು ಪ್ರತ್ಯೇಕ ಬೆಂಗಾವಲು 3.30 ರಿಂದ 4.05 ರ ನಡುವೆ ಹೊರಟಿದ್ದಾರೆ.

> ಈಗಾಗಲೇ ಸ್ಥಳದಲ್ಲಿದ್ದ ಸರ್ಕಾರಿ ಅಧಿಕಾರಿಗಳು ಗಾಯಾಳುಗಳನ್ನು ರಾಂಬನ್ ಜಿಲ್ಲಾ ಆಸ್ಪತ್ರೆಗೆ ರವಾನಿಸಿದ್ದಾರೆ. ಗಾಯಾಳುಗಳ ಚಿಕಿತ್ಸೆಯ ಮೇಲ್ವಿಚಾರಣೆಗಾಗಿ ಹಲವಾರು ಹಿರಿಯ ಪೊಲೀಸ್ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿದರು ಮತ್ತು ಉತ್ತಮ ಆರೈಕೆಯನ್ನು ಖಚಿತಪಡಿಸಿಕೊಳ್ಳಲು ಮುಖ್ಯ ವೈದ್ಯಾಧಿಕಾರಿಗೆ ನಿರ್ದೇಶನ ನೀಡಿದ್ದಾರೆ. ಯಾತ್ರಿಗಳನ್ನು ನಂತರ ಅವರ ಮುಂದಿನ ಪ್ರಯಾಣಕ್ಕಾಗಿ ಇತರ ವಾಹನಗಳಿಗೆ ಸ್ಥಳಾಂತರಿಸಲಾಯಿತು -ಜಿಲ್ಲಾಧಿಕಾರಿ

## ಲವ್ ಜಿಹಾದ್ ಮಾಸ್ಟರ್ ಮೈಂಡ್ ಕಾಂಗ್ರೆಸ್ ಕೌನ್ಸಿಲರ್ ವಿರುದ್ಧ ಪ್ರಕರಣ



**ಇಂದೋರ್:** ಹಿಂದೂ ಮಹಿಳೆಯರನ್ನು ಬಲೆಗೆ ಬೀಳಿಸಲು ಆರ್ಥಿಕ ಪ್ರಚೋದನೆಯನ್ನು ಒಳಗೊಂಡಿರುವ ಲವ್ ಜಿಹಾದ್ ಪಿತೂರಿಯ ಮಾಸ್ಟರ್ ಮೈಂಡ್ ಆರೋಪದ ಮೇಲೆ ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ)ಯಡಿ ಮಧ್ಯಪ್ರದೇಶದ ಇಂದೋರ್‌ನ ಕಾಂಗ್ರೆಸ್ ಕೌನ್ಸಿಲರ್ ಅನ್ವರ್ ಖಾದ್ರಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಹಿಂದೂ ಮಹಿಳೆಯರನ್ನು ಗುರಿಯಾಗಿಸಲು ಖಾದ್ರಿ ಅವರಿಗೆ ಹಣ ನೀಡಿದ್ದ ಎಂದು ಮೂವರು ಬಹಿರಂಗಪಡಿಸಿದ ನಂತರ, ಈ ಪ್ರಕರಣವು ರಾಜ್ಯದಲ್ಲಿ ದೊಡ್ಡ ರಾಜಕೀಯ ಬಿರುಗಾಳಿಯನ್ನು ಎಬ್ಬಿಸಿದ್ದು, ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಯಾಗಿ ಪರಿಣಮಿಸಿದೆ.


ಎರಡು ವಾರಗಳ ಹಿಂದೆ ಬಂಗಂಗಾ ಪೊಲೀಸ್ ಠಾಣೆಯಲ್ಲಿ ದಾಖಲಾದ ದೂರುಗಳ ಆಧಾರದ ಮೇಲೆ ಇಂದೋರ್ ಪೊಲೀಸರು ಸಾಹಿಲ್ ಶೇಖ್ ಮತ್ತು ಅಲ್ತಾಫ್ ಅಲಿ ಎಂಬ ಇಬ್ಬರು ಪುರುಷರನ್ನು ಬಂಧಿಸಿದಾಗ ಈ ವಿಷಯ ಬೆಳಕಿಗೆ ಬಂದಿದೆ. ಪ್ರಣಯ ಸಂಬಂಧಗಳನ್ನು ಸ್ಥಾಪಿಸಲು ಪುರುಷರು ತಮ್ಮ ಧಾರ್ಮಿಕ ಗುರುತುಗಳನ್ನು ಮರೆಮಾಡಿ ನಂತರ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಇಬ್ಬರು ಹಿಂದೂ ಮಹಿಳೆಯರು ಆರೋಪಿಸಿದ್ದರು.

ಪೊಲೀಸರು ಖಾದ್ರಿ ವಿರುದ್ಧ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ಇತರ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಆದಾಗ್ಯೂ, ಅವರ ಹಿಂದಿನ ಅಪರಾಧ ದಾಖಲೆ ಮತ್ತು ಆರೋಪಗಳ ಗಂಭೀರತೆಯನ್ನು ಮೌಲ್ಯಮಾಪನ ಮಾಡಿದ ನಂತರ, ಇಂದೋರ್ ಜಿಲ್ಲಾಧಿಕಾರಿ ಅವರ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯ ಅನ್ವಯವನ್ನು ಅನುಮೋದಿಸಿದ್ದಾರೆ.ಎಫ್‌ಐಆರ್ ದಾಖಲಾದಾಗಿನಿಂದ ಖಾದ್ರಿ ಪರಾರಿಯಾಗಿರುವುದರಿಂದ, ಅವರ ಬಂಧನಕ್ಕೆ ಕಾರಣವಾಗುವ ಮಾಹಿತಿ ನೀಡಿದವರಿಗೆ 10,000 ನಗದು ಬಹುಮಾನ ನೀಡುವುದಾಗಿ ಅಧಿಕಾರಿಗಳು ಘೋಷಿಸಿದ್ದಾರೆ.

### ಬಲೆಗೆ ಬೀಳಿಸಲು 2 ಲಕ್ಷ

ಪೊಲೀಸ್ ವಿಚಾರಣೆಯ ಸಮಯದಲ್ಲಿ, ಇಬ್ಬರು ಆರೋಪಿಗಳು ಕಾಂಗ್ರೆಸ್ ಕೌನ್ಸಿಲರ್ ಅನ್ವರ್ ಖಾದ್ರಿ, ಹಿಂದೂ ಮಹಿಳೆಯರನ್ನು ಬಲೆಗೆ ಬೀಳಿಸಲು, ಅವರನ್ನು ಮದುವೆಯಾಗಲು ಮತ್ತು ಇಸ್ಲಾಂಗೆ ಮತಾಂತರಿಸಲು ಸಾಹಿಲ್‌ಗೆ 2 ಲಕ್ಷ ರೂ. ಮತ್ತು ಅಲ್ತಾಫ್‌ಗೆ 1 ಲಕ್ಷ ರೂ. ನಗದು ಪ್ರೋತ್ಸಾಹ ಧನ ನೀಡಿದ್ದರು ಎಂದು ಬಹಿರಂಗಪಡಿಸಿದ್ದಾರೆ.

## ಉ.ಪ್ರದೇಶದಲ್ಲಿ ಭೀಕರ ರಸ್ತೆ ಅಪಘಾತ : 8 ಮಂದಿ ಸಾವು



**ಮೀರತ್:** ಉತ್ತರ ಪ್ರದೇಶದ ಸಂಭಾಲ್ ಜಿಲ್ಲೆಯ ಮೀರತ್ -ಬದೌನ್ ಹೆದ್ದಾರಿಯಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಮದುವೆ ಸಮಾರಂಭಕ್ಕೆ ಹೊತ್ತೊಯ್ಯುತ್ತಿದ್ದ ವಾಹನ ಕಾಲೇಜಿನ ಗೋಡೆಗೆ ಡಿಕ್ಕಿ ಹೊಡೆದ ಪರಿಣಾಮ, ಮದುವೆಯ ವರ, ಹಾಗೂ ಹದಿಹರೆಯದವರು ಮತ್ತು ಇಬ್ಬರು ಚಿಕ್ಕ ಮಕ್ಕಳು ಸೇರಿದಂತೆ ಎಂಟು ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಎಸ್ ಯುವಿ ಗೋಡೆಗೆ ಡಿಕ್ಕಿ ಹೊಡೆದಿದ್ದರಿಂದ, ಅದರ ತೀವ್ರತೆ ಎಷ್ಟಿತ್ತೆಂದರೆ ಇಂಟರ್ ಕಾಲೇಜು ಕಟ್ಟಡಕ್ಕೆ ಭಾರೀ ಹಾನಿಯಾಯಿತು ಮತ್ತು ಎಸ್ಯುವಿಯಲ್ಲಿದ್ದವರನ್ನು ರಕ್ಷಿಸಲು ಜೆಸಿಬಿ ಯಂತ್ರಗಳನ್ನು ಕರೆಯಬೇಕಾಯಿತು. ಜುನವೈ ಪಟ್ಟಣದ ಬಳಿ ಈ ಅಪಘಾತ ಸಂಭವಿಸಿದ್ದು, ಹರ್ಗೋವಿಂಗ್‌ಪುರ ಗ್ರಾಮದ 10 ಜನರನ್ನು ಕರೆದೊಯ್ಯುತ್ತಿದ್ದ ಮಹೀಂದ್ರಾ ಬೊಲೆರೊ ಕಾರು, ಚಾಲಕನ ನಿಯಂತ್ರಣ ತಪ್ಪಿ ಜನತಾ ಇಂಟರ್ ಕಾಲೇಜಿನ ಆವರಣದ ಗೋಡೆಗೆ ಡಿಕ್ಕಿ ಹೊಡೆದಿದೆ. ಬದೌನ್ ಜಿಲ್ಲೆಯ ಸಿರ್ಸೌಲ್ ಗ್ರಾಮಕ್ಕೆ ಹೋಗುತ್ತಿದ್ದ ಮದುವೆ ಮೆರವಣಿಗೆಯ ಭಾಗವಾಗಿ ಈ ಅಪಘಾತ ಸಂಭವಿಸಿದೆ. ಕಾರು ಅತಿ ವೇಗದಲ್ಲಿ ಚಲಿಸುತ್ತಿದ್ದರಿಂದ ಗೋಡೆಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯಿಂದಾಗಿ ಕಾಲೇಜು ಕಟ್ಟಡದ ಒಂದು ಭಾಗಕ್ಕೆ ತೀವ್ರ ಹಾನಿಯಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಹರ್ಗೋವಿಂದ್‌ಪುರ ನಿವಾಸಿ ಸುಖ್‌ರಾಮ್ ತಮ್ಮ ಮಗ ಸೂರಜ್‌ನ ಮದುವೆಯನ್ನು ಏರ್ಪಡಿಸಿದ್ದರು. ಮದುವೆ ಪಾರ್ಟಿಯನ್ನು ಹೊತ್ತ ಹನ್ನೊಂದು ವಾಹನಗಳು ಈಗಾಗಲೇ ಹೊರಟು ಹೋಗಿದ್ದವು. ಆಗಲೇ ವರ ಮತ್ತು ಇತರ ಒಂಬತ್ತು ಜನರನ್ನು ಹೊತ್ತೊಯ್ಯುತ್ತಿದ್ದ ಒಂದು ಮಹೀಂದ್ರಾ ಬೊಲೆರೊ ಸ್ವಲ್ಪ ದೂರ ಹಿಂದೆಯೇ ಉಳಿಯಿತು. ಜುನವೈ ಸಮೀಪಿಸುತ್ತಿದ್ದಂತೆ, ಬೊಲೆರೊ ಕಾರು ನಿಯಂತ್ರಣ ತಪ್ಪಿ ಕಾಲೇಜಿನ ಗೋಡೆಗೆ ವೇಗವಾಗಿ ಡಿಕ್ಕಿ ಹೊಡೆದ ಪರಿಣಾಮ ಎಷ್ಟು ತೀವ್ರವಾಗಿತ್ತೆಂದರೆ ವಾಹನ ಛಿದ್ರವಾಯಿತು. ಸ್ಥಳೀಯ ನಿವಾಸಿಗಳು ಸ್ಥಳಕ್ಕೆ ಧಾವಿಸಿ ಸಹಾಯ ಮಾಡಿದರು ಮತ್ತು ಹೆಚ್ಚಿನ ಪ್ರಯತ್ನದಿಂದ ಬಲಿಪರುಗಳನ್ನು ಅವಶೇಷಗಳಿಂದ ಹೊರತೆಗೆಯುವಲ್ಲಿ ಯಶಸ್ವಿಯಾದರು.

## ಕಚ್ಚಾ ಬಾಂಬ್ ಸ್ಫೋಟದಲ್ಲಿ ವ್ಯಕ್ತಿ ಸಾವು


**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ಪುರ್ಬಾ ಬರ್ಧಮಾನ್ ಜಿಲ್ಲೆಯಲ್ಲಿ ಕಳೆದ ರಾತ್ರಿ ನಡೆದ ಕಚ್ಚಾ ಬಾಂಬ್ ಸ್ಫೋಟದಲ್ಲಿ ಒಬ್ಬ ವ್ಯಕ್ತಿ ಸಾವನ್ನಪ್ಪಿ, ಮತ್ತೊಬ್ಬನಿಗೆ ಗಾಯವಾಗಿದೆ. ಕಟ್ವಾ ಉಪ ವಿಭಾಗದ ರಾಜೋವಾ ಗ್ರಾಮದಲ್ಲಿ ರಾತ್ರಿ 8.30 ರ ಸುಮಾರಿಗೆ ಈ ಘಟನೆ ನಡೆದಿದ್ದು, ನಿವಾಸಿಗಳಲ್ಲಿ ಭೀತಿ ಮೂಡಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಫೋಟ ಎಷ್ಟು ತೀವ್ರವಾಗಿತ್ತು ಎಂದರೆ ಬಾಂಬ್ ತಯಾರಿಕೆ ನಡೆಯುತ್ತಿದ್ದ ಮನೆಯ ಮೇಲ್ಛಾವಣಿ ಹಾರಿಹೋಗಿದೆ ಎಂದು ಅವರು ಹೇಳಿದರು. ಕಚ್ಚಾ ಬಾಂಬ್‌ಗಳನ್ನು ತಯಾರಿಸುವುದಕ್ಕಾಗಿ ಸಮಾಜ ವಿರೋಧಿ ಶಕ್ತಿಗಳು ಹೆಚ್ಚಾಗಿ ಭೇಟಿ ನೀಡುವ ಪಾಳುಬಿದ್ದ ಮನೆಯಲ್ಲಿ ಸ್ಫೋಟ ಸಂಭವಿಸಿದೆ ಎಂದು ಸ್ಥಳೀಯರು ಹೇಳಿದ್ದಾರೆ. ಇಡೀ ಪ್ರದೇಶವನ್ನು ನಡುಗಿಸುವ ಎರಡು ಸತತ ದೊಡ್ಡ ಸ್ಫೋಟಗಳು ಸಂಭವಿಸಿದವು. ಸ್ಫೋಟವು ಹತ್ತಿರದ ಮನೆಗಳ ಬಾಗಿಲು ಮತ್ತು ಕಿಟಕಿಗಳನ್ನು ನಡುಗಿಸಿತು ಎಂದು ನಿವಾಸಿಯೊಬ್ಬರು ಹೇಳಿದರು.

ಮಾಹಿತಿ ಪಡೆದ ಕೂಡಲೇ ಪೊಲೀಸರು ಸ್ಥಳಕ್ಕೆ ತಲುಪಿ ಮನೆಯೊಳಗಿನಿಂದ ಸುಟ್ಟ ಶವವನ್ನು ಹೊರತೆಗೆದಿದ್ದಾರೆ. ಮೃತನನ್ನು ತುಫಾನ್ ಚೌಧರಿ ಎಂದು ಗುರುತಿಸಲಾದ ಇನ್ನೊಬ್ಬ ವ್ಯಕ್ತಿ ಗಂಭೀರವಾಗಿ ಗಾಯಗೊಂಡಿದ್ದು, ಆತನನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

## ಅಮೆರಿಕದಲ್ಲಿರೋ ವಿದೇಶಿಯರನ್ನು ಟ್ರ್ಯಾಕ್ ಮಾಡಲು 'ಫೇಶಿಯಲ್ ರೆಕಗ್ನಿಷನ್', ಮುಖವೇ ಪಾಸ್‌ಪೋರ್ಟ್

**ಅಮೆರಿಕ:** ಭಾರತದ ಆಧಾರ್ ಗುರುತಿನ ಚೀಟಿ ವ್ಯವಸ್ಥೆಯು ಜಗತ್ತಿನ ಹತ್ತಾರು ರಾಷ್ಟ್ರಗಳಲ್ಲಿ ಅಚ್ಚರಿ ಉಂಟು ಮಾಡಿದವು. ಸಿರಿವಂತ ದೇಶಗಳು, ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರಗಳು ಮಾಡೋಕೆ ಆಗದ ಕೆಲಸವನ್ನು ಭಾರತ ತಂತ್ರಜ್ಞರು ಮಾಡಿ ತೋರಿಸಿದರು. ಈಗ 140 ಕೋಟಿಗೂ ಹೆಚ್ಚು ಜನರ ಬಯೋಮೆಟ್ರಿಕ್ ವಿವರಗಳು ಸುರಕ್ಷಿತವಾಗಿ ಸಂಗ್ರಹ ಆಗಿದೆ. ದೇಶದಲ್ಲಿಯೇ ಯಾವುದೇ ಕೆಲಸಕ್ಕೂ ಈಗ 'ಆಧಾರ್' ಆಧಾರವಾಗಿದೆ. ಗುರುತು ದೃಢೀಕರಣಕ್ಕೆ ಕಣ್ಣು, ಬೆರಳಿನ ಡೇಟಾ ಬಳಸಲಾಗ್ತಿದೆ. ಇಂಥದ್ದೇ ವ್ಯವಸ್ಥೆಯನ್ನು ಈಗ ಅಮೆರಿಕ ಸರಕಾರವು ತರೋಕೆ ಹೊರಟಿದೆ. ಆದರೆ, ಇದು ಅಮೆರಿಕನ್ನರಿಗಿಂತ ವಿದೇಶಿ ವಲಸಿಗರ ಮೇಲೆ ಕಣ್ಣಿಡೋಕೆ ತರಲಾಗ್ತಿರೋ ವ್ಯವಸ್ಥೆ.ಅಮೆರಿಕ ಸರ್ಕಾರವು ತನ್ನ ದೇಶಕ್ಕೆ ಬರುವ ಮತ್ತು ದೇಶದಿಂದ ಹೊರಹೋಗುವ ಎಲ್ಲಾ ವಿದೇಶಿಯರ ಮೇಲೆ ನಿಗಾ ಇಡಲು ಫೇಶಿಯಲ್ ರೆಕಗ್ನಿಷನ್ ತಂತ್ರಜ್ಞಾನವನ್ನು ಜಾರಿಗೆ ತರಲು ಮುಂದಾಗಿದೆ. ಅಮೆರಿಕದ ಎಂಟ್ರಿ-ಎಗ್ಸಿಟ್‌ನಲ್ಲಿ ಎಲ್ಲಾ ವಿದೇಶಿಯರ ಫೇಶಿಯಲ್ ಮಾಹಿತಿ ಸಂಗ್ರಹಿಸಲಾಗುತ್ತದೆ. ಫೋಟೋವನ್ನು ತಕ್ಷಣವೇ ಅವರ ಪಾಸ್‌ಪೋರ್ಟ್, ವೀಸಾ ಮತ್ತು ಇತರ ಪ್ರಯಾಣ ದಾಖಲೆಗಳಲ್ಲಿರುವ ಫೋಟೋಗಳ ಜೊತೆ ಹೋಲಿಸಿ, ವ್ಯಕ್ತಿಯ ಗುರುತು ಖಚಿತಪಡಿಸಿಕೊಳ್ಳಲಾಗುತ್ತದೆ. ಕಾರುಗಳಲ್ಲಿ ಗಡಿ ದಾಟುವಾಗ ಇದು ಇನ್ನಷ್ಟು ಕಠಿಣವಾಗಲಿದೆ.



### ಬಯೋಮೆಟ್ರಿಕ್ ಎಂಟ್ರಿ-ಎಕ್ಸಿಟ್

ಅಮೆರಿಕದ ಗೃಹ ಭದ್ರತಾ ಇಲಾಖೆಯಾದ ಹೋಂಲ್ಯಾಂಡ್ ಸೆಕ್ಯುರಿಟಿ ಹಾಗೂ ಕಸ್ಟಮ್ಸ್ ಮತ್ತು ಗಡಿ ಸಂರಕ್ಷಣಾ ಸಂಸ್ಥೆಯು ಈ ಯೋಜನೆಯ ನೇತೃತ್ವ ವಹಿಸಿವೆ. ಇದರ ಮುಖ್ಯ ಉದ್ದೇಶ, ಎಲ್ಲಾ ಪ್ರಮುಖ ಗಡಿಗಳಲ್ಲಿ ವ್ಯಕ್ತಿಯ ಮುಖದ ಗುರುತನ್ನು ಪತ್ತೆ ಹಚ್ಚುವ ಬಯೋಮೆಟ್ರಿಕ್ ಎಂಟ್ರಿ-ಎಕ್ಸಿಟ್' ವ್ಯವಸ್ಥೆಯನ್ನು ಜಾರಿ ಮಾಡುವುದಾಗಿದೆ. ಏರ್‌ಪೋರ್ಟ್, ಬಂದರು ಮತ್ತು ರಸ್ತೆ ಮಾರ್ಗಗಳಲ್ಲಿ, ಜನರ ಮುಖವನ್ನು ಸ್ಕ್ಯಾನ್ ಮಾಡಿ ಅವರ ಗುರುತನ್ನು ಪತ್ತೆ ಮಾಡುವ ವ್ಯವಸ್ಥೆ ಇದಾಗಿದೆ.

● ಹಿರಿಯ ಅಧಿಕಾರಿಗಳು, ಮಧ್ಯವರ್ತಿಗಳು, ಉನ್ನತ ಶಿಕ್ಷಣ ತಜ್ಞರು ಮತ್ತು ಸ್ವಯಂ ಘೋಷಿತ ದೇವಮಾನವ ಕೂಡ ಇದರಲ್ಲಿ ಭಾಗಿ

# ದೇಶದ ಇತಿಹಾಸದಲ್ಲಿಯೇ ಅತ್ಯಂತ ದೊಡ್ಡ ವೈದ್ಯಕೀಯ ಕಾಲೇಜು ಹಗರಣ ಬೆಳಕಿಗೆ



**ಭೋಪಾಲ್:** ದೇಶದ ಇತಿಹಾಸದಲ್ಲಿಯೇ ಅತ್ಯಂತ ದೊಡ್ಡ ವೈದ್ಯಕೀಯ ಕಾಲೇಜು ಹಗರಣಗಳಲ್ಲಿ ಒಂದನ್ನು ಕೇಂದ್ರೀಯ ತನಿಖಾ ದಳ ಬಯಲಿಗೆಳೆದಿದೆ. ಇದು ಬಹು ರಾಜ್ಯಗಳಲ್ಲಿ ನಡೆದಿದ್ದು, ಹಿರಿಯ ಅಧಿಕಾರಿಗಳು, ಮಧ್ಯವರ್ತಿಗಳು, ಉನ್ನತ ಶಿಕ್ಷಣ ತಜ್ಞರು ಮತ್ತು ಸ್ವಯಂ ಘೋಷಿತ ದೇವಮಾನವ ಕೂಡ ಇದರಲ್ಲಿ ಭಾಗಿಯಾಗಿದ್ದಾರೆ.

ಭಾರತದ ವೈದ್ಯಕೀಯ ಶಿಕ್ಷಣ ವ್ಯವಸ್ಥೆಯಲ್ಲಿರುವ ಅವ್ಯವಹಾರವನ್ನು ಬಹಿರಂಗಪಡಿಸುವ ಸಿಬಿಐ ತನಿಖೆಯಲ್ಲಿ ದೇಶಾದ್ಯಂತ ನಡೆದ ಲಂಚದ ಜಾಲ ಬೆಳಕಿಗೆ ಬಂದಿದೆ. ಇವರಲ್ಲಿ ಡಿ ಪಿ ಸಿಂಗ್ (ಮಾಜಿ ಯುಜಿಸಿ ಅಧ್ಯಕ್ಷರು ಮತ್ತು ಪ್ರಸ್ತುತ ಟಿಐಎಸ್‌ಎಸ್ ಕುಲಪತಿ), ಸ್ವಯಂ ಘೋಷಿತ ದೇವಮಾನವ ರಾವತ್ ಪುರ ಸರ್ಕಾರ್, ಇಂದೋರ ಇಂಡೆಕ್ಸ್ ವೈದ್ಯಕೀಯ ಕಾಲೇಜಿನ ಸುರೇಶ್ ಸಿಂಗ್ ಭಡೋರಿಯಾ ಮತ್ತು ಅಧಿಕಾರಿಗಳು ಮತ್ತು ಮಧ್ಯವರ್ತಿಗಳ ವ್ಯಾಪಕ ಜಾಲ ಸೇರಿವೆ. ಸಿಬಿಐ ತನ್ನ ಎಫ್‌ಐಆರ್‌ನಲ್ಲಿ 35 ವ್ಯಕ್ತಿಗಳನ್ನು ಹೆಸರಿಸಿದೆ. ಅವರಲ್ಲಿ ನಿವೃತ್ತ ಐಎಫ್‌ಎಸ್ ಅಧಿಕಾರಿ ಸಂಜಯ್ ಶುಕ್ಲಾ, ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಛತ್ತೀಸ್‌ಗಢ ಅರಣ್ಯ ಇಲಾಖೆ ಮತ್ತು ಪಿಸಿಸಿಎಫ್‌ನ ಮಾಜಿ ಮುಖ್ಯಸ್ಥರಾಗಿರುವ ಶುಕ್ಲಾ, ಟ್ರಸ್ಟಿ ಪಾತ್ರದಲ್ಲಿ ರಾವತ್ ಪುರ ಗುಂಪಿನೊಂದಿಗೆ ಸಂಬಂಧ ಹೊಂದಿದ್ದಾರೆ. ಆದಾಗ್ಯೂ, ಇಲ್ಲಿಯವರೆಗೆ, ಈ ಪ್ರಕರಣದಲ್ಲಿ ನಿರ್ದೇಶಕ ಆತುಲ್ ತಿವಾರಿಯನ್ನು ಮಾತ್ರ ಬಂಧಿಸಲಾಗಿದೆ.

ಇವೆಲ್ಲವೂ ಕಳಪೆ ಗುಣಮಟ್ಟದ ವೈದ್ಯಕೀಯ ಕಾಲೇಜುಗಳಿಗೆ ಅಕ್ರಮ ಅನುಮೋದನೆಗಳನ್ನು ಪಡೆಯಲು. ಆಪಾದಿತ ದಂಧೆಯಲ್ಲಿ ಆರೋಗ್ಯ ಸಚಿವಾಲಯದ ಅಧಿಕಾರಿಗಳೂ ಭಾಗಿಯಾಗಿದ್ದಾರೆ.

ರಾಯ್‌ಪುರದ ಶ್ರೀ ರಾವತ್ ಪುರ ಸರ್ಕಾರ್ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ತಪಾಸಣೆಗಾಗಿ ಲಂಚ ಪ್ರಕರಣದೊಂದಿಗೆ ತನಿಖೆ ಪ್ರಾರಂಭವಾಯಿತು, ಅಲ್ಲಿ ಅನುಕೂಲಕರ ಪರಿಶೀಲನಾ ವರದಿಯನ್ನು ನೀಡಲು 55 ಲಕ್ಷ ರೂ.ಗಳನ್ನು ಸ್ವೀಕರಿಸಿದ ಆರೋಪದ ಮೇಲೆ ಮೂವರು ವೈದ್ಯರು ಸೇರಿದಂತೆ ಆರು ವ್ಯಕ್ತಿಗಳನ್ನು ಬಂಧಿಸಲಾಯಿತು.

ತನಿಖಾ ತಂಡದ ಮುಖ್ಯಸ್ಥರ ಸಹಾಯಕರಿಂದ 38.38 ಲಕ್ಷ ರೂ. ಮತ್ತು ಮತ್ತೊಬ್ಬ ಅಧಿಕಾರಿಯ ನಿವಾಸದಿಂದ 16.62 ಲಕ್ಷ ಹಣವನ್ನು ವಶಪಡಿಸಿಕೊಂಡ ಸಿಬಿಐ, ವೈದ್ಯರನ್ನು ರೆಡ್ ಹ್ಯಾಂಡ್ ಆಗಿ ಬಂಧಿಸಿದೆ. ಸಿಬಿಐ ಪ್ರಕಾರ ಸಂಪೂರ್ಣ ಲಂಚವನ್ನು ಯೋಜಿಸಲಾಗಿತ್ತು. ಹವಾಲಾ ಮಾರ್ಗಗಳ ಮೂಲಕ ಸಂಗ್ರಹಿಸಿ ತಂಡದ ನಡುವೆ ವಿತರಿಸಲಾಗಿತ್ತು. ಆದರೆ ರಾಯ್ ಪುರದಲ್ಲಿ ಆರಂಭವಾದದ್ದು ಬೇಗನೆ ರಾಷ್ಟ್ರೀಯ ಹಗರಣವಾಗಿ ಬೆಳಕಿಗೆ ಬಂದಿದೆ. ರಾವತ್‌ಪುರ ಸರ್ಕಾರ್ ವಿವಾದಕ್ಕೆ ಗುರಿಯಾಗುತ್ತಿರುವುದು ಇದೇ ಮೊದಲಲ್ಲ, ಅವರ ಟ್ರಸ್ಟ್ ಮೇಲೆ ಭೂ ಅತಿಕ್ರಮಣ, ಅನುಮೋದಿಸದ ಕಾಲೇಜುಗಳನ್ನು ನಡೆಸುವುದು, ವಿದ್ಯಾರ್ಥಿಗಳನ್ನು ಧಾರ್ಮಿಕ ಭಾಗವಹಿಸುವಿಕೆಗೆ ಒತ್ತಾಯಿಸುವುದು ಮತ್ತು ಆಶ್ರಮಗಳ ಒಳಗೆ ಮಹಿಳಾ ಅನುಯಾಯಿಗಳಿಗೆ ಮಾನಸಿಕ ಕಿರುಕುಳ ನೀಡಿದ ಆರೋಪಗಳಿವೆ.

### ಕೋಟಿಗಟ್ಟಲೆ ಹಣವನ್ನು ವಿನಿಮಯ

ರಾಜಸ್ಥಾನ, ಗುರಗಾಂವ್ ಮತ್ತು ಇಂದೋರ್‌ನಿಂದ ವಾರಂಗಲ್ ಮತ್ತು ವಿಶಾಖಪಟ್ಟಣಂವರೆಗೆ ವಿಸ್ತರಿಸಿರುವ ಈ ಬಹುಕೋಟಿ ಹಗರಣದಲ್ಲಿ ನಕಲಿ ಅಧ್ಯಾಪಕರು, ನಕಲಿ ತಪಾಸಣೆಗಳು ಮತ್ತು ಸೋರಿಕೆಯಾದ ಫೈಲ್‌ಗಳು ಸೇರಿದ್ದವು. ಹವಾಲಾ ಮತ್ತು ಬ್ಯಾಂಕಿಂಗ್ ಮಾರ್ಗಗಳ ಮೂಲಕ ಕೋಟಿಗಟ್ಟಲೆ ಹಣವನ್ನು ವಿನಿಮಯ ಮಾಡಿಕೊಳ್ಳಲಾಗಿದೆ.

### ದೇವಮಾನವ

ಉನ್ನತ ರಾಜಕಾರಣಿಗಳು, ಸಚಿವರು ಮತ್ತು ಅಧಿಕಾರಿಗಳೊಂದಿಗೆ ದೀರ್ಘಕಾಲದ ಸಂಬಂಧ ಹೊಂದಿರುವ ರವಿಶಂಕರ್ ಮಹಾರಾಜ್ ಎಂದೂ ಕರೆಯಲ್ಪಡುವ ರಾವತ್ ಪುರ ಸರ್ಕಾರ್ ಅವರನ್ನು ಎಫ್ ಐಆರಲ್ಲಿ ಸೇರಿಸಿರುವುದು ಗಮನ ಸೆಳೆದಿದೆ. ಸಾಮಾನ್ಯವಾಗಿ ಅಧಿಕಾರಕ್ಕೆ ಹತ್ತಿರವಾದ ಬಾಬಾ ಎಂದು ಕರೆಯಲ್ಪಡುವ ಅವರ ಐಎಎಸ್, ಐಪಿಎಸ್ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳೊಂದಿಗಿನ ಛಾಯಾಚಿತ್ರಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿವೆ. ಸರ್ಕಾರಿ ಯೋಜನೆಗಳು, ರಸ್ತೆ ಸಂಪರ್ಕ ಯೋಜನೆಗಳು ಮತ್ತು ವಿದ್ಯುತ್ ಸಬ್ಸಿಡಿಗಳಲ್ಲಿಯೂ ಸಹ ಅವರ ಟ್ರಸ್ಟ್ ಅನಗತ್ಯ ಸವಲತ್ತುಗಳನ್ನು ಪಡೆದಿದೆ.

### ದಿ ಸದರ್ನ್ ಅಂಗಲ್

ಆಂಧ್ರಪ್ರದೇಶದ ಕದಿರಿನ ಏಜೆಂಟ್ ಬಿ ಹರಿ ಪ್ರಸಾದ್, ಹೈದರಾಬಾದ್, ಅಂಕಮ್ ರಾಂಬಾಬು ಮತ್ತು ವಿಶಾಖಪಟ್ಟಣಂನಲ್ಲಿ ಕೃಷ್ಣ ಕಿಶೋರ್ ಅವರ ಪಾಲುದಾರರೊಂದಿಗೆ ಸೇರಿ, ಎನ್‌ಎಂಸಿ ತಪಾಸಣೆಯ ಸಮಯದಲ್ಲಿ ನಕಲಿ ಅಧ್ಯಾಪಕರು ಮತ್ತು ನಕಲಿ ರೋಗಿಗಳನ್ನು ಹೇಗೆ ಪ್ರಸ್ತುತಪಡಿಸಲು ವ್ಯವಸ್ಥೆ ಮಾಡಿದರು ಎಂಬುದನ್ನು ಸಿಬಿಐ ಬಯಲು ಮಾಡಿದೆ.

## ಮಿನಿ ನ್ಯೂಸ್

### ಗುಂಡಿಕ್ಕಿ ಉದ್ಯಮಿಯ ಹತ್ಯೆ

**ಪಾಟ್ನಾ:** ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಪ್ರಮುಖ ಉದ್ಯಮಿ ಗೋಪಾಲ್ ಖೇಮ್ಕಾ ಅವರನ್ನು ಬೈಕ್‌ನಲ್ಲಿ ಬಂದ ಅಪರಿಚಿತ ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದಾರೆ. ಗೋಪಾಲ್ ಖೇಮ್ಕಾ ಅವರ ಮಗ ಗುಂಜನ್ ಖೇಮ್ಕಾ ಅವರನ್ನು ಇದೇ ರೀತಿಯಲ್ಲಿ ಹತ್ಯೆಗೈದ ಆರು ವರ್ಷಗಳ ನಂತರ ಈ ಘಟನೆ ನಡೆದಿದೆ.

ರಾಜ್ಯದ ಅತ್ಯಂತ ಹಳೆಯ ಖಾಸಗಿ ಆಸ್ಪತ್ರೆಗಳಲ್ಲಿ ಒಂದಾದ ಮಗಧ ಆಸ್ಪತ್ರೆಯ ಮಾಲೀಕ ಖೇಮ್ಕಾ, ಐಷಾರಾಮಿ ಗಾಂಧಿ ಮೈದಾನ ಪ್ರದೇಶದಲ್ಲಿರುವ ತಮ್ಮ ನಿವಾಸ ಪಣಾಚೆ ಹೋಟೆಲ್ ಬಳಿಯ ಅಪಾರ್ಟ್ ಮೆಂಟ್ ಬಳ ಕಾರಿನಿಂದ ಇಳಿಯುತ್ತಿದ್ದಂತೆಯೇ ಅಪರಿಚಿತ ದಾಳಿಕೋರರು ಅವರ ಮೇಲೆ ಗುಂಡು ಹಾರಿಸಿದರು.

ಗುಂಡಿನ ದಾಳಿ ನಡೆದ ಸುಮಾರು ಮೂರು ಗಂಟೆಗಳ ನಂತರ ಅಧಿಕಾರಿಗಳು ಸ್ಥಳಕ್ಕೆ ಬಂದರು ಎಂದು ಖೇಮ್ಕಾ ಅವರ ಸಹೋದರ ಶಂಕರ್ ದೂರಿದ್ದಾರೆ. ಬಂಕಿಪೋರ್ ಕ್ಲಬ್‌ನ ನಿರ್ದೇಶಕರೂ ಆಗಿದ್ದ ಅವರ ಸಹೋದರ ಮನೆಗೆ ಹಿಂತಿರುಗುತ್ತಿದ್ದರು. ರಾತ್ರಿ 11:40ಕ್ಕೆ ಅವರು ಕಾರಿನಿಂದ ಇಳಿಯುತ್ತಿದ್ದಂತೆ, ದಾಳಿಕೋರರು ಅವರ ಮೇಲೆ ಗುಂಡು ಹಾರಿಸಿದರು. ಪೊಲೀಸರು ಸ್ಥಳಕ್ಕೆ ತಲುಪಿದ್ದು ಬೆಳಗಿನ ಜಾವ 2:30 ರವರೆಗೆ ಎಂದು ಶಂಕರ್ ಹೇಳಿದ್ದಾರೆ.

### 5 ಬಸ್‌ಗಳ ಡಿಕ್ಕಿ: 36 ಭಕ್ತರಿಗೆ ಗಾಯ

**ನವದೆಹಲಿ:** ಜಮ್ಮು ಮತ್ತು ಕಾಶ್ಮೀರದ ರಾಂಬನ್ ಜಿಲ್ಲೆಯ ಚಂದರ್ಕೋಟ್ ಲಂಗರ್ ಸ್ಥಳದ ಬಳಿ ಶ್ರೀ ಅಮರನಾಥ ಯಾತ್ರೆಗಾಗಿ ಪೆಹಲ್ಗಾಮ್‌ಗೆ ತೆರಳುತ್ತಿದ್ದ ಐದು ಬಸ್‌ಗಳು ಪರಸ್ಪರ ಡಿಕ್ಕಿ ಹೊಡೆದ ಪರಿಣಾಮ 36 ಭಕ್ತರು ಗಾಯಗೊಂಡಿದ್ದಾರೆ. ಯಾತ್ರಾ ಬೆಂಗಾವಲು ಪಡೆಯ ಭಾಗವಾಗಿದ್ದ ವಾಹನಗಳು ಬ್ರೇಕ್ ವೈಫಲ್ಯದಿಂದಾಗಿ ನಿಯಂತ್ರಣ ಕಳೆದುಕೊಂಡು ಪರಸ್ಪರ ಡಿಕ್ಕಿ ಹೊಡೆದಾಗ ಈ ಘಟನೆ ಸಂಭವಿಸಿದೆ. ಸದ್ಯ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಪೊಲೀಸ್ ಮತ್ತು ಆರೋಗ್ಯ ಇಲಾಖೆಯ ರಕ್ಷಣಾ ತಂಡಗಳು ತಕ್ಷಣ ಸ್ಥಳಕ್ಕೆ ಧಾವಿಸಿ ಗಾಯಗೊಂಡ ಯಾತ್ರಿಕರನ್ನು ವೈದ್ಯಕೀಯ ಚಿಕಿತ್ಸೆಗಾಗಿ ರಾಂಬನ್ ಜಿಲ್ಲಾ ಆಸ್ಪತ್ರೆಗೆ ಸ್ಥಳಾಂತರಿಸಿದರು.

ಸಮುದ್ರ ಮಟ್ಟದಿಂದ 3,888 ಮೀಟರ್ ಎತ್ತರದಲ್ಲಿರುವ ಪವಿತ್ರ ಗುಹಾ ದೇವಾಲಯವನ್ನು ಯಾತ್ರಿಕರು ಎರಡು ಮಾರ್ಗಗಳ ಮೂಲಕ ತಲುಪುತ್ತಾರೆ. ಒಂದು ಸಾಂಪ್ರದಾಯಿಕ ಪೆಹಲ್ಗಾಮ್ ಮಾರ್ಗ ಅಥವಾ ಇನ್ನೊಂದು ಚಿಕ್ಕ ಬಾಲ್ಟಾಲ್ ಮಾರ್ಗ. ಪೆಹಲ್ಗಾಮ್ ಮಾರ್ಗವನ್ನು ಬಳಸುವವರು ಚಂದನ್ವಾರಿ, ಶೇಷನಾಗ್ ಮತ್ತು ಪಂಚತರ್ನಿ ಮೂಲಕ ದೇವಾಲಯವನ್ನು ತಲುಪಬೇಕು ಮತ್ತು 46 ಕಿ.ಮೀ.ಗಳನ್ನು ಕಾಲ್ನಡಿಗೆಯಲ್ಲಿ ಕ್ರಮಿಸಬೇಕು. 6,979 ಅಮರನಾಥ ಯಾತ್ರಿಕರ ಮತ್ತೊಂದು ಗುಂಪು ಇಂದು ಜಮ್ಮುವಿನಿಂದ ಕಾಶ್ಮೀರಕ್ಕೆ ಬಿಗಿ ಭದ್ರತೆಯಲ್ಲಿ ಹೊರಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಉಗ್ರ ಮಸೂದ್ ಅಜರ್ ಎಲ್ಲಿದ್ದಾನೆ ಎಂಬುದು ಪಾಕಿಸ್ತಾನಕ್ಕೆ ಗೊತ್ತಿಲ್ಲ: ಬಿಲಾವಲ್ ಭುಟ್ಟೊ

**ಇಸ್ಲಾಮಾಬಾದ್:** ಭಯೋತ್ಪಾದಕ ಸಂಘಟನೆ ಜೈಶ್-ಎ-ಮೊಹಮ್ಮದ್ (ಎಇಬ) ಮುಖ್ಯಸ್ಥ ಮಸೂದ್ ಅಜರ್ ಎಲ್ಲಿದ್ದಾನೆ ಎಂಬುದು ಪಾಕಿಸ್ತಾನಕ್ಕೆ ಗೊತ್ತಿಲ್ಲ. ಆತ ಪಾಕ್ ನೆಲದಲ್ಲಿಯೇ ಇದ್ದಾನೆ ಎಂಬುದಕ್ಕೆ ಭಾರತ ವಿಶ್ವಾಸಾರ್ಹ ಪುರಾವೆ ನೀಡಿದರೆ ದೇಶ ಆತನನ್ನು ಬಂಧಿಸುತ್ತದೆ ಎಂದು ಪಾಕಿಸ್ತಾನ ಪೀಫಲ್ಸ್ ಪಾರ್ಟಿನಾಯಕ ಬಿಲಾವಲ್ ಭುಟ್ಟೊ ಝುರ್ಧಾರಿ ಹೇಳಿದ್ದಾರೆ. ಅಲ್ ಜಜೀರಾಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಭುಟ್ಟೊ ಅಫ್ಘಾನ್ ಜಿಹಾದಿಯಲ್ಲಿ ಅಜಾರ್ ತೊಡಗಿಸಿಕೊಂಡಿರುವುದನ್ನು ಗಮನಿಸಿದರೆ, ಆತ ಅಫ್ಘಾನಿಸ್ತಾನದಲ್ಲಿರಬಹುದು ಎಂಬುದು ಪಾಕಿಸ್ತಾನದ ನಂಬಿಕೆಯಾಗಿದೆ ಎಂದಿದ್ದಾರೆ.

ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರಕ್ಕೆ ಮರಳಿರುವುದನ್ನು ಉಲ್ಲೇಖಿಸಿ ಮಾತನಾಡಿದ ಭುಟ್ಟೋ, ಮಾಡಲಾಗದ್ದನ್ನು ಪಾಕಿಸ್ತಾನ ಮಾಡಲು ಸಾಧ್ಯವಿಲ್ಲ. ಕಾಳಜಿಯುಳ್ಳ ಯಾರಾದರೂ ಸಕ್ರಿಯರಾಗಬೇಕೆಂದು ನಾವು ಬಯಸುವುದಕ್ಕೆ ಯಾವುದೇ ಕಾರಣವಿಲ್ಲ ಎಂದರು. ಅಜಾರ್ ಪಾಕಿಸ್ತಾನದ ನೆಲದಲ್ಲಿದ್ದಾನೆ ಎಂಬುದಕ್ಕೆ ಭಾರತ ಸರ್ಕಾರ ಸೂಕ್ತ ಮಾಹಿತಿಯನ್ನು ನಮ್ಮೊಂದಿಗೆ ಹಂಚಿಕೊಂಡರೆ ಆತನನ್ನು ಬಂಧಿಸಲು ನಮಗೆ ಹೆಚ್ಚಿನ ಸಂತೋಷವಾಗುತ್ತದೆ. ಇಲ್ಲಿಯವರೆಗೂ ನವದೆಹಲಿ ಈ ರೀತಿಯ ಯಾವುದೇ ಕೆಲಸ ಮಾಡಿಲ್ಲ ಎಂದು ಅವರು ಹೇಳಿದರು.

### ಕಲ್ಲಿದ್ದಲು ಗಣಿಯ ಒಂದು ಭಾಗ ಕುಸಿತ: ನಾಲ್ವರು ಸಾವು, ಹಲವರು ಸಿಲುಕಿರುವ ಶಂಕೆ

**ರಾಮಗಢ:** ಜಾರ್ಖಂಡ್‌ನ ರಾಮಗಢ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದ ಸಮಯದಲ್ಲಿ ಕಲ್ಲಿದ್ದಲು ಗಣಿಯ ಒಂದು ಭಾಗ ಕುಸಿದು ನಾಲ್ವರು ಸಾವನ್ನಪ್ಪಿದ್ದಾರೆ ಮತ್ತು ಇನ್ನೂ ಕೆಲವರು ಒಳಗಡೆ ಸಿಲುಕಿಕೊಂಡಿರುವ ಶಂಕೆ ವ್ಯಕ್ತವಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಜಿಲ್ಲೆಯ ಕುಜು ಹೊರಠಾಣೆಯ ಕರ್ಮ ಪ್ರದೇಶದಲ್ಲಿ ಇಂದು ಬೆಳಗಿನ ಜಾವ ಈ ಘಟನೆ ಸಂಭವಿಸಿದೆ.

ದುರಂತ ಸ್ಥಳದಿಂದ ನಾಲ್ಕು ಶವಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು(ರಾಮಗಢ) ಪರಮೇಶ್ವರ ಪ್ರಸಾದ್ ಅವರು ಹೇಳಿದ್ದಾರೆ. ಆದಾಗ್ಯೂ, ಪೊಲೀಸ್ ತಂಡ ಸ್ಥಳಕ್ಕೆ ಬರುವ ಮೊದಲೇ ಗ್ರಾಮಸ್ಥರು ಮೂರು ಶವಗಳನ್ನು ತೆಗೆದುಕೊಂಡು ಹೋದರು ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ.

### ಮರಾಠಿ ಕಲಿಯಲ್ಲ ಎಂದಿದ್ದಕ್ಕೆ ಕಚೇರಿ ಧ್ವಂಸ: ಕ್ಷಮೆಯಾಚಿಸಿದ ಉದ್ಯಮಿ

**ಮುಂಬೈ:** ಮರಾಠಿ ಕಲಿಯಲ್ಲ ಎಂದು ರಾಜ್ ಠಾಕ್ರೆ ಅವರಿಗೆ ಸವಾಲು ಹಾಕಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಂಡಿದ್ದ ಉದ್ಯಮಿ ಸುಶೀಲ್ ಕೇಡಿಯಾ ಅವರ ಕಚೇರಿ ಮೇಲೆ ದಾಳಿ ನಡೆಸಿದ ಐವರು ಮಹಾರಾಷ್ಟ್ರ ನವ ನಿರ್ಮಾಣ ಸೇನೆ ಕಾರ್ಯಕರ್ತರನ್ನು ಶನಿವಾರ ಬಂಧಿಸಲಾಗಿದೆ. ದಾಳಿ ನಡೆದ ಕೆಲ ತಾಸುಗಳ ಬಳಿಕ, ಮಿತಿ ಮೀರಿದ ರೀತಿಯ ಸೋಶಿಯಲ್ ಮೀಡಿಯಾ ಪೋಸ್ಟ್‌ನಲ್ಲಿ ಕ್ಷಮೆಯಾಚಿಸಿದ್ದಾರೆ. ಅಲ್ಲದೇ ಠಾಕ್ರೆ ಅವರ ಅಭಿಮಾನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ಒತ್ತಡದಲ್ಲಿ ತಪ್ಪು ಮನಸ್ಥಿತಿಯಲ್ಲಿ ಅಂತಹ ಪೋಸ್ಟ್ ಹಾಕಿದ್ದು, ತನ್ನ ತಪ್ಪು ಗೊತ್ತಾದ ಬಳಿಕ ಅದನ್ನು ನಿಸ್ಸಂದಿಗ್ಧವಾಗಿ ಸರಿಪಡಿಸಿಕೊಳ್ಳಲು ಬಯಸಿದ್ದೇನೆ. ಮರಾಠಿ ಗೊತ್ತಿಲ್ಲದವರ ಮೇಲೆ ನಡೆದ ದಾಳಿಯಿಂದ ಮಾನಸಿಕವಾಗಿ ಒತ್ತಡಕ್ಕೆ ಒಳಗಾಗಿದ್ದೇನೆ. ನನ್ನ ಮಿತಿ ಮೀರಿದ ರೀತಿಯ ಹೇಳಿಕೆಯನ್ನು ವಾಪಸ್ ಪಡೆಯುವುದಾಗಿ ಹೇಳಿದ್ದಾರೆ. ಮುಂಬಯಿಯಲ್ಲಿ 30 ವರ್ಷಗಳ ಕಾಲ ವಾಸಿಸುತ್ತಿದ್ದರೂ, ಸ್ಥಳೀಯ ಮರಾಠಿಯವರು ಮಾತನಾಡುವಂತೆ ನಿರರ್ಗಳವಾಗಿ ಮಾತನಾಡಲು, ಗೊಂದಲ ಅಥವಾ ಯಾವುದೇ ಮುಜುಗರ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಕೇಡಿಯಾ ಕ್ಷಮೆಯಾಚಿಸಿರುವ ವಿಡಿಯೋದಲ್ಲಿ ತಿಳಿಸಿದ್ದಾರೆ.

# ಕಾರು ರೇಸ್‌ಗೆ ಕಿಚ್ಚ ಎಂಟ್ರಿ

ನಟ ಕಿಚ್ಚ ಸುದೀಪ್ ಮಹತ್ವದ ಹೆಜ್ಜೆ ಇಟ್ಟಿದ್ದು ಇಂಡಿಯನ್ ಕಾರ್ ರೇಸ್ ಫೆಸ್ಟಿವಲ್‌ನಲ್ಲಿ ಬೆಂಗಳೂರು ತಂಡವನ್ನು ಖರೀದಿಸಿದ್ದಾರೆ. ಸುದೀಪ್ ಖರೀದಿಸಿದ ತಂಡಕ್ಕೆ ಕಿಚ್ಚಾಸ್ ಕಿಂಗ್ಸ್ ಎಂಬ ಹೆಸರನ್ನು ಇಡಲಾಗಿದೆ. ಬೆಂಗಳೂರು ಟೀಮ್ ಓನರ್ ಆಗಿರುವ ಕಿಚ್ಚ ತಂಡಕ್ಕೆ ಬೆಂಗಳೂರು ಟೀಮ್ ಎಂದೇ ಹೆಸರಿಡುತ್ತಾರೆ ಎಂದು ಸುದೀಪ್ ಭಾವಿಸಿದ್ದರು. ಆದರೆ ಕಿಚ್ಚಾಸ್ ಕಿಂಗ್ಸ್ ಎಂದು ಹೆಸರಿಟ್ಟಿದ್ದಕ್ಕೆ ಸುದೀಪ್ ಖುಷಿಯಾಗಿದ್ದಾರೆ. ಈ ಮೂಲಕ ಸಿನಿಮಾದಾಚೆಯೂ ಕಿಚ್ಚ ಹೆಜ್ಜೆ ಇಟ್ಟಿದ್ದಾರೆ. ಬೆಂಗಳೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸುದೀಪ್ ಓನರ್‌ಶಿಪ್ ಕುರಿತು ಮನಬಿಚ್ಚಿ ಮಾತನಾಡಿದ್ದಾರೆ. ಚಿತ್ರರಂಗದಲ್ಲಿ ಮಾಡಲಾಗುವ ಆಟಕ್ಕೆ ಈ ರೇಸ್ ಹೋಲಿಕೆ ಮಾಡಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೇ ಈ ರೇಸ್ ಸುಲಭದ್ದಲ್ಲ ಎಂದಿದ್ದಾರೆ.



ರೇಸ್‌ಕಾರ್‌ನಲ್ಲಿ ಕೂರುವ ಆಸೆ ಎಲ್ಲರಿಗೂ ಇರುತ್ತೆ, ಆದರೆ ಓನರ್ ಆಗಿದ್ದರೂ ಸುದೀಪ್‌ಗೆ ಕಾರ್‌ನೊಳಗೆ ಕೂರುವ ಅವಕಾಶ ಇಲ್ಲ ಲೈಸೆನ್ಸ್ ಇದ್ದವರು ಮಾತ್ರ ಕೂರಬೇಕಾಗುತ್ತೆ ಕರಾರುವಕ್ಕಾಗಿ ಹೇಳಿದ್ದಾರೆ. ಅಂದಹಾಗೆ ಇಂಡಿಯನ್ ರೇಸ್ ಫೆಸ್ಟಿವಲ್‌ಗೆ ಓನರ್ ಶಿಪ್ ಆಯ್ಕೆಯನ್ನ ಬಿಡ್ಡಿಂಗ್ ಮೂಲಕವೇ ಆಯ್ಕೆ ಮಾಡಲಾಗುತ್ತದೆ. ಕಾರ್ ರೇಸ್ ಸ್ಪರ್ಧೆಗೆ ಕಿಚ್ಚ ಓನರ್ ಆಗಿರುವ ಕಾರಣ ನಿಮ್ಮ ಇಷ್ಟದ ಕಾರು ಯಾವುದು ಎಂಬ ಪ್ರಶ್ನೆಯನ್ನು ಕೇಳಲಾಯಿತು. ಅದಕ್ಕೆ ಉತ್ತರಿಸಿದ ಸುದೀಪ್ ನನ್ನ ಮೊದಲ ಕಾರ್ ಮಾರುತಿ 800. ಅದೇ ನನ್ನ ಸೂಪರ್ ಕಾರ್ ಎಂದಿದ್ದಾರೆ. ಆಗಸ್ಟ್ ತಿಂಗಳಲ್ಲಿ ರೇಸ್ ಆರಂಭವಾಗಲಿದ್ದು ಬೆಂಗಳೂರು, ದೆಹಲಿ, ಹೈದರಾಬಾದ್, ಕೋಲ್ಕತ್ತಾ, ಚೆನ್ನೈ, ಗೋವಾ ಫ್ರಾಂಚೈಸಿಗಳ ಮಧ್ಯೆ ಸ್ಪರ್ಧೆ ನಡೆಯಲಿದೆ.



# ಗೌರಮ್ಮನಾದ ಸಪ್ತಮಿ!

ಬೋಲ್ಡ್ ಫೋಟೋಗೆ ಕೆಟ್ಟ ಕಮೆಂಟ್ ಬಂದ ಬೆನ್ನಲ್ಲೇ ನಟಿ ಸಪ್ತಮಿ ಗೌಡ ಈಗ ಗೌರಮ್ಮನಂತೆ ಮೈಮುಚ್ಚಿಕೊಂಡು ಸುಂದರ ಫೋಟೋಶೂಟ್ ಮಾಡಿಸಿದ್ದಾರೆ. ಇತ್ತೀಚೆಗೆ ಸಪ್ತಮಿ ಗೌಡ ಭಾರಿ ಬೋಲ್ಡ್ ಫೋಟೋಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದರು. ಆದರೆ ಸಿನಿಮಾಗಳಲ್ಲಿ ಸಪ್ತಮಿ ಹೆಚ್ಚೆಚ್ಚು ಪಕ್ಕದ್ಮನೆ ಹುಡುಗಿ ಲುಕ್‌ನಲ್ಲಿ ಕಾಣಿಸಿಕೊಂಡಿದ್ದೇ ಹೆಚ್ಚು. ಹೀಗಿರುವಾಗ ಸಪ್ತಮಿ ಗೌಡ ಏಕಾಏಕಿ ಬೋಲ್ಡ್ ಫೋಟೋಗಳನ್ನು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಶೇರ್ ಮಾಡಿಬಿಟ್ಟಿದ್ದರು. ಈ ಫೋಟೋಗಳಿಗೆ ನೆಗೆಟಿವ್ ಕಮೆಂಟ್‌ಗಳು ಬಂದಿತ್ತು. ಆದರೆ ಸಪ್ತಮಿಯನ್ನ ಬೋಲ್ಡ್ ಲುಕ್‌ನಲ್ಲಿ ನೋಡೋಕೆ ಅಭಿಮಾನಿಗಳು ಇಷ್ಟಪಡಲಿಲ್ಲ. ಈ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ ಸಪ್ತಮಿ ಗೌಡ ಇದೀಗ ಗೌರಮ್ಮನಂತೆ ಸುಂದರ ಫೋಟೋಶೂಟ್ ಮಾಡಿಸಿದ್ದಾರೆ.

## ಬೋಲ್ಡ್ ಫೋಟೋಗೆ ಬ್ಯಾಡ್ ಕಾಮೆಂಟ್

ಮೈಕಾಣುವಂತೆ ಕ್ರಾಪ್‌ಟಾಪ್ ಧರಿಸಿ ಪೋಸ್ ಕೊಟ್ಟಿದ್ದಕ್ಕೆ ಬ್ಯಾಡ್ ಕಾಮೆಂಟ್ಸ್ ಬಂದಿದ್ದ ಹಿನ್ನೆಲೆ ಇದೀಗ ಸಲ್ವಾರ್ ಧರಿಸಿ ಸರಳ ಲುಕ್‌ನಲ್ಲಿ ಸುಂದರವಾಗಿ ಕಾಣುವಂತೆ ಸಿಂಗರಿಸಿಕೊಂಡಿದ್ದಾರೆ. ಮಿಲ್ಕಿ ವೈಟ್ ಬಣ್ಣದ ಸಲ್ವಾರ್‌ನಲ್ಲಿ ಸಿಂಧೂರವಿಟ್ಟು ಹೂಮುಡಿದು ಅಪ್ಪಟ ಕನ್ನಡತಿಯ ಲುಕ್‌ನಲ್ಲಿ ಮಿಂಚಿದ್ದಾರೆ. ಕಳೆದ ಬಾರಿ ಮಿಸ್ ಆಗಿದ್ದ ಮೆಚ್ಚುಗೆಯ ಕಾಮೆಂಟ್‌ಗಳನ್ನ ಈ ಬಾರಿ ಸಪ್ತಮಿ ಗಿಟ್ಟಿಸಿಕೊಂಡಿದ್ದಾರೆ.

# ರಶ್ಮಿಕಾ ಹೇಳಿಕೆ ವಿವಾದ



ಕೊಡವ ಸಮುದಾಯ ಎಲ್ಲರನ್ನೂ ಬೆಂಬಲಿಸಿದೆ, ಈ ಕುರಿತು ನಮ್ಮ ಸಮುದಾಯದವರು ಮಾತನಾಡುತ್ತಾರೆ ಎಂದು ಹಿರಿಯ ನಟಿ ಪ್ರೇಮ ತಿಳಿಸಿದರು. ಕೊಡವ ಸಮುದಾಯದಿಂದ ಚಿತ್ರರಂಗಕ್ಕೆ ಮೊದಲು ಬಂದಿದ್ದು ನಾನೇ ಎಂಬ ನಟಿ ರಶ್ಮಿಕಾ ಮಂದಣ್ಣ ಹೇಳಿಕೆ ಸಂಬಂಧ 'ಪಬ್ಲಿಕ್ ಟಿವಿ' ಜೊತೆಗೆ ಮಾತನಾಡಿದ ಅವರು, ನಡೆದಿರುವ ವಿಷಯದ ಬಗ್ಗೆ ಜನರು ಕಾಮೆಂಟ್ಸ್ ಮೂಲಕ ಅಭಿಪ್ರಾಯ ತಿಳಿಸುತ್ತಿದ್ದಾರೆ, ನಾನೇನು ಹೇಳಬೇಕಾಗಿಲ್ಲ. ಒಬ್ಬೊಬ್ಬರ ಭಾವನೆಗಳು ಒಂದೊಂದು ರೀತಿಯಾಗಿರುತ್ತೆ. ಅವರು ಈ ಸಮುದಾಯದ ವಿಷಯವನ್ನು ಯಾಕೆ ಮಾತನಾಡಿದ್ರೋ ನನಗೂ ಗೊತ್ತಾಗಿಲ್ಲ. ಆದರೆ ನಮ್ಮ ಸಮುದಾಯವನ್ನು ನಾನು ಬಿಟ್ಟುಕೊಡಲು ಸಾಧ್ಯವಿಲ್ಲ ಎಂದರು.

ಕನ್ನಡ ಚಿತ್ರರಂಗಕ್ಕೆ ಕೊಡವ ಸಮುದಾಯದಿಂದ ನನಗಿಂತ ಮುಂಚೆ ಚಾಮರಾಜಪೇಟೆ ಮೂಲದ ಶಶಿಕಲಾ ಎಂಬುವವರು ಬಂದಿದ್ದರು. ಅವರು ಪೋಷಕ ಪಾತ್ರದಲ್ಲಿ ಮೊದಲು ಕಾಣಿಸಿಕೊಂಡಿದ್ದರು. ಅದಾದ ಬಳಿಕ ನಾನು ನಟಿಯಾಗಿ ಬಂದೆ. ನಂತ್ರ ಕೊಡವ ಸಮುದಾಯದ ಹಲವಾರು ಜನರು ಚಿತ್ರರಂಗಕ್ಕೆ ಬಂದಿದ್ದಾರೆ ಎಂದು ಹೇಳಿದರು. ನಟಿ ರಶ್ಮಿಕಾ ಮಂದಣ್ಣ ಹೇಳಿಕೆ ಕುರಿತು ಮಾತನಾಡಲು ನಮ್ಮ ಕೊಡವ ಸಮುದಾಯವಿದೆ, ಅವರು ಚರ್ಚೆ ಮಾಡಿ, ಮಾತನಾಡುತ್ತಾರೆ. ಈ ಬಗ್ಗೆ ಮಾತಾಡುವಷ್ಟು ದೊಡ್ಡವಳು ನಾನಲ್ಲ. ಅಷ್ಟೊಂದು ದೊಡ್ಡ ವ್ಯಕ್ತಿಯೂ ನಾನಲ್ಲ. ನನಗಿನ್ನೂ ಕಲಿಯೋಕೆ ತುಂಬಾ ಇದೆ. ಆದರೆ ಮೊದಲಿನಿಂದಲೂ ಕೊಡವ ಸಮುದಾಯದವರು ಎಲ್ಲರನ್ನೂ ಬೆಂಬಲಿಸಿದ್ದಾರೆ ಎಂದರು.

ಈಗಿನವರ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ನಾನು ಮೊದಲಿನಿಂದಲೂ ನನಗೆ ಕೊಟ್ಟಿರುವ ಪಾತ್ರವನ್ನು ಸರಿಯಾಗಿ ನಿಭಾಯಿಸಿಕೊಂಡು ಬಂದಿದ್ದೇನೆ. ಅದರ ಹೊರತಾಗಿ ನಿರ್ದೇಶಕರಿಗೆ, ನಿರ್ಮಾಪಕರಿಗೆ ಯಾವತ್ತೂ ಯಾವುದೇ ರೀತಿಯಲ್ಲಿಯೂ ನೋಯಿಸಿಲ್ಲ. ಚಿತ್ರರಂಗದಲ್ಲಿ ನನಗಿಂತ ಕಲ್ಪನಾ, ಆರತಿ, ಮಂಜುಳಾ, ಭಾರತಿ ಇವರೆಲ್ಲರೂ ಅಗ್ರ ಸ್ಥಾನದಲ್ಲಿರುವ ನಟಿಯರು. ಇನ್ನೂ ನಾವೆಲ್ಲರು ರಾಜಕುಮಾರ್ ಸರ್, ವಿಷ್ಣುವರ್ಧನ್ ಸರ್ ಅವರನ್ನು ನೋಡಿಕೊಂಡು ಬೆಳೆದಿದ್ದೇವೆ. ಈಗಿನವರೂ ಬೇಗ ಬೆಳೆಯಬೇಕು, ಹಣ ಗಳಿಸಬೇಕು, ಕಾರು ತೆಗೆದುಕೊಳ್ಳಬೇಕು ಅನ್ನೋ ಮನಸ್ಥಿತಿಯಲ್ಲಿದ್ದಾರೆ.

**ಕೊಡವ ಸಮುದಾಯ ಎಲ್ಲರನ್ನೂ ಬೆಂಬಲಿಸಿದೆ**

# ಫಾರ್ಮ್ ಹೌಸ್‌ನಲ್ಲಿ ಚಾಮುಂಡಿ ಪೂಜೆ ನೆರವೇರಿಸಿದ ದರ್ಶನ್

ನಟ ದರ್ಶನ್ ಮೈಸೂರಿನ ಮನೆ ಹಾಗೂ ಫಾರ್ಮ್ ಹೌಸ್‌ನಲ್ಲಿ ಕುಟುಂಬಸ್ಥರ ಜೊತೆ ಸೇರಿ ಚಾಮುಂಡಿ ತಾಯಿ ಪೂಜೆ ನೆರವೇರಿಸಿದ್ದಾರೆ. ಎರಡನೇ ಆಷಾಡದ ಶುಕ್ರವಾರ ಹಿನ್ನಲೆ ಕುಟುಂಬಸ್ಥರ ಜೊತೆಯಲ್ಲಿ ಪೂಜೆ ನೆರವೇರಿಸಿದ್ದಾರೆ. ಪ್ರತಿ ವರ್ಷ ಆಷಾಢ ಮಾಸದಲ್ಲಿ ಚಾಮುಂಡಿ ಹಬ್ಬ ಮಾಡುವ ನಟ ದರ್ಶನ್, ಈ ಭಾರಿ ಕುಟುಂಬಸ್ಥರು ಜೊತೆಯಲ್ಲಿ ಚಾಮುಂಡಿ ತಾಯಿ ಪೂಜೆಯಲ್ಲಿ ಭಾಗಿಯಾಗಿದ್ದರು. ಮೈಸೂರಿನ ಸಿದ್ಧಾರ್ಥ ಲೇಔಟ್‌ನಲ್ಲಿ ನಿವಾಸದಲ್ಲಿ ತಾಯಿ ಮೀನಾ ತೂಗುದೀಪ, ಪತ್ನಿ ಹಾಗೂ ಸಹೋದರರೊಂದಿಗೆ ಪೂಜೆ ನೆರವೇರಿಸಿದ್ದಾರೆ. ಪ್ರತಿ ವರ್ಷ ಸ್ನೇಹಿತರ ಜೊತೆ ಫಾರಂ ಹೌಸ್‌ನಲ್ಲಿ ಚಾಮುಂಡಿ ಹಬ್ಬ ಮಾಡುತ್ತಿದ್ದರು. ಈ ಬಾರಿ ಚಾಮುಂಡಿ ಬೆಟ್ಟಕ್ಕೆ ಕುಟುಂಬಸ್ಥರ ಜೊತೆ ಬಂದು ಪೂಜೆ ನೆರವೇರಿಸಿದರು.



ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಕೇಸ್‌ನಲ್ಲಿ ಜಾಮೀನಿನ ಮೇಲಿರುವ ದರ್ಶನ್‌ಗೆ, ಇತ್ತೀಚೆಗೆ ಸಿನಿಮಾ ಶೂಟಿಂಗ್‌ಗಾಗಿ ವಿದೇಶಕ್ಕೆ ತೆರಳಲು 57ನೇ ಸಿಸಿಹೆಚ್ ಕೋರ್ಟ್ ಅನುಮತಿ ನೀಡಿತ್ತು. ಜೂನ್ 1ರಿಂದ 25ರವರೆಗೆ ಡೆವಿಲ್ ಶೂಟಿಂಗ್‌ಗಾಗಿ ವಿದೇಶಕ್ಕೆ ತೆರಳಲು ಅನುಮತಿ ನೀಡಲಾಗಿತ್ತು.

# ಗಾಳಿಯಲ್ಲಿ ಬಟ್ಟೆ ಹಾರಿಸುವ ರೀಲ್ಸ್‌ಗೆ ನಿವಿ ಅಂಬಾಸಿಡರ್

ಸೋಶಿಯಲ್ ಮೀಡಿಯಾದಿಂದಲೇ ಫೇಮಸ್ ಆಗಿರುವ ಬಿಗ್ ಬಾಸ್ ಮಾಜಿ ಸ್ಪರ್ಧಿ ನಿವೇದಿತಾ ಗೌಡ ಇನ್‌ಸ್ಟಾನಲ್ಲಿ ವಾರಕ್ಕೆರಡು ರೀಲ್ಸ್ ಶೇರ್ ಮಾಡದಿದ್ರೆ ನಿದ್ರೆನೇ ಮಾಡೋದಿಲ್ಲ. ಇದೀಗ ನಿವಿ ಮತ್ತೆ ಬೋಲ್ಡ್ ಲುಕ್‌ನ ವಿಡಿಯೋ ಶೇರ್ ಮಾಡಿದ್ದು ಎಂದಿನಂತೆ ಕಾಮೆಂಟ್ಸ್‌ಗಳಿಗೆ ಡೋಂಟ್ ಕೇರ್ ಅಂದಿದ್ದಾರೆ. ಮತ್ತೆ ಬೋಲ್ಡ್ ಅವತಾರದಲ್ಲಿ ಫಾಲೋವರ್ಸ್‌ಗಳಿಗೆ ದರ್ಶನ ಕೊಟ್ಟಿದ್ದು, ಪಡ್ಡೆಗಳ ನಿದ್ದೆಗೆ ಕೊಳ್ಳಿಯಿಟ್ಟಿದ್ದಾರೆ. ಎಂದಿನಂತೆ ಅರ್ಧ ತುಂಡು ಬಟ್ಟೆಯಲ್ಲಿ ರೀಲ್ಸ್ ಮಾಡಿದ್ದಾರೆ. ಆ ಸ್ಕರ್ಟ್ ಗಾಳಿಯಲ್ಲಿ ಹಾರುವ ವಿಡಿಯೋವನ್ನ ಹಂಚಿಕೊಂಡಿದ್ದಾರೆ. ಬೈಯುತ್ತಲೇ ನಿವೇದಿತಾ ರೀಲ್ಸ್‌ಗೆ ಲೈಕ್ ಒತ್ತುತ್ತಾರೆ. ಪರಿಣಾಮ ಗಂಟೆಗೆ ಸಾವಿರಾರು ಲೈಕ್ಸ್, ಕಾಮೆಂಟ್ಸ್‌ಗಳು ಬಂದಿವೆ. ಗಾಳಿಯಲ್ಲಿ ಬಟ್ಟೆ ಹಾರುವ ರೀಲ್ಸ್ ಟ್ರೆಂಡ್‌ಗೆ ನಿವೇದಿತಾ ಗೌಡ ಅಂಬಾಸಿಡರ್ ಎನ್ನುತ್ತಿದ್ದಾರೆ.

**ಸಾವಿರಾರು ಲೈಕ್ಸ್ ಕಾಮೆಂಟ್ಸ್‌ಗಳು**



# ರಾಪಿಡ್ ಪ್ರಶಸ್ತಿ ಗೆದ್ದ ವಿಶ್ವ ಚಾಂಪಿಯನ್

**ಜಾಗ್ರೆಬ್ (ಕ್ರೊಯೇಷಿಯಾ):** ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಶುಕ್ರವಾರ ನಡೆದ ಸೂಪರ್ ಯುನೈಟೆಡ್ ರಾಪಿಡ್ ಬ್ಲಿಟ್ಜ್ ಚೆಸ್ ಟೂರ್ನಿಯ ರಾಪಿಡ್ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಮತ್ತೊಂದು ಕಿರೀಟವನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಈ ಸ್ಪರ್ಧೆಯು 2025ರ ಗ್ರ್ಯಾಂಡ್ ಚೆಸ್ ಟೂರಿನ ಭಾಗವಾಗಿದ್ದು, ಕ್ರೊಯೇಷಿಯಾದ ಜಾಗ್ರೆಬ್‌ನಲ್ಲಿ ನಡೆಯುತ್ತಿದೆ. 19 ವರ್ಷದ ಭಾರತೀಯ ಆಟಗಾರ ನಿಖರತೆ, ಸಂಯಮ ಮತ್ತು ಅದ್ಭುತ ಫಾರ್ಮ್ ಪ್ರದರ್ಶಿಸಿ ಸಂಭಾವ್ಯ 18 ಅಂಕಗಳಲ್ಲಿ 14 ಅಂಕಗಳೊಂದಿಗೆ ಟೂರ್ನಮೆಂಟ್‌ನಲ್ಲಿ ಅಗ್ರಸ್ಥಾನ ಪಡೆದರು.

**ಸತತ ಐದು ಗೆಲುವು:** ಗುಕೇಶ್ ಟೂರ್ನಮೆಂಟ್‌ನಲ್ಲಿ ಉತ್ತಮ ಆರಂಭ ಪಡೆದಿರಲಿಲ್ಲ. ಮೊದಲ ಸುತ್ತಿನಲ್ಲಿ ಜಾನ್-ಕ್ರಿಜ್ಟೋಫ್ ಡುಡಾ ವಿರುದ್ಧ ಸೋತಿದ್ದರು. ಆದಾಗ್ಯೂ, ಬಳಿಕ ಅವರು ಸತತ ಐದು ಜಯಗಳೊಂದಿಗೆ, ಟೂರ್ನಿಯಲ್ಲಿ ಹಾದಿಯನ್ನೇ ಬದಲಿಸಿಕೊಂಡರು. ಇದರಲ್ಲಿ 4ನೇ ಸುತ್ತಿನಲ್ಲಿ ವಿಶ್ವದ ನಂ. 1 ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧ ಅದ್ಭುತ ಗೆಲುವು ಸೇರಿದಂತೆ, ಈ ಫಲಿತಾಂಶವು ಅವರನ್ನು ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಭದ್ರವಾಗಿ ಇರಿಸಿತು. ಅಂತಿಮ ಸುತ್ತಿನಲ್ಲಿ ಯುನೈಟೆಡ್ ಸ್ಟೇಟ್ಸ್‌ನ ವೆಸ್ಲಿ ಸೋ ವಿರುದ್ಧ ಜಯ ಗಳಿಸುವ ಮೂಲಕ ಅವರು ರಾಪಿಡ್ ವಿಭಾಗದಲ್ಲಿ ಅಭಿಯಾನವನ್ನು ಕೊನೆಗೊಳಿಸಿದರು. ಗುಕೇಶ್ 36-ನಡೆಗಳ ಸಮನ್ವಯದ ಪ್ರದರ್ಶನ ತೋರಿದರು. ಈ ಮೂಲಕ ಎರಡು ಪೂರ್ಣ ಅಂಕಗಳು ಲಭಿಸಿದವು. ಟೂರ್ನಿಯಲ್ಲಿ ಅವರ ಅದ್ಭುತ ಓಟದಲ್ಲಿ, ಆರು ಗೆಲುವುಗಳು, ಎರಡು ಡ್ರಾಗಳು ಮತ್ತು ಒಂದು ಸೋಲು ಕಂಡರು.

**ಅಂತಿಮ ದಿನ ಗುಕೇಶ್‌ಗೆ ರಾಪಿಡ್ ಪ್ರಶಸ್ತಿ:** 3ನೇ ದಿನದಂದು ಗುಕೇಶ್ ಅವರ ಅಭಿಯಾನವು ಡಚ್ ಗ್ರ್ಯಾಂಡ್ ಮಾಸ್ಟರ್ ಅನೀಶ್ ಗಿರಿ ವಿರುದ್ಧ ಡ್ರಾದೊಂದಿಗೆ ಪ್ರಾರಂಭವಾಯಿತು. ಆಟದ ಮಧ್ಯಮ ಭಾಗವನ್ನು ತಲುಪಿದಾಗ, ಇಬ್ಬರೂ ಎದುರಾಳಿಗಳು ಕೈಕುಲುಕಿದರು. ದಿನದ ಎರಡನೇ ಪಂದ್ಯದಲ್ಲಿ, ಕ್ರೊಯೇಷಿಯಾದ ಇವಾನ್ ಅರಿಕ್ ವಿರುದ್ಧ 87-ನಡೆಗಳ ಮುಖಾಮುಖಿಯಲ್ಲಿ ಗುಕೇಶ್ ಮಾರ್ಷಲ್ ಗ್ಯಾಂಬಿಟ್ ಅನ್ನು ಬಳಸಿಕೊಂಡರು. ಈ ಮುಖಾಮುಖಿಯೂ ಕೂಡ ರೋಚಕ ಡ್ರಾದಲ್ಲಿ ಕೊನೆಗೊಂಡಿತು.

**ಕಾರ್ಲ್‌ಸನ್ ವಿಫಲ:** ವಿಶ್ವದ ನಂ. 1 ಮ್ಯಾಗ್ನಸ್ ಕಾರ್ಲ್‌ಸನ್ ತನ್ನ ಆರಂಭಿಕ ಪಂದ್ಯದಲ್ಲಿ ಫ್ಯಾಬಿಯಾನೊ ಕರುವಾನಾ ಅವರನ್ನು ಸೋಲಿಸುವ ಮೂಲಕ ಉತ್ತಮ ಆರಂಭದೊಂದಿಗೆ ದಿನವನ್ನು ಪುನರಾರಂಭಿಸಿದರು. ಆದರೆ ನೋಡಿರ್ಬೆಕ್ ಅಬ್ದುಸತ್ತೊರೊವ್ ವಿರುದ್ಧದ ಮುಂದಿನ ಮುಖಾಮುಖಿಯಲ್ಲಿ ಡ್ರಾ ಸಾಧಿಸಿದ್ದರಿಂದ ಅಗ್ರ ಸ್ಪರ್ಧಿಗಳೊಂದಿಗೆ ಅಂತರವನ್ನು ಕಡಿಮೆ ಮಾಡುವ ಅವಕಾಶವನ್ನು ಕಳೆದುಕೊಂಡರು.

ಟೂರ್ನಮೆಂಟ್‌ನಲ್ಲಿ ಗುಕೇಶ್ ಅವರನ್ನು ಸೋಲಿಸಿದ್ದ ಏಕೈಕ ಆಟಗಾರ ದುಡಾ, ಅಂಕಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದರು. ಭಾರತದ ಮತ್ತೋರ್ವ ಚಾಂಪಿಯನ್ ಆಟಗಾರ ಆರ್. ಪ್ರಗ್ನಾನಂದ ಒಂದೇ ಒಂದು ಜಯದೊಂದಿಗೆ ಟೂರ್ನಿಯನ್ನು ಮುಗಿಸಿದರು. ಅರಿಕ್ ವಿರುದ್ಧ ಕೇವಲ ಒಂದು ಗೆಲುವು ಮಾತ್ರ ಗಳಿಸುವಲ್ಲಿ ಅವರು ಯಶಸ್ವಿಯಾದರು. ಒಂಬತ್ತು ಪಂದ್ಯಗಳಲ್ಲಿ ಏಳನ್ನು ಡ್ರಾ ಮಾಡಿಕೊಂಡು ಒಂಬತ್ತು ಅಂಕ ಗಳಿಸಿದರು. ಪಂದ್ಯಾವಳಿಯ ಬ್ಲಿಟ್ಜ್ ವಿಭಾಗವು ಶನಿವಾರದಿಂದ ಪ್ರಾರಂಭವಾಗಿ ಜುಲೈ 6ರಂದು ಮುಕ್ತಾಯಗೊಳ್ಳಲಿದೆ.

**ಗ್ರ್ಯಾಂಡ್ ಚೆಸ್ ಟೂರ್ 2025**




# ಇಂಗ್ಲೆಂಡ್‌ನಲ್ಲಿ ಇತಿಹಾಸ ಸೃಷ್ಟಿಸಿದ ಸಿರಾಜ್?

ಆಂಡ್ರಸನ್ - ತೆಂಡೂಲ್ಕರ್ ಟ್ರೋಫಿ ಭಾಗವಾಗಿ ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವೆ ಟೆಸ್ಟ್ ಸರಣಿ ನಡೆಯುತ್ತಿದೆ. ಎಡ್ಜ್‌ಬಾಸ್ಟನ್‌ನಲ್ಲಿ ನಡೆಯತ್ತಿರುವ ಎರಡನೇ ಪಂದ್ಯದಲ್ಲಿ ಭಾರತ ಮತ್ತು ಇಂಗ್ಲೆಂಡ್ ಎರಡೂ ತಂಡಗಳ ಮೊದಲ ಇನ್ನಿಂಗ್ಸ್ ಮುಕ್ತಾಯಗೊಂಡಿದೆ. ಭಾರತ ತಂಡ 180 ರನ್‌ಗಳ ಮುನ್ನಡೆಯೊಂದಿಗೆ ಎರಡನೇ ಇನ್ನಿಂಗ್ಸ್ ಪ್ರಾರಂಭಿಸಿದೆ. ಸದ್ಯ ಒಂದು ವಿಕೆಟ್ ನಷ್ಟಕ್ಕೆ 64 ರನ್ ಗಳಿಸಿದೆ. ಕೆಎಲ್ ರಾಹುಲ್ 28 ರನ್ ಮತ್ತು ಕರುಣ್ ನಾಯರ್ 7 ರನ್ ಗಳಿಸಿ ಅಜೇಯರಾಗಿ ಕ್ರೀಸ್‌ನಲ್ಲಿ ಉಳಿದಿದ್ದಾರೆ. ಇದರೊಂದಿಗೆ ಟೀಮ್ ಇಂಡಿಯಾ 244 ರನ್‌ಗಳ ಮುನ್ನಡೆ ಸಾಧಿಸಿದೆ.

ಇದಕ್ಕೂ ಮೊದಲು, ಮೊಹಮ್ಮದ್ ಸಿರಾಜ್ ಮೂರನೇ ದಿನದಂದು ಇಂಗ್ಲೆಂಡ್ ವಿರುದ್ಧದ ಮೊದಲ ಇನ್ನಿಂಗ್ಸ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದರು. ಅವರು 6 ವಿಕೆಟ್‌ಗಳನ್ನು ಉರುಳಿಸುವ ಮೂಲಕ ಇಂಗ್ಲೆಂಡ್ ಅನ್ನು 407 ರನ್‌ಗಳಿಗೆ ಕಟ್ಟಿಹಾಕುವಲ್ಲಿ ತಂಡಕ್ಕೆ ಸಹಾಯ ಮಾಡಿದರು. ಇದರೊಂದಿಗೆ 32 ವರ್ಷಗಳ ಬಳಿಕ ಇಂಗ್ಲೆಂಡ್‌ನಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ.

**6 ವಿಕೆಟ್ ಪಡೆದು ದಾಖಲೆ ನಿರ್ಮಿಸಿದ ಸಿರಾಜ್:** 32 ವರ್ಷಗಳ ನಂತರ ಇಂಗ್ಲೆಂಡ್ ನೆಲದಲ್ಲಿ 6 ವಿಕೆಟ್ ಪಡೆದ ಮೊದಲ ಬೌಲರ್ ಎಂಬ ಕೀರ್ತಿಗೆ ಸಿರಾಜ್ ಪಾತ್ರರಾಗಿದ್ದಾರೆ. ಇದಲ್ಲದೇ ಅಮರ್ ಸಿಂಗ್, ಚೇತನ್ ಶರ್ಮಾ, ಇಶಾಂತ್ ಶರ್ಮಾ ಮತ್ತು ಭುವನೇಶ್ವರ್ ಕುಮಾರ್ ನಂತರ ಇಂಗ್ಲೆಂಡ್ ನೆಲದಲ್ಲಿ ಐದು ವಿಕೆಟ್ ಪಡೆದ 5ನೇ ಭಾರತೀಯ ವೇಗದ ಬೌಲರ ಎನಿಸಿಕೊಂಡಿದ್ದಾರೆ. ಇದರೊಂದಿಗೆ, 1993ರ ಬಳಿಕ ಎಡ್ಜ್‌ಬಾಸ್ಟನ್‌ನಲ್ಲಿ 6 ವಿಕೆಟ್ ಪಡೆದ ಮೊದಲ ಪ್ರವಾಸಿ ಬೌಲರ್ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ. ಸಿರಾಜ್ ಅವರ ವೃತ್ತಿಜೀವನದ ನಾಲ್ಕನೇ ಐದು ವಿಕೆಟ್ ಗೊಂಚಲು ಇದಾಗಿದ್ದು, 2024 ರಲ್ಲಿ ಕೇಪ್ ಟೌನ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 15 ರನ್‌ಗೆ 6 ವಿಕೆಟ್ ಪಡೆದಿದ್ದರು. ಇದೀಗ ಅವರ ಎರಡನೇ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ತೋರಿದ್ದಾರೆ.

**32 ವರ್ಷಗಳ ಬಳಿಕ ಇದೇ ಮೊದಲು!**


ಸಿರಾಜ್‌ಗೆ ಆಕಾಶ್ ಸಾಥ್: ಮೊಹಮ್ಮದ್ ಸಿರಾಜ್‌ಗೆ ಆಕಾಶ್ ದೀಪ್ ಕೂಡ ಉತ್ತಮ ಸಾಥ್ ನೀಡಿದರು. ತಮ್ಮ ಅತ್ಯುತ್ತಮ ಬೌಲಿಂಗ್ ಮೂಲಕ 4 ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ಎರಡನೇ ದಿನ ಓಲಿ ಪಾಪ್ ಮತ್ತು ಬೆನ್ ಡಕೇಟ್ ಅವರ ವಿಕೆಟ್ ಉರುಳಿಸಿದ್ದ ಆಕಾಶ್ ನಿನ್ನೆ ದಿನ ಕ್ರಿಸ್ ವೋಕ್ಸ್ ಮತ್ತು ಹ್ಯಾರಿ ಬ್ರೂಕ್ ಅವರ ವಿಕೆಟ್ ಪಡೆದು ಮಿಂಚಿದರು.

**ಸ್ಮಿತ್ - ಬ್ರೂಕ್ ತ್ರಿಶತಕ:** ಇಂಗ್ಲೆಂಡ್‌ನ ಮೊದಲ ಇನ್ನಿಂಗ್ಸ್ 407 ರನ್‌ಗಳಿಗೆ ಕೊನೆಗೊಂಡಿತು. 77/3 ರನ್‌ಗಳಿಂದ ಇಂಗ್ಲೆಂಡ್ ಮೂರನೇ ದಿನದಾಟ ಪ್ರಾರಂಭಿಸಿತು. ತಂಡವು 84 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು.

ಈ ವೇಳೆ, 200 ರನ್ ಒಳಗೆ ಇಂಗ್ಲೆಂಡ್ ಆಲೌಟ್ ಆಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ, ಜೇಮೀ ಸ್ಮಿತ್ ಮತ್ತು ಹ್ಯಾರಿ ಬ್ರೂಕ್ ಆರನೇ ವಿಕೆಟ್‌ಗೆ 303 ರನ್‌ಗಳನ್ನು ಸೇರಿಸುವ ಮೂಲಕ ತಂಡವನ್ನು ಸಂಕಷ್ಟದಿಂದ ಪಾರು ಮಾಡಿ ಸ್ಕೋರ್ 387ಕ್ಕೆ ಕೊಂಡೊಯ್ದರು. ಜೊತೆಗೆ ಫಾಲೋ-ಆನ್ ಭೀತಿಯಿಂದ ತಂಡವನ್ನು ಪಾರು ಮಾಡಿದರು.

# ನೀರಜ್ ಚೋಪ್ರಾ ಕ್ಲಾಸಿಕ್‌ಗೆ ಕಂಠೀರವ ಕ್ರೀಡಾಂಗಣ ಸಜ್ಜು





ಭಾರತೀಯ ಅಥ್ಲೆಟಿಕ್ಸ್ ಪಯಣದ ಐತಿಹಾಸಿಕ ಕ್ಷಣಕ್ಕೆ ಬೆಂಗಳೂರು ಸಜ್ಜಾಗಿದೆ. ದೇಶದ ಮೊದಲ ಅಂತಾರಾಷ್ಟ್ರೀಯ ಜಾವೆಲಿನ್ ಸ್ಪರ್ಧೆ, ನೀರಜ್ ಚೋಪ್ರಾ ಕ್ಲಾಸಿಕ್ - 2025 ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಒಂದು ದಿನದ ಈ ಕ್ರೀಡಾಕೂಟಕ್ಕೆ ಒಲಿಂಪಿಕ್ಸ್ ಮತ್ತು ವಿಶ್ವ ಚಾಂಪಿಯನ್ ನೀರಜ್ ಚೋಪ್ರಾ ಅವರ ಹೆಸರನ್ನು ಇಡಲಾಗಿದೆ.

ನೀರಜ್ ಚೋಪ್ರಾ ಮತ್ತು ಜೆಎಸ್‌ಡಬ್ಲ್ಯೂ ಸ್ಪೋರ್ಟ್ಸ್ ಜಂಟಿಯಾಗಿ ಆಯೋಜಿಸಿರುವ ಎನ್‌ಸಿ ಕ್ಲಾಸಿಕ್‌ಗೆ ವರ್ಲ್ಡ್ ಅಥ್ಲೆಟಿಕ್ಸ್ ಹಾಗೂ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ ಅನುಮೋದಿಸಿವೆ. ವಿಶ್ವದ ಖ್ಯಾತ ಜಾವೆಲಿನ್ ಎಸೆತಗಾರರು ಮತ್ತು ಭಾರತದ ಉದಯೋನ್ಮುಖ ಪ್ರತಿಭೆಗಳನ್ನ ಒಗ್ಗೂಡಿಸುತ್ತಿರುವ ಎನ್‌ಸಿ ಕ್ಲಾಸಿಕ್ ವೇದಿಕೆ, ಜಾವೆಲಿನ್ ಕ್ರೀಡೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ. ನೀರಜ್ ಚೋಪ್ರಾರ ಸಾಧನೆಯ ಮೂಲಕ ಜಾವೆಲಿನ್ ಕುರಿತು ಮತ್ತಷ್ಟು ಆಸಕ್ತಿ ಹೆಚ್ಚಿಸಿಕೊಂಡಿರುವ ಭಾರತೀಯ ಯುವ ಪ್ರತಿಭೆಗಳು ಜರ್ಮನಿಯ ಥಾಮಸ್ ರೋಹ್ಲರ್, ಕೀನ್ಯಾದ ಜೂಲಿಯಸ್ ಯೆಗೊ, ಯುಎಸ್‌ಎನ ಕರ್ಟಿಸ್ ಥಾಂಪ್ಸನ್, ಜೆಕ್ ರಿಪಬ್ಲಿಕ್‌ನ ಮಾರ್ಟಿನ್ ಕೊನೆಕ್ನಿ, ಬ್ರೆಜಿಲ್‌ನ ಲೂಯಿಜ್ ಮೌರಿಸಿಯೊ ಡಾ ಸಿಲ್ವಾ, ಪೋಲೆಂಡ್‌ನ ಸಿಪ್ರಿಯನ್ ಮ್ರ್ಜಿಗ್ಲೋಡ್ ಹಾಗೂ ಏಷ್ಯಾ ಉಪ ಖಂಡದ ಮತ್ತೋರ್ವ ತಾರೆಯಾಗಿರುವ ಶ್ರೀಲಂಕಾದ ರುಮೇಶ್ ಪತಿರಾಜ್ ಅವರೊಂದಿಗೆ ಕಣಕ್ಕಿಳಿಯಲಿದ್ದಾರೆ.

ಈವೆಂಟ್‌ನಲ್ಲಿ ಭಾಗಿ ಆಗುತ್ತಿರುವ ಭಾರತೀಯ ಅಥ್ಲೀಟ್‌ಗಳು

ನೀರಜ್ ಚೋಪ್ರಾ: ಒಲಿಂಪಿಕ್ಸ್ ಚಿನ್ನದ ಪದಕ ಗೆದ್ದ ದೇಶದ ಮೊದಲ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್. ವಿಶ್ವ ಚಾಂಪಿಯನ್, ಡೈಮಂಡ್ ಲೀಗ್ ವಿಜೇತ ಆಗಿದ್ದಾರೆ.

# ಇಂಗ್ಲೆಂಡ್‌ನಲ್ಲಿ ಸ್ಫೋಟಕ ಶತಕ ಸಿಡಿಸಿದ ವೈಭವ್

ಭಾರತದ ಅಂಡರ್-19 ಕ್ರಿಕೆಟ್ ತಂಡವು ಪ್ರಸ್ತುತ ಇಂಗ್ಲೆಂಡ್ ಪ್ರವಾಸದಲ್ಲಿದ್ದು, ಅಲ್ಲಿ ಆತಿಥೇಯ ಇಂಗ್ಲೆಂಡ್ ಅಂಡರ್-19 ತಂಡದ ವಿರುದ್ಧದ ಐದು ಪಂದ್ಯಗಳ ಯೂತ್ ಏಕದಿನ ಸರಣಿಯನ್ನು ಆಡುತ್ತಿದೆ. ಈ ಸರಣಿಯಲ್ಲಿ ಭಾರತದ 14 ವರ್ಷದ ಯುವ ಬ್ಯಾಟ್ಸ್‌ಮನ್ ವೈಭವ್ ಸೂರ್ಯವಂಶಿ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಸಂಚಲನ ಸೃಷ್ಟಿಸುತ್ತಿದ್ದಾರೆ. ಸರಣಿಯ ಮೊದಲ 3 ಪಂದ್ಯಗಳಲ್ಲಿ ಸಿಡಿಲಬ್ಬರದ ಬ್ಯಾಟಿಂಗ್ ಮಾಡಿದ್ದ ವೈಭವ್ ಇದೀಗ ನಾಲ್ಕನೇ ಏಕದಿನ ಪಂದ್ಯದಲ್ಲಿ 190 ಕ್ಕಿಂತ ಹೆಚ್ಚು ಸ್ಟ್ರೈಕ್ ರೇಟ್‌ನೊಂದಿಗೆ ಬಿರುಗಾಳಿಯ ಶತಕ ಬಾರಿಸಿ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಈ ಸರಣಿಯಲ್ಲಿ ಇಲ್ಲಿಯವರೆಗೆ, ಅವರು ಪ್ರತಿ ಪಂದ್ಯದಲ್ಲೂ 40 ರನ್‌ಗಳ ಗಡಿ ದಾಟಿರುವುದು ಅವರ ಅದ್ಭುತ ಫಾರ್ಮ್‌ಗೆ ಉದಾಹರಣೆಯಾಗಿದೆ. ಶತಕದ ನಂತರವೂ ಹೊಡಿಬಡಿ ಆಟವನ್ನು ಮುಂದುವರೆಸಿದ ವೈಭವ್ 143 ರನ್‌ಗಳಿಗೆ ತಮ್ಮ ಇನ್ನಿಂಗ್ಸ್‌ಗೆ ಅಂತ್ಯಹಾಡಿದರು.




**ವೇಗದ ಶತಕ ಬಾರಿಸಿದ ವೈಭವ್ :** ವೋರ್ಸೆಸ್ಟರ್‌ನ ನ್ಯೂ ರೋಡ್ ಮೈದಾನದಲ್ಲಿ ನಡೆದ ನಾಲ್ಕನೇ ಯೂತ್ ಏಕದಿನ ಪಂದ್ಯದಲ್ಲಿ ವೈಭವ್ ಸೂರ್ಯವಂಶಿ ಪಂದ್ಯದ ಆರಂಭದಿಂದಲೇ ಹೊಡಿಬಡಿ ಆಟಕ್ಕೆ ಮುಂದಾದರು. ಹೀಗಾಗಿ ವೈಭವ್ ಕೇವಲ 52 ಎಸೆತಗಳಲ್ಲಿ 10 ಬೌಂಡರಿಗಳು ಮತ್ತು 7 ಸಿಕ್ಸರ್‌ಗಳ ಸಹಿತ ಶತಕ ಪೂರೈಸಿದರು.

**10 ಬೌಂಡರಿಗಳು ಮತ್ತು 7 ಸಿಕ್ಸರ್**




Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966